ದೇವ್ರೋಲಿ : ಅಳಲೂ ಕಣ್ಣೀರಿಲ್ಲ

ದೇವ್ರೋಲಿ ಆಯ್ತು. 24 ಹರಿಜನರನ್ನು ಉತ್ತರ ಪ್ರದೇಶದ ದೇವ್ರೋಲಿಯಲ್ಲಿ ಕೊಲ್ಲಲಾಯಿತು. ಜಾತಿಮತ ಮತ್ತು ಅಸಮಾನತೆಯ ಇಂಡಿಯಾವು ಅಸಮರ್ಥ ಸರ್ಕಾರವು ನಮ್ಮ ಜನರನ್ನು ಕೊಲ್ಲಿಸಿದೆ. ನಮ್ಮ ಜನರ ರಕ್ತವನ್ನು ಕುಡಿದೂ ಈ ದೇಶ ತನಗೇನೂ ಆಗಿಲ್ಲ ಎಂಬಂತೆ ಸಮಾದಾನವಾಗಿ ಇದುವರೆಗೂ ನಡೆದುಕೊಂಡು ಬಂದಂತೆಯೇ ನಡೆದಿದೆ.

ನಮ್ಮ ಪ್ರಾಣತೆಗೆಯುವ ಸಂಚಿನಲ್ಲಿ ಅಸಮಾನತೆ ಬೆಳೆಸುತ್ತಿರುವ ಇಂದಿರಾಗಾಂಧಿ ಇದ್ದಾಳೆ. ನಮ್ಮ ತುಳಿಯಲೆಂದೇ ಕಾಯುತ್ತಿ

ನಮ್ಮ ಮಾತು

ರುವ ಪೋಲೀಸರು ಇದ್ದಾರೆ. ನಮ್ಮ ಕೊಲೆಗಳು ಕೊಲೆಗಳೇ ಅಲ್ಲ ಎಂದು ತಳ್ಳಿಹಾಕುವ ನ್ಯಾಯಾಲಯಗಳು ಇವೆ. ನಮ್ಮನ್ನು ಕೊಲ್ಲಲೂ ನಮನ್ನು ಸಹಿಸದ ಸವರ್ಣೀಯ ಜನರು ನಮ್ಮ ಅಕ್ಕಪಕ್ಕದಲ್ಲೇ ಇದ್ದಾರೆ.

ನಮಗೆ ನಮ್ಮನ್ನು ಉಳಿಸಿಕೊಳ್ಳಲು ದಾರಿಕಾಣುತ್ತಿಲ್ಲ. ದೇವ್ರೋಲಿ ಇಂಡಿಯಾ ದೇಶಕ್ಕೆ ಸಾದಾರಣ ಎನ್ನಿಸಬಹುದಾದರೂ ನಮ್ಮ ಪಾಲಿಗೆ ಅಳಲೂ ಕಣ್ಣೀರು ಬರದಷ್ಟು ದುಃಖ ಇಂಗಿಸಿದೆ. ದುಃಖವೇ ನಾವಾಗಿದ್ದೇವೆ.

ನಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಕೊಲಾವಸ್ತುಗಳಾದ ನಾವೇ ದಾರಿ ಕಂಡುಕೊಳ್ಳಬೇಕಾಗಿದೆ, ಇಷ್ಟೇ. ●

ಪಂಚಮ

ಸಂಪುಟ : 5 ಬೆಲೆ : 50 ಪೈಸೆ

ಸಂಚಿಕೆ : 19–20 ಡಿಸೆಂಬರ್ 1981

ವಿಶ್ವವಿದ್ಯಾನಿಲಯಗಳ ಕಾಮ ಪಿಶಾಚಿಗಳು

ವಿಶ್ವ ವಿದ್ಯಾನಿಲಯಗಳು ಸಮಾಜದ ಕನ್ನಡಿ ಎಂದು ಹೇಳುವುದುಂಟು. ಆದರೆ ಈ ಕನ್ನಡಿಯಲ್ಲಿ ಸಮಾಜದ ಎಲ್ಲಾ ಕೊಳಕುಗಳೂ ಕೂಡಿಕೊಂಡಿರುತ್ತವೆಂಬುದನ್ನು ಮರೆಯಬಾರದು. ನಮ್ಮದು ಪಾಳೆಯಗಾರಿ ಸಂಸ್ಕೃತಿಯ ಸಮಾಜ. ಹಳ್ಳಿಗಳಲ್ಲಿ ಜಮೀನುದಾರರು ಇರುವ ಹಾಗೆ ವಿಶ್ವವಿದ್ಯಾನಿಲಯಗಳ ಡಿಪಾರ್ಟ್‌ಮೆಂಟುಗಳಲ್ಲಿ ಪಾಳೆಯಗಾರರಿದ್ದಾರೆ. ಅವರ ಭಂಟರು, ಅವರಿಗೆ ಸೇವೆ ಸಲ್ಲಿಸುವ ಗುಲಾಮರೂ ಇರುತ್ತಾರೆ. ವಿಶ್ವವಿದ್ಯಾನಿಲಯದ ಕ್ಯಾಂಪಸ್ಸುಗಳು ನಮ್ಮ ಸಮಾಜವನ್ನು ಪ್ರತಿನಿಧಿಸುವ ಪುಟ್ಟ ಲೋಕಗಳಾಗಿವೆ. ಹಳ್ಳಿಗಳ ಪಾಳೆಯಗಾರರ ಕೈಯಲ್ಲಿ ಭೂಮಿ ಮತ್ತು ಗೂಂಡಾಗಳು ದಂಡಗಳಾದರೆ ಇವರ ಕೈಯಲ್ಲೂ ಎರಡು ಮಂತ್ರದಂಡಗಳಿವೆ. ಮೊದಲನೆಯದು ಪರೀಕ್ಷೆ ಮಾಡುವ ಅಧಿಕಾರವಾದರೆ ಎರಡನೆಯದು ಡಿಪಾರ್ಟ್‌ಮೆಂಟಿನಲ್ಲಿ ಸೀಟು, ಸ್ಕಾಲರ್‌ಶಿಪ್ ಕೊಡುವುದರಿಂದ ಉದ್ಯೋಗ ಕೊಡುವವರೆಗೆ ಇರುವ ಅಧಿಕಾರ. ಈ ಎರಡೂ ಮಂತ್ರದಂಡಗಳನ್ನು ಪಯೋಗಿಸಿಕೊಂಡು ಭ್ರಷ್ಟಾಚಾರ ಮತ್ತು ಅತ್ಯಾಚಾರ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ರಾಜೇಶ್ವರಯ್ಯ, ಪರಶಿವಮೂರ್ತಿ ಅಂಥವರ ಭ್ರಷ್ಟಾಚಾರಗಳು ಆಗಾಗ ಪತ್ರಿಕೆಯಲ್ಲಿ ಕಾಣುತ್ತಲೇ ಇರುತ್ತವೆ. ಇಲ್ಲಿ ವಿವರಿಸಿರುವುದು ಆಚಾರ್ಯರ ಅತ್ಯಾಚಾರ.

ಕುಡಿದು ಕ್ಲಾಸಿಗೂ ಬರುವ ದಡ್ಡ ಕನ್ನಡ ಅಧ್ಯಾಪಕನೊಬ್ಬ ದಲಿತ ವಿದ್ಯಾರ್ಥಿನಿಯೊಬ್ಬಳನ್ನು ಕಾಮಕೇಳಿಗೆಳೆಯುವ ಪ್ರಯತ್ನ ಪಟ್ಟದ್ದು ಧಾರವಾಡದ ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿ ಜನಜನಿತವಾದರೂ, ಅವನ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಾಗದೆ ಮುಂದೆ ಅದಕ್ಕೆ ಪ್ರಶಸ್ತಿಯೆಂಬಂತೆ ಅವನಿಗೆ ರೀಡರ್ ಹುದ್ದೆ ಸಿಕ್ಕಿದ್ದುಂಟು. ಇದು ಇತ್ತೀಚಿನ ವರ್ಷಗಳಲ್ಲಿ ನಡೆದ ಘಟನೆ. ಕರ್ನಾಟಕ ವಿಶ್ವವಿದ್ಯಾಲಯದ ಕರ್ಮಕಾಂಡದಲ್ಲಿ ಇದಕ್ಕೂ ಭಯಾನಕವಾದ ಘಟನೆಗಳು ಅಡಗಿಕೊಂಡಿವೆ.

ರಾಜ್ಯಶಾಸ್ತ್ರದ ಪ್ರಾಧ್ಯಾಪಕನೊಬ್ಬ ಚಂದ್ರಿಕಾ ಎಂಬ ವಿದ್ಯಾರ್ಥಿನಿಯೊಬ್ಬಳನ್ನು ಸಂಭೋಗಿಸಿ ಅವಳು ಗರ್ಭ ಧರಿಸಿದ್ದು ಗೊತ್ತಾದ ಮೇಲೆ ಆಸ್ಪತ್ರೆಗೆ ಒಯ್ದು ಗರ್ಭಪಾತ ಮಾಡಿಸಿದ ಆದರೆ ಸತತವಾಗಿ ರಕ್ತಸ್ರಾವವಾದದ್ದರಿಂದ ಆ ಹುಡುಗಿ ಸತ್ತುಹೋದಳು.

[ಮಧ್ಯದ ಪುಟಕ್ಕೆ]

ಪಕ್ಕದ ಚಿತ್ರ : ಚಿಲ್ಕುಂದದ ದಲಿತ ಮಹಾದೇವನ ಕೊಲೆ ತನಿಖೆಗಾಗಿ ಒತ್ತಾಯಿಸಿ ನವೆಂಬರ್ [illegible]ರಂದು ದ.ಸಂ.ಸ. ನೇತೃತ್ವದಲ್ಲಿ ಚಿಲ್ಕುಂದದಿಂದ ಹುಣಸೂರಿಗೆ ಬಂದ ಕಾಲ್ನಡಿಗೆ ಜಾಥಾ.



ಹಳ್ಳಿಗರ ಸಂಗಡ ಸಾಕ್ರಟೀಸ್ : ಜಾತಿ-ಮೈಲಿಗೆ ಮಾತುಕತೆ

ಪಂಜಾಬದ ಗುರ್ಗಾವ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದಂಥ ಎಫ್. ಎಲ್. ಬ್ರೈನ್ ಅವರು ೧೯೨೯ರಲ್ಲಿ ಪ್ರಕಟಿಸಿದ "ಸಾಕ್ರೆಟ್ ಇನ್ ಅನ್ ಇಂಡಿಯೆನ್ ವಿಲೇಜ್" ಎಂಬ ಗ್ರಂಥದಿಂದ ಈ "ಕ್ಯಾಸ್ಟ್ ಅಂಡ್ ಡೆಜಿಲಿಮೆಂಟ್" ಭಾಗವನ್ನು ತೆಗೆದುಕೊಂಡಿದೆ. ಗ್ರಂಥಕರ್ತರು ಸಾಕ್ರಟೀಸ್ ಎಂಬ ಹೆಸರಿನಿಂದ ಗ್ರಂಥದ ತುಂಬೆಲ್ಲ ಹಳ್ಳಿಗರಿಗೆ ಪ್ರಶ್ನೆಹಾಕಿ ಉತ್ತರ ಹೊರಡಿಸುತ್ತ ಹೋಗಿದ್ದಾರೆ.

ನಿತ್ಯದಂತೆ ಸಾಕ್ರಟೀಸ್ ಹಳ್ಳಿಯ ಹಿರಿಯರೊಂದಿಗೆ ಕುಳಿತಿರುವ ಸಮಯದಲ್ಲಿ ಮಾದಿಗನೊಬ್ಬ ಬಂದ. ಆಗ ಒರಟಾದ ರೀತಿಯಲ್ಲಿ ಹಳ್ಳಿಗರು ಆತನಿಗೆ ದೂರ ಕೂಡಲು ತಿಳಿಸಿದರು.

ಸಾಕ್ರೆಟೀಸ್: ಅವನು ಯಾವ ತಪ್ಪುಮಾಡಿದ್ದಾನೆಂದು ನೀವು ಹೀಗೆ ಹೇಳುತ್ತಿರುವಿರಿ?

ಹಳ್ಳಿಗರು: ಅವನು ಮಾದಿಗ ಅದಕ್ಕಾಗಿ.

ಸಾಕ್ರೆಟೀಸ್:ಅವನಿಂದ ದೂರವೇಕೆ ಕೂಡಬೇಕು?

ಹಳ್ಳಿಗರು: ಆತ ಕೆಳಜಾತಿಯವನು ಮತ್ತು ಗಲೀಜು.

ಸಾ: ಆತ ಮುಟ್ಟಿದರೆ ನಿಮಗೆ ಮೈಲಿಗೆಯಾಗುವುದೆ?

ಹ : ಹೌದು

ಸಾ : ನೀವೆಲ್ಲ ಇದೇ ಹಳ್ಳಿಯಲ್ಲಿ ಹುಟ್ಟಿದವರು ತಾನೆ?

ಹ : ನೀವೇಕೆ ಕೇಳುತ್ತಿರುವಿರಿ? ನಿಮ್ಮ ಉದ್ದೇಶವೇನು?

ಸಾ: ನನ್ನ ಉದ್ದೇಶದ ಬಗ್ಗೆ ಯೋಚನೆ ಮಾಡಬೇಡಿರಿ. ನಾನು ಮುದುಕನಾಗಿದ್ದರಿಂದ ಒಮ್ಮೊಮ್ಮೆ ನನ್ನ ವಿಚಾರಗಳು ಅಸಂಬದ್ಧವಾಗಿರುತ್ತವೆ.

ಹ: ಹೌದು ನಾವೆಲ್ಲ ಇಲ್ಲಿಯೇ ಹುಟ್ಟಿದವರು.

ಸಾ : ನಿಮ್ಮ ಹೆಂಡಂದಿರ ಹೆರಿಗೆಯ ಸಮಯದಲ್ಲಿ ನೀವು ಸೂಲಗಿತ್ತಿಯನ್ನು ಕರೆಸುವಿರಲ್ಲಾ?

ಹ : ಹೌದು ಇಲ್ಲೊಬ್ಬ ದಾಯಿ ಇದ್ದಾಳೆ.

ಸಾ : ಅವಳು ಜಮೀನುದಾರನ ಹೆಂಡತಿ ಇರಬಹುದಲ್ಲವೆ?

ಹ : ಅಲ್ಲವೇ ಅಲ್ಲ. ಇದು ನಮ್ಮ ಹೆಂಗಸರ ಕೆಲಸವಲ್ಲ.

ಸಾ : ಹಾಗಾದರೆ ಆ ದಾಯಿ ಯಾರು?

ಹ : ಅವಳು ಚೌಹ್ರ (ಹೀನ ಕುಲದವಳು).

ಸಾ : ಆ ದಾಯಿ ನಿಮ್ಮ ಹೆಂಡಂದಿರನ್ನು ಹೆರಿಗೆ ಸಮಯದಲ್ಲಿ ಮುಟ್ಟುವಳೆ?

ಹ : ಹೌದು.

ಸಾ : ಹಾಗಾದರೆ ನಿಮ್ಮ ನವಜಾತ ಶಿಶುವನ್ನು ಮುಟ್ಟುವಲ್ಲಿ ಮತ್ತು ನೋಡಿಕೊಳ್ಳುವಲ್ಲಿ ಅವಳು ಮೊದಲಿಗಳು. ಅಲ್ಲದೆ ಅವಳ ಬೆರಳು ಅದರ ಬಾಯಲ್ಲಿ ಹೋಗುವ ಮೊದಲ ವಸ್ತು.

ಹ : ಹೌದು.

ಸಾ : ಅಂದರೆ ನಿಮ್ಮ ಹೆಂಡಂದಿರು ಮತ್ತು ತಾಯಂದಿರು ಹಾಗೂ ನೀವೆಲ್ಲಹುಟ್ಟಿದ ಕ್ಷಣದಿಂದಲೇ ಮೈಲಿಗೆಯಾದವರು. ಓ ಹಳ್ಳಿಗರೇ ನಿಮ್ಮ ಜಾತಿ ಎಲ್ಲಿ ಹೋಯಿತು ?

ಹೀಗೆಂದಾಗ ಕೆಲವೊಂದು ಹಳ್ಳಿಗರು ಬಹಳೇ ಸಿಟ್ಟಿಗೆ ಬಂದರು. ಆದರೆ ಅವರೊಳಗಿನ ಸಂವೇದನಾ ಶಕ್ತಿಯುಳ್ಳ ಜನ ತಮ್ಮ ಅವಿವೇಕದ ಅಸಂಬದ್ಧತೆಯನ್ನು ಒಪ್ಪಿಕೊಂಡರು ಮತ್ತು ನಾಚಿಕೆಯಿಂದ ತಲೆ ತಗ್ಗಿಸಿದರು.

ಸಾ : ನಿಮ್ಮ ಕೈಗೆ ಮುಳ್ಳು ನಟ್ಟಿ ಊದಿಕೊಂಡಾಗ ನೀವು ಏನು ಮಾಡುವಿರಿ?

ಹ : ನಮ್ಮಿಂದ ಗುಣಪಡಿಸಲಿಕ್ಕಾಗದಿದ್ದಲ್ಲಿ ಡಾಕ್ಟರ್ ಬಳಿಗೆ ಹೋಗುವೆವು?

ಸಾ : ಆ ಡಾಕ್ಟರ್ ಮಾದಿಗನಾಗಿರಬಹುದು ಅಥವಾ ನಿಮ್ಮ ಹೆಂಗಸರ ಹೆರಿಗೆ ಮಾಡಿಸಿಕೊಳ್ಳುವ ದಾಯಿಯ ಗಂಡನಾಗಿರಬಹುದು.

ಹ : ಸಾಧ್ಯವೇ ಇಲ್ಲ. ಓ ಸಾಕ್ರೆಟಿಸ್ ಈ ವಿಚಾರಗಳು ನಿಮ್ಮ ಘನತೆಗೆ ಯೋಗ್ಯವಾದವುಗಳಲ್ಲ. ಡಾಕ್ಟರ್ ಮೇಲು ಜಾತಿಯ, ಕಾಲೇಜು ಕಲಿತ ಸಭ್ಯಗೃಹಸ್ಥನಾಗಿರುತ್ತಾನೆ.

ಸಾ : ನಿಮ್ಮ ಹಸು ಕರು ಹಾಕುವಾಗ ನೀವು ಯಾರನ್ನು ಕರೆಯುವಿರಿ?

ಹ : ಈ ವಿಷಯದ ಬಗ್ಗೆ ತಿಳುವಳಿಕೆಯಿರುವ ರೈತನನ್ನು ಕರೆಯುತ್ತೇವೆ.

ಸಾ : ಹೆರಿಗೆ ತೊಂದರೆದಾಯಕ ಮತ್ತು ನೋವಿನ ವಿಷಯ ಕೂಡ ಆಗಿದೆ ಅಲ್ಲದೆ ಅಪಾಯಕಾರಿಕೂಡ.

ಹ : ಹೌದು, ನಿಜವಾಗಿಯೂ.

ಸಾ : ನಿಮಗೆ ನಿಮ್ಮ ಹೆಂಡಂದಿರ ಬಗ್ಗೆ ಅಷ್ಟೊಂದು ಕಾಳಜಿ ಇಲ್ಲ. ಅವರು ಮತ್ತು ಹಸುಳೆಗಳು ಸಾಯುತ್ತವೆಯೋ ಬದುಕುತ್ತವೆಯೋ ಎಂಬುದರ ಬಗ್ಗೆ ಚಿಂತೆಯಿಲ್ಲ.

ಹ : ನಮ್ಮ ಹೆಂಡಂದಿರಮೇಲೆ ಸಾಕಷ್ಟು ಖರ್ಚು ಮಾಡಿರುತ್ತೇವೆ. ಅಲ್ಲದೆ ನಮಗೆ ಹೆಚ್ಚು ಮಕ್ಕಳು ಬೇಕು ಮತ್ತು ಅವರನ್ನು ಹೆಚ್ಚು ಪ್ರೀತಿಸುತ್ತೇವೆ. ನಮಗೆ ನಮ್ಮ ಹೆಂಡಿರು ಮಕ್ಕಳು ಸಾಯುವುದು ಬೇಕಿಲ್ಲ.

ಸಾ : ಆದರೆ ನಿಮ್ಮ ಕೈ ನೋವಾದಾಗ ಡಾಕ್ಟರ್ ಬಳಿಗೆ ಹೋಗುವಿರಿ. ಹಸು ಕರು ಹಾಕುವಾಗ ಜಾಣನಾದ ವ್ಯಕ್ತಿಯನ್ನು ಕರೆದುಕೊಂಡುಬರುವಿರಿ. ಆದರೆ ನಿಮ್ಮ ಹೆಂಡತಿ ಹೆರಿಗೆ ನೋವನ್ನು ಅನುಭವಿಸುವ ಸಮಯದಲ್ಲಿ ಹಳ್ಳಿಯಲ್ಲೇ ತೀರ ಕೊಳಕಾದ ಮತ್ತು ಕೆಳಜಾತಿಯ ಹೆಂಗಸರನ್ನು ಕರೆದುಕೊಂಡು ಬರುವಿರಿ.

ಹ : ಸ್ವಾಮಿ ನಮ್ಮನ್ನು ಕ್ಷಮಿಸಿ, ನಾವು ಮೂರ್ಖರು.

ಸಾ : ನೀವು ನಿಮ್ಮ ಕೆಲ ಹೆಂಗಸರನ್ನು ಗುರ್ಗಾವಿಯ ಆರೋಗ್ಯ ಕೇಂದ್ರಕ್ಕೆ ತರಬೇತಿಗಾಗಿ ಕಳಿಸಬಹುದಲ್ಲ. ಹೀಗೆ ಮಾಡುವುದರಿಂದ ನಿಮ್ಮ ಹೆಂಡಂದಿರಿಗೆ ನಿರ್ಮಲ, ಜಾಣ ಮತ್ತು ತರಬೇತಿ ಹೊಂದಿದ ದಾಯಿಯರು ಸಿಗುವರು...........

ಹ : ಸ್ವಾಮಿ ಈಗಿನಿಂದಲೇ ಹಾಗೆ ಮಾಡುವೆವು. ನಮಗೆ ನಮ್ಮ ಕ್ರೌರ್ಯ ಹಾಗೂ ಬೇಜವಾಬ್ದಾರಿ ತನಕ್ಕಾಗಿ ನಾಚಿಕೆಯಾಗಿದೆ.

ಸಾ : ಆದರೆ ಮೈಲಿಗೆಯ ವಿಷಯವಾಗಿ ಹೇಳಬೇಕೆಂದಿರುವೆ. ಕೊಳೆ ಮತ್ತು ಕಸ ಮೈಲಿಗೆಯನ್ನುಂಟು ಮಾಡುವುದಲ್ಲವೆ?

ಹ : ನಿಜ.

ಸಾ : ಹಳ್ಳಿಯ ಕೊಳೆ ಮತ್ತು ಕಸಕ್ಕೆ ನೀವೇನು ಮಾಡುವಿರಿ?

ಹ : ಕಸಗೂಡಿಸುವವರು ಹಳ್ಳಿಯ ಸುತ್ತಲಿರುವ ತಿಪ್ಪೆಗಳಲ್ಲಿ ಹಾಕುವರು.

ಸಾ : ಆದರೆ ಅನೇಕ ಸಲ ಹಳ್ಳಿಯ ಒಳಗೂ ಹಾಕುತ್ತಾರಲ್ಲವೆ?

ಹ : ಹೌದು, ಈ ಜನ ಸೋಮಾರಿಗಳಾಗಿರುವುದರಿಂದ ಹೀಗಾಗುವುದು.

ಸಾ : ನಸುಕಿನಲ್ಲಿ ನಿಮ್ಮ ಜನ ಮಲವಿಸರ್ಜನೆಗಾಗಿ ಎಲ್ಲಿಗೆ ಹೋಗುವರು.

ಹ : ಸಮೀಪದ ಹೊಲಗಳಿಗೆ.

[15 ನೇ ಪುಟಕ್ಕೆ]

ಇದೀಗ ಹೊರಬಂದಿದೆ

ಹಿಂದೂ ಪಟ್ಟಭದ್ರರನ್ನು ನಡುಗಿಸಿರುವ ದಲಿತರ ಮುಸ್ಲಿಂ ಮತಾಂತರದ ವೈಚಾರಿಕ ವಿಶ್ಲೇಷಣೆಗಾಗಿ

ಓದಿರಿ

ಮತಾಂತರ

ಸಾಮಾಜಿಕ ಒತ್ತಡಗಳು

ಲೇ : ಗುರುರಾಜ ಬೀಡೀಕರ್

ಬೆಲೆ : ರೂ. 2-50

ಪ್ರತಿಗಳಿಗೆ ಬರೆಯಿರಿ :

ಪ್ರಕಾಶಕರು :

ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರಕಟಣೆ, ಮಾಸ್ತಿಗುಡಿ, 2ನೇಕ್ರಾಸ್ ಅಶೋಕಪುರಂ ಮೈಸೂರು-570008

ಅಂಬೇಡ್ಕರ್ ಮುಖಕ್ಕೆ ಮಸಿ : ಬ್ರಾಹ್ಮಣಶಾಹಿ ಕುತಂತ್ರ

ಹಿಂದೂ ಸಮಾಜ ಸುಧಾರಣೆ ನಮ್ಮ ಗುರಿಯೂ ಅಲ್ಲ; ನಮ್ಮ ಕಾರ್ಯಕ್ಷೇತ್ರವೂ ಅಲ್ಲ. ಸ್ವಾತಂತ್ರ್ಯ ಗಳಿಸುವುದೊಂದೇ ನಮ್ಮ ಗುರಿ. ಬೇರೆ ಗೊಡವೆ ನಮಗೆ ಬೇಕಿಲ್ಲ. ಮತಾಂತರದಿಂದ ನಮಗೆ ಸ್ವಾತಂತ್ರ್ಯ ಸಿಗುವುದಾದರೆ ಹಿಂದೂ ಧರ್ಮವನ್ನು ಸುಧಾರಿಸುವ ಜವಾಬ್ದಾರಿ ನಮಗೇಕೆ? ಅದಕ್ಕಾಗಿ ನಮ್ಮ ಶಕ್ತಿಯನ್ನೂ ಸಂಪತ್ತನ್ನೂ ನಾವೇಕೆ ಬಲಿ ಕೊಡಬೇಕು? ನಮ್ಮ ಚಳುವಳಿಯ ಉದ್ದೇಶ ಹಿಂದೂ ಸಮಾಜ ಸುಧಾರಣೆ ಎಂದು **ಯಾರೂ ಅಪಾರ್ಥಮಾಡಿಕೊಳ್ಳಬಾರದು. ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯ ಸಾಧಿಸುವುದೇ ನಮ್ಮ ಚಳುವಳಿಯ ಉದ್ದೇಶ".**

ಡಾ|| ಅಂಬೇಡ್ಕರ್[1936 ಮೇ 30 ಮತ್ತು 31ರಂದು ಬೊಂಬಾಯಿಯಲ್ಲಿ ಮತಾಂತರದ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟ ಪಡಿಸಿದಾಗ.]

ದಲಿತರಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚುತ್ತಿರುವ
ದಿನ ದಿನಗಳಲ್ಲಿ ಅಂಬೇಡ್ಕರ್‌ರವರ ಬಗ್ಗೆ
ಸ್ತಕಗಳ ಸುಗ್ಗಿ ವಿಪುಲವಾಗುತ್ತಿದೆ. ಈವರೆಗೆ
ಡದಲ್ಲಿ ಪ್ರಕಟವಾದ ಅಂಬೇಡ್ಕರ್ ಬಗ್ಗೆ
ಸ್ತಕಗಳು ಅವರ "ವ್ಯಕ್ತಿ-ವಿಚಾರ" ವೆಂದು
ಳಿಕೊಂಡರೂ ಸಹ ಬಹುಪಾಲು ಪುಸ್ತಕಗಳು
ರ ಜೀವನದ ಘಟನೆಗಳನ್ನು ಕ್ರೋಢೀಕರಿಸು
ಾಗಿದೆ.

ಕನ್ನಡದಲ್ಲಿ ಈವರೆಗೆ ಪ್ರಕಟವಾದ ಜೀವನ
ತ್ರೆಗಳೆಲ್ಲವೂ ಸಹ ಧನಂಜಯ ಕೀರ್‌ರವರ
ಸ್ತಕದ ಭಾವಾನುವಾದವೇ ಆಗಿವೆ. ಇವುಗಳ
ಲೇಖಕರಾರೂ ಸಹ ಅಂಬೇಡ್ಕರ್‌ರವರ ಜೀವನ
ವನ್ನಾಗಲೀ ಅಥವಾ ವಿಚಾರವನ್ನಾಗಲೀ ವಿಮ
ರ್ಶಾತ್ಮಕವಾಗಿ ದಾಖಲಾಗಿಸಿಲ್ಲ.

ಈ ಲೇಖಕರ ಉದ್ದೇಶ ತಾವು ದಲಿತರ ಪರ
ಗಿದ್ದೇವೆಂದು ತೋರಿಸಿಕೊಳ್ಳುವುದೋ
ವಾ ಅಂಬೇಡ್ಕರ್ ಪುಸ್ತಕಗಳಿಗೆ ಇರುವ
ರುಕಟ್ಟೆಯನ್ನು ಉಪಯೋಗಿಸಿಕೊಳ್ಳುವು
ೇ ಆಗಿದೆ ಎಂದು ಕಾಣುತ್ತದೆ. ಇತ್ತೀಚೆಗೆ ಪ್ರಕ
ಾಗಿರುವ ಇನಾಂದಾರರ ಪುಸ್ತಕ [ಡಾ||
ಬೇಡ್ಕರ್' (ವ್ಯಕ್ತಿ ಮತ್ತು ವಿಚಾರ) ಉಷಾ
ಹಿತ್ಯ ಮಾಲೆ, ಮೈಸೂರು-1 ಬೆಲೆ 12 ರೂ.
81] ಇದೇ ಪರಂಪರೆಯಲ್ಲಿದೆ.

ತಾತ್ವಿಕವಾಗಿ ಇನಾಂದಾರರ ಪುಸ್ತಕದ
ಂತ ಮುಖ್ಯವಾಗಿ ಎರಡು. ಮೊದಲನೆಯ
ಗಿ, ಅಂಬೇಡ್ಕರ್‌ರವರನ್ನು "ಆಧುನಿಕ ಮನು"
ಮ ಲೇಬಲ್ ಹಾಕುವುದು. ಇದನ್ನು ಈ
ದೇಶದ ಆಳುವವರ್ಗದಿಂದ ಹಿಡಿದು ಇನಾಂದಾರರ ವರೆಗೆ ಎಲ್ಲರೂ ರಾಗವಾಗಿ ಹೇಳುತ್ತಿದ್ದಾರೆ. ಅಂಬೇಡ್ಕರ್‌ರವರು ಸಂವಿದಾನಸಭೆಯಲ್ಲಿ ದುಡಿದುದರ ಉದ್ದೇಶ, ಅಸ್ಪೃಶ್ಯರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದು. ಸಂವಿಧಾನದ ರಚನೆಯನ್ನು ಅವರೇನೂ ಸಂಪೂರ್ಣ ಸ್ವತಂತ್ರರಾಗಿ ರಚಿಸಲಿಲ್ಲ. ಬದಲಾಗಿ ಆ ಸಂವಿಧಾನವು 1935ರ

ಡಾ|| ವಿ. ಲಕ್ಷ್ಮಿನಾರಾಯಣ

ಭಾರತ ಕಾನೂನಿನ ಬಹುಭಾಗವನ್ನು ಅಳವಡಿಸಿಕೊಂಡಿತ್ತು. (ಪು. 134) ಎಂದು ಅಂಬೇಡ್ಕರ್‌ರವರೇ ಒಪ್ಪಿಕೊಂಡಿದ್ದಾರೆ. ತಾವು ಆ ಸಂವಿದಾನವನ್ನು ಬಾಡಿಗೆ ಕುದುರೆಯಂತೆ ರಚಿಸಿದೆನೆಂದೂ ಒಪ್ಪಿಗೆ ಇಲ್ಲದಿದ್ದರೂ ಅದನ್ನು ಒತ್ತಾಯಕ್ಕೆ ಮಣಿದು ಮಾಡಿದೆನೆಂದು ಹೇಳಿದ್ದುಂಟು,ಅದನ್ನು ಸುಡಲು ತಾವೇ ಮೊದಲ ವ್ಯಕ್ತಿಯಾಗಿ ತಯಾರಾಗಿದ್ದೇನೆಂದು ಆರ್ಭಟಿಸಿದ್ದರು. ಹೀಗಾಗಿ ಜಾತಿಪದ್ಧತಿಯನ್ನು codify ಮಾಡಿದ ಮನುವಿಗೆ ಅಂಬೇಡ್ಕರ್‌ರವರನ್ನು ಹೋಲಿಸುವುದು, ಈ ದೇಶದ "ಬ್ರಾಹ್ಮಣಶಾಹಿ"ಯ ಕುತಂತ್ರ.

ಎರಡನೆಯದಾಗಿ, ಅಂಬೇಡ್ಕರ್‌ರನ್ನು ಕುರಿತ ಇನಾಂದಾರರ "ನಿರ್ಣಯ" ಅತ್ಯಂತ ಗಾಬರಿ ಹುಟ್ಟಿಸುವಂತಹದು. ಲೇಖಕರ ಪ್ರಕಾರ "ಹಿಂದೂ ಧರ್ಮದಲ್ಲಿಯ ಅಸಮಾನತೆಗಳನ್ನು ಅವರು (ಅಂಬೇಡ್ಕರ್) ಪ್ರತಿಭಟಿಸಿದರೂ ಹಿಂದೂ ಸಂಸ್ಕೃತಿಯ ಮಹತ್ವವನ್ನು ಅವರು ಎಂದೂ ಅಲ್ಲಗಳೆಯಲಿಲ್ಲ. ಆ ದೃಷ್ಟಿಯಿಂದ ಅವರ ಕಾರ್ಯವನ್ನು ಹಿಂದೂ ಸಂಸ್ಕೃತಿಯ ಪುನರುತ್ಥಾನ ಕಾರ್ಯವೆಂದೇ ಹೇಳಬಹುದಾಗುತ್ತದೆ. ಹಿಂದೂಗಳೆಲ್ಲ ಒಂದು, ಒಂದಾಗಿ ಬಾಳುವ, ಬೆಳೆಯುವ ಅವಕಾಶ ಆ ಧರ್ಮಕ್ಕೆ ಸೇರಿದವರಿಗೆಲ್ಲರಿಗೂ ಇರಬೇಕು. ಒಂದೇ ಕಾನೂನಿಗೆ ಒಳಪಟ್ಟವರಾಗಿರಬೇಕು ಎನ್ನುವುದೇ ಅವರ ದಲಿತೋದ್ಧಾರದ ತಳಹದಿಯಾಗಿತ್ತು". (ಪು.185) ಇನಾಂದಾರರ ಪ್ರಕಾರ ಅಂಬೇಡ್ಕರ್‌ರವರ ದಲಿತೋದ್ಧಾರದ ಗುರಿ ಅಂತಿಮವಾಗಿ ಹಿಂದೂ ಧರ್ಮದ ಸಂರಕ್ಷಣೆ. ಅಂಬೇಡ್ಕರ್‌ರವರಿಗೆ ಇದಕ್ಕಿಂತ ಹೆಚ್ಚಿನ ಅವಮಾನ ಮಾಡಲು ಸಾಧ್ಯವೇ ಇಲ್ಲ. ವಾಸ್ತವವಾಗಿ ಅಂಬೇಡ್ಕರ್ ತಮ್ಮ ಹೋರಾಟದ ಜೀವನದ ಆದಿಭಾಗದಲ್ಲಿ ಹಿಂದೂ ಧರ್ಮೀಯರ ಮನಸ್ಸನ್ನು ಚುಚ್ಚಿ, ಅವರಲ್ಲಿಯೇ ಸಮಾನ ಸ್ಥಾನಕ್ಕಾಗಿ ಮಹದ್ ಸತ್ಯಾಗ್ರಹ, ನಾಸಿಕ್‌ನ ಸತ್ಯಾಗ್ರಹ ಮುಂತಾದವುಗಳನ್ನು ಸಂಘಟಿಸಿದ್ದರು. ಆದರೆ ಇವುಗಳ ವಿಫಲತೆಯನ್ನು 1936ರ ಹೊತ್ತಿಗಾಗಲೇ ಅರಿತಿದ್ದರು.(ಪು.96). ನಂತರದ ಘಟ್ಟದಲ್ಲಿ ದಲಿತರಿಗೆ ರಾಜಕೀಯ ಹಕ್ಕುಗಳನ್ನು ಪಡೆಯಲು ಎಡಬಿಡದೆ ಪ್ರಯತ್ನಿಸಿದರು. ತಮ್ಮ ಜೀವನದ ಕೊನೆಯ ಘಟ್ಟದಲ್ಲಿ ಹಿಂದೂ ಧರ್ಮದ ಜಡತೆ ಮತ್ತು ರಾಜ್ಯಾಂಗದ ಫಲಗಳ ಪ್ರಯೋಜನಗಳ ಬಗೆಗಿನ ಹತಾಶತೆಯಿಂದ, ಅವರು ಭೌದ್ಧಧರ್ಮದ ಸಮಾನತೆಯ ಆಶಯ ಮತ್ತು ಆತ್ಮೋದ್ಧಾರದ ಮೌಲ್ಯಗಳಲ್ಲಿ ತಮ್ಮ ದಾರಿ ಕಂಡುಕೊಳ್ಳಲು ಪ್ರಯತ್ನಿಸಿದರು. ಪರಿಸ್ಥಿತಿ ಹೀಗಿರುವಾಗ ಇನಾಂದಾರರು ಅಂಬೇಡ್ಕರ್‌ರವರ ಕಾರ್ಯವನ್ನು 'ಹಿಂದೂ ಸಂಸ್ಕೃತಿಯ ಪುನರುತ್ಥಾನ ಕಾರ್ಯ'ವೆಂದು ನಿರ್ಣಯಿಸುವುದು, ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್‌ರವರನ್ನು ಬ್ರಾಹ್ಮಣೀಕರಣಗೊಳಿಸುವ ಪ್ರಯತ್ನಗಳಲ್ಲಿ ಒಂದು. 'ಹಿಂದೂಗಳೆಲ್ಲಾ ಒಂದು' ಎಂದು ಅಂಬೇಡ್ಕರ್ ಯಾವಕಾಲದಲ್ಲೂ ತಿಳಿಯಲಿಲ್ಲ. ಇನಾಂದಾರರ ಈ "ಸಂಶೋಧನೆ"ಗೆ ಖುಷಿಪಡಬೇಕಾದವರು, ಈ ದೇಶದಲ್ಲಿ ಇಂದು ಹಿಂದೂ ಅತಿಪ್ರೇಮವನ್ನು ಪ್ರಚಾರ ಮಾಡುತ್ತಾ ಎಲ್ಲ ಹೋರಾಟಗಾರರನ್ನು ಬ್ರಾಹ್ಮಣಶಾಹಿಯ ಪರಿಧಿಯೊಳಗೆ ಕೂಡಿಡಲು ಪ್ರಯತ್ನಿಸುತ್ತಿರುವ ಹಿಂದೂ ಪುನರುತ್ಥಾನವಾದಿಗಳು (Hindu Revivalist) ಮಾತ್ರ. ಇನಾಂದಾರರ ಈ ಪುಸ್ತಕ ಅಂತಹವರಿಗೆ ಅಸ್ತ್ರವಾಗಬಹುದು. ●

ಚರ್ಮ ರೋಗಕ್ಕೆ ಮದ್ದು

ಚರ್ಮ ರೋಗಕ್ಕೆ ಉಚ್ಚ ನೀಚ ಕಲ್ಪನೆ
ಯ ಕೊಳಕು ಜಾತಿ– ಮದ್ದೆ

ಒಂದು ಸಿನಿಮಾ ಮಂದಿರದೆದುರಿನ ಸಣ್ಣ
ಚಾ ಅಂಗ್ಡಿಯ ಹುಡುಗ- ಲಿಂಗಾಯಿತ್ರು
ಉಂಡು ಎಸ್ದ ಎಲೇನ ಸುಟ್ಟು ಮೈ
ಗೆಲ್ಲ ಸವರಿದ್ರೆ ವಾಸಿಯಾಗ್ತದಂತೆ."
ಅಲ್ಲಿದ್ದ ಮಹಿಳೆ. "ಇಲ್ಲ ಬ್ರಾಹ್ಮಂಡ್ರು
ಉಂಡು ಎಸ್ದಿದ್ನ ಸುಟ್ಟು ಬೂದೀನ
ಚೆನ್ನಾಗಿ ಮೈಗೆಲ್ಲ ಸವರಿದ್ರೆ ಬೇಗ
ವಾಸಿಯಾಗ್ತೈತೆ ಕಣೊ.'' ತಕ್ಷಣ
ನುಡಿದಳು.

ಮನುಷ್ಯ ಸಂಬಂಧಗಳನ್ನು ಛಿದ್ರಗೊಳಿ
ಸುವ ಇವರ ಆಲೋಚನೆಯಮೂಲ ಎಳೆಗ
ಳನ್ನು ಹುಡುಕಲು ತಡಕಾಡಿದೆ.

—ನಾಗವೇರಾ ತುಮಕೂರು

ಪಂಚಮ

ವಾರ್ಷಿಕ ಚಂದಾ : ೧೦ ರೂ.
ಆಜೀವ ಚಂದಾ : ೨೦೦ ರೂ.

ಆಳುವ ಕಿವುಡರು : ಕಾಡಮ್ಮನ ಅರಣ್ಯ ರೋದನ

ಇಳಿ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಜೀವನದ ಭದ್ರತೆಗಾಗಿ ಇದ್ದ ಸ್ವ ಭೂಮಿಯನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ಮುಖ್ಯ ಮಂತ್ರಿಗಳ ಸಮೇತರಾಗಿ ಅ ಕಾರಿಗಳನೆಲ್ಲ ಬೇಡಿಕೊಂಡು, ಸರ್ಕಾರಿ ಕಛೇರಿಗಳ ಕಂಬಕಂಬಕ್ಕೂ ಅಡ್ಡ ಬೀಳುತ್ತಿರು ವಿಧವೆ ಕಾಡಮ್ಮನ ಸ್ಥಿತಿ ಮಾನಗೆಟ್ಟ ವ್ಯವಸ್ಥೆಯ ಪ್ರತೀಕ.

ದಲಿತ ಮಹಿಳೆ ಕಾಡಮ್ಮ, ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿ ಮಾರಗೌಡನಹಳ್ಳಿ ಎಂಬ ಗ್ರಾಮದವಳು. ಈಕೆಯ ಗಂಡ ಬಂದಿಗಯ್ಯ ಕೆಲ ವರ್ಷಗಳ ಕೆಳಗೆ ಮೃತನಾದ. ಆತ ಸತ್ತದ್ದು ಸ್ವಾಭಾವಿಕ ಸಾವಿನಿಂದಲ್ಲ. ಸರ್ಕಾರ ತನಗೆ ಕೊಟ್ಟ ಭೂಮಿಯನ್ನು ರಣಹದ್ದುಗಳಾಗಿ ಕಾಡುವ ಜಮೀನುದಾರರ ವಂಚನೆಯಿಂದ ರಕ್ಷಿಸಿ, ತನ್ನದಾಗುಳಿಸಿಕೊಳ್ಳುವ ಆಸೆಯ ಸಮೇತ ಕೊನೆಯುಸಿರೆಳೆದ.

1946ರಲ್ಲಿ ಬಂದಿಗಯ್ಯನಿಗೆ ಸ.ನಂ. 179ರಲ್ಲಿ ಎರಡು ಎಕರೆಯಷ್ಟು ದರಖಾಸ್ತು ಜಮೀನು ಮಂಜೂರಾಯ್ತು. ಕೆಲವು ವರ್ಷಗಳ ನಂತರ ಈ ಜಮೀನಿನ ಅಭಿವೃದ್ಧಿಗೆ ಬಂದಿಗಯ್ಯ ಮಂಡ್ಯ ಸಕ್ಕರೆ ಕಾರ್ಖಾನೆಯಿಂದ ಸಾಲ ಮಾಡಿದ. ಬರಗಾಲದಿಂದ ನಾಲೆಯಲ್ಲಿ ನೀರಿಲ್ಲದೆ ಅಳಿದುಳಿದ ಎರಡು ಗಾಡಿ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡಿ ಬಂದ 50 ರೂಗಳು ಸಾಲದ ಬಾಬ್ತಿಗೆ ಸಂದಾಯವಾಯ್ತು. ಉಳಿದ ಹಣಕ್ಕೆ ಕಾರ್ಖಾನೆಯಿಂದ ನೋಟಿಸು ಮೇಲೆ ನೋಟಿಸು ಬಂದು ಕೊನೆಗೆ ಜಮೀನು ಹರಾಜು ಹಾಕುವ ಸ್ಥಿತಿಗೆ ಬಂತು. 24-2-64ರಂದು ಎರಡು ಎಕರೆ ತರಿ ಜಮೀನನ್ನು ಕೇವಲ 766 ರೂಗಳಿಗೆ ಅದೇ ಊರಿನ ಸಿದ್ದೇಗೌಡನ ಪರ ಹರಾಜು ಕೂಗಲಾಯಿತು. ದಿಗಿಲು ಬಿದ್ದ ಬಂದಿಗಯ್ಯ ಎರಡೆ ದಿನಗಳಲ್ಲಿ (26-2-64) ಹೇಗೋ ಮಾಡಿ 350

ಹುಲ್ಲುಕೆರೆ ಮಹಾದೇವ

ರೂಗಳನ್ನು ಸಾಲದ ಬಾಬ್ತು ಟ್ರೆಸರಿಗೆ ಕಟ್ಟಿ, ಉಳಿದ ಹಣ ಕಟ್ಟಲು ಎರಡು ತಿಂಗಳ ಅವಕಾಶ ಕೇಳಿದ.

ಇದ್ದಕ್ಕಿದ್ದಂತೆ 10-3-64ರಂದು ಬಂದಿಗಯ್ಯನ ಮೇಲೆ ಹಲ್ಲೆ ನಡೆಯಿತು. ಕತ್ತು ಕುಯ್ಯುವ ಯತ್ನ ನಡೆದು ಬಂದಿಗಯ್ಯನ ಕತ್ತಿನ ನರವೊಂದು ಕುಯ್ದುಹೋಯ್ತು. ಹೀಗೆ ಹಲ್ಲೆ ಮಾಡಿದವರು ಹರಾಜಿನಲ್ಲಿ ಜಮೀನು ಕೊಂಡ ಸಿದ್ದೇಗೌ... ಗೂಂಡಾಗಳು ಮತ್ತು ಅವನ ಮನೆಯಲ್ಲೇ ಜ... ಕ್ಕಿದ್ದ ಬಂದಿಗಯ್ಯನ ತಮ್ಮ ಚಿಕ್ಕೈದ. ಅ... ಜಮೀನಲ್ಲಿ ತನಗೂ ಪಾಲುಬರಬೇಕೆಂದು ಚಿಕ್ಕೆ... ನನ್ನು ಪ್ರಚೋದಿಸಲಾಗಿತ್ತು, ಬಂದಿಗಯ್ಯ ... ಪಿತ್ರಾರ್ಜಿತ ಆಸ್ತಿಯಲ್ಲವೆಂದೂ, ಪಾಲು ಕೇ... ಲು ಸಾಧ್ಯವಿಲ್ಲವೆಂದು ವಾದಿಸಿದ. ಹಲ್ಲೆ ನಡೆ... ವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖ... ಮಾಡಿತಾದರೂ ಪ್ರಯೋಜನವಾಗಲಿಲ್ಲ. ತೀ... ವಾದ ನೋವಿನಿಂದ ನರಳುತ್ತಿದ್ದ ಬಂದಿಗಯ್ಯ... ವಿಶ್ರಾಂತಿ ಬೇಕಾಗಿದ್ದು, ಕಟ್ಟಬೇಕಾಗಿದ್ದ ಸ... ಕ್ಕೆ ತೆಗೆದುಕೊಂಡಿದ್ದ ಸಮಯ ಮೀರುತ್ತಿ... ತನ್ನ ಜಮೀನು ಕೈ ಬಿಡುವುದೆಂದು ಹೆದರಿ... ನೋವಿನಲ್ಲೂ ಸುಧಾರಿಸಿಕೊಂಡು 8-4-64ರ...

[14ನೇ ಪುಟ ನೋ...

ಹುಡುಗಿಯೊಬ್ಬಳ ಸಹಾಯಕ್ಕೆ ಬರದ ಯೆವುಷೆಂಕೋನ ಕಾವ್ಯ

ಯೆವುಷೆಂಕೋ—ಒಬ್ಬ ರಷ್ಯನ್ ಕವಿ. ಮೊದಮೊದಲು ಕ್ರೀಡಾ ಪತ್ರಿಕೆಗಳಲ್ಲಿ ಕಾವ್ಯ ರಚನೆ ಪ್ರಾರಂಭಿಸಿದ ಕವಿ ಈತ. ಸಾಂದರ್ಭಿಕ ಕವಿತೆಗಳ ನಾಯಕ. ಇಂದು ನಮ್ಮ ನಡುವೆ ಖಡ್ಗವಾಗಲಿ ಕಾವ್ಯ ಎಂಬ ಮಾತನ್ನು ಅಪಾರ್ಥ ಮಾಡಿಕೊಂಡು ಬರೀ ತಮಟೆಹೊಡೆತ ಹೊಡೆಯುವ ಕವಿಗಳಂತೆ ಈತನೂ ಕಾವ್ಯ ಬರೆದ. ಕೊನೆಗೆ ತನಗಾದ ಒಂದು ಅನುಭವದಿಂದ ಇಂಥ ಕಾವ್ಯದಿಂದ ಯಾರಿಗೂ ಪ್ರಯೋಜನವಿಲ್ಲವೆಂದು ಅರಿತುಕೊಂಡ. ಆತನ ಆತ್ಮ ಕಥನದಿಂದ ಆರಿಸಿದ ಭಾಗ ಇಲ್ಲಿದೆ.

ನನ್ನ ಮೊದಲ ಸಂಕಲನ 'The Prospects of the Future' ಕೃತಿಯನ್ನು ನಾನು 1952ರಲ್ಲಿ ಪ್ರಕಟಿಸಿದೆ. ಅದಕ್ಕೆ ಪತ್ರಿಕೆಗಳಲ್ಲಿ ಚೆನ್ನಾಗಿಯೇ ವಿಮರ್ಶೆ ಬಂತು. ಪುಸ್ತಕದ ಅಂಗಡಿಯೊಂದಕ್ಕೆ ಹೋದಾಗ ಆ ಪುಸ್ತಕದ ಎಲ್ಲಾ ಪ್ರತಿಗಳೂ ಹಾಗೆಯೇ ಇದ್ದವು. ಆ ಅಂಗಡಿಯ ಕಾವ್ಯ ವಿಭಾಗದಲ್ಲಿ ತರುಣನೊಬ್ಬ ಪುಸ್ತಕ ನೋಡುತ್ತಿದ್ದ. ನನ್ನ ಪುಸ್ತಕದ ಬಳಿ ಬಂದಾಗ ನಿರೀಕ್ಷೆಯಿಂದ ಹೆಪ್ಪುಗಟ್ಟಿಬಿಟ್ಟೆದ್ದೆ. ಕೆಲವು ಪುಟಗಳನ್ನು ಆತ ತಿರುವಿಹಾಕಿದ,........ ನಿಟ್ಟುಸುರಿಟ್ಟು ಮತ್ತೆ ಆ ಪುಸ್ತಕವನ್ನು ವಾಪಸು ಅಲ್ಲಿಯೇ ಇಟ್ಟ.

"ನಾನು ನೋಡುತ್ತಿದ್ದುದು ಅದನ್ನಲ್ಲ" ಪುಸ್ತಕ ಮಾರಾಟದ ಹುಡುಗಿಗೆ ಹೇಳಿದ.

"ನನಗೊಬ್ಬ ಹುಡುಗಿ ಗೊತ್ತಿದ್ದಾಳೆ—ತುಂಬ ಸೊಗಸಾದ ಹುಡುಗಿ ಅವಳು, ಆದರೆ ಆ ಹುಡುಗಿ ಈಗ ಪೂರ್ಣ ಭ್ರಮನಿರಸನಗೊಂಡಿದ್ದಾಳೆ. ಆಘಾತಕ್ಕೊಳಗಾಗಿದ್ದಾಳೆ. ಕಾವ್ಯ ಅವಳ ಸಹಾಯಕ್ಕೆ ಬರಬಹುದೆಂದು ನಾನು ಯೋಚಿಸಿದ್ದೆ. ಆದರೆ ಇದನ್ನು ನಾನು ಕಾವ್ಯವೆಂದು ಕರೆಯುವುದಿಲ್ಲ. ಇದು ಬರೀ ತಮಟೆ ಹೊಡೆತ ಮಾತ್ರ. ಬದುಕಿನ ಬಗೆಗೆ ವಿಶ್ವಾಸವನ್ನು ಯಾರೊಬ್ಬರಿಗೂ ಇಂಥಹ ಕಾವ್ಯ ಕೊಡಿಸದು".

ನುಗ್ಗುತ್ತಿದ್ದ ಮಂಜಿನಲ್ಲಿ ಆ ತರುಣ ಕರಗಿ ಹೋದ. ಇದರಿಂದ ನಾನು ತೀವ್ರ ಘಾಸಿಗೊಂಡೆ. ನಾನು ಮನೆಗೆ ಮರಳಿದೆ. ನನ್ನ ಕಾವ್ಯ ಸಂಕಲನವನ್ನು ಪುನಃ ಓದಿದೆ. ತಕ್ಷಣ ನನಗೆ ಅನ್ನಿಸಿತು. ಈ ಕಾವ್ಯದಿಂದ ಯಾರಿಗೂ ಪ್ರಯೋಜನವಿಲ್ಲವೆಂದು.

ಮುಂದೆ ಈ ಕವಿ ಯುದ್ಧದಲ್ಲಿ ಬಳಲಿದ್ದ ಜನತೆಗೆ ತನ್ನ ಕಾವ್ಯದಿಂದ ಆಗಬಹುದಾದ ಪರಿಣಾಮಗಳನ್ನು ಕುರಿತು ಮಾತನಾಡುತ್ತಾನೆ.

'ನಾನು ಹೊರಗಡೆ ಹೊರಟೆ. ಇಡೀ ರಾ... ಯೆಲ್ಲಾ ಒಬ್ಬನೇ ಅಲೆದಾಡಿದೆ ಬೆಳಕು ಮ... ಮಂಜಿನ ನಡುವೆ.' ಜನ ದಣಿದಿದ್ದರು, ಜ... ನಿಂದ ದಯೆಯನ್ನು, ಪ್ರೀತಿಯನ್ನು ನಿರೀಕ್ಷಿ... ತ್ತಿದ್ದರು. ಅವರಿಗೆ ದೊಡ್ಡ ಶಬ್ದಗಳಿಂದ ಏ... ಬೇಕಿರಲಿಲ್ಲ. ಅವರಿಗೆ ಬೇಕಾಗಿದ್ದುದು ಸ... ಪ್ರಾಮಾಣಿಕ ಮತ್ತು ದಯೆಯ ಮಾತುಗಳು...

"ತನ್ನ ಕೃತಕ ಕಾಲುಗಳನ್ನು ಎಳೆಯು... ಕುಡುಕನೊಬ್ಬ ತನ್ನ ಅಕಾರ್ಡಿಯನ್ ವಾ... ವನ್ನು ನುಡಿಸುತ್ತಾ ಹೋಗುತ್ತಿದ್ದ. ಹಾ... ವಸ್ತು : A lonely mountain ... htree. ಇಬ್ಬರು ಹೆಂಗಸರು ಮಾತಾಡು... ಹೋಗುತ್ತಿದ್ದರು.

ಒಬ್ಬಾಕೆ : ಹಾಗಾದರೆ ಪ್ರೇಮ ಅನ್ನು... ಇಲ್ಲವೆ ?

ಇನ್ನೊಬ್ಬಾಕೆ : ಅದು ಖಂಡಿತ ಇದೆ. ... ಒಂದು ದಿನ ನಿನ್ನ ಬಳಿ ಬಂದೇ ಬರುತ್ತ...

"ಮೋಸ್ಕಾ ನದಿಯ ದಂಡೆ ಬರುವ ತನಕ ... ದಾಡಿದೆ. ಸೇತುವೆ ಮೇಲೆ ನಿಂತು ಸಿಗರೇಟಿ... ಇಟ್ಟಾಗ, ಆ ದಿನವೇ ಕೊಟ್ಟಿದ್ದ ಪುಸ್ತ... ಗೌರವ ಧನದ ಕಟ್ಟು ಕೈಗೆ ಬಂತು. ಅ... ಗಾಳಿಗೆ ತೂರಿದೆ. ತಣ್ಣನೆಯ ಕೊರೆವ ಕತ್ತ... ಅವು ಹಾರಾಡಿದವು."

ಲೆನಿನ್ನನ ಪ್ರಕಾರ ಕಮ್ಯುನಿಸಂ ಇರುವುದು ಮನುಷ್ಯನ ಸೇವೆಗೆ.
ಆದರೆ ಸ್ಟಾಲಿನ್ನನ ಪ್ರಕಾರ ಮನುಷ್ಯ ಇರುವುದು ಕಮ್ಯುನಿಸಂನ ಸೇವೆಗೆ.

ಆಯ್ಕೆ : ಒಬ್ಬ ಮಾರ್ಕ್ಸ...

ಾಂಗ್ರೆಸ್ ಸಂಸ್ಕೃತಿಗೆ ಬಲಿಯಾದ ದಲಿತ ಪ್ಯಾಂಥರ್ಸ್


ಮರಾಠಿಯ ಪ್ರತಿಭಾವಂತ ದಲಿತ ಾದಂಬರಿಕಾರ ದಯಾಪವಾರ್ ದಲಿ ೇಶದ ತುಂಬಾ ಅನುಭವಿಸುತ್ತಿರುವ ನ್ನು ದಾಖಲೆಗೊಳಿಸುವ 'ಬಲುತ' ಬರಿಯನ್ನು ಬರೆದುದಕ್ಕೆ ಮಹಾರಾ ದ್ಯಾವಂತ ದಲಿತರು ವಿಲಕ್ಷಣ ಪ್ರತಿ ತೋರಿಸಿದ್ದಾರೆ. ಸಾತಾರಾದಲ್ಲಿ ತ' ಕಾದಂಬರಿಯ ಬಿಡುಗಡೆ ಸಮಾ ಲ್ಲಿ ದಯಾಪವಾರ್ ವಿರುದ್ಧವೇ ದಲಿ ಘೋಷಣೆ ಕೂಗಿ 'ಬಲುತ' ಕಾದಂಬ ದಲಿತರನ್ನು ಅವಮಾನಗೊಳಿಸಿದೆ ಹೇಳುತ್ತಿದ್ದಾರೆ.

ತರಲ್ಲಿಯೇ ಶಿಕ್ಷಣ ಪಡೆದು ಮಧ್ಯಮ ವರ್ಗ ಗಳನ್ನು ಹೊತ್ತ ಒಂದು ವರ್ಗ ಸಾಮಾನ್ಯ ರಂತೆ Sanskritisation ಗೊಳ್ಳುತ್ತಾ ವುದನ್ನೇ ಇದು ತೋರುತ್ತದೆ. ಹುಟ್ಟಿನಿಂದ ಲಿತನಾಗಿ ದಲಿತರ ಬದುಕಿನ ಬಗ್ಗೇ ವಿವರ ಾಗಿ ಬರೆದಿರುವ ಈ ಕಾದಂಬರಿಗೆ ದಲಿತ ೇ ಕಂಡುಬಂದಿರುವ ಇಂಥ ಪ್ರತಿಕ್ರಿಯೆಬಗ್ಗೆ ದಯಾ ಪವಾರ್‌ಗೆ ಹೇಗನಿಸಿರಬಹುದು? ಲುತ' ಕಾದಂಬರಿಯು 'ಅವೂತ' ಎಂಬ ಹಿಂದಿಯಲ್ಲಿಯೂ ಕೂಡ ಈಗ ಪ್ರಕಟವಾ ದಯಾ ಪವಾರ್ ಒಂದು ದಿನ ಇದ್ದಕ್ಕಿದಂತೆ ರೂಂ ಬಾಗಿಲಲ್ಲಿ ಕಾಣಿಸಿಕೊಂಡರು. ಗೆಳೆ ಗರ ಅವರನ್ನು ಕರೆತಂದಿದ್ದರು.

ಷ್ಟೇ ವರ್ಷಗಳ ಪರಿಚಯವಿರುವ ಮಿತ್ರನ ದಯಾ ಪವಾರ್ ಕುರ್ಚಿಯಲ್ಲಿ ಕುಳಿತು ತ್ತಾ "ಅರೇ ಬಾಪ್‌ರೇ, ಆಪಲ್ಯಾ ರೂಂ ಕಾಯಲಾ ಕಿತಿ ಪ್ರಯತ್ನ ಕರಾಗುಚಾ" ರ್ಗ ಪೂರಾ ಹುಡಕಲೇ"ಎಂದರು. ರೂಂ ದಲಿತ ವಿದ್ಯಾರ್ಥಿ ಒಕ್ಕೂಟದ ಮಿತ್ರರನ್ನು ರು ಮಾಡಿ ಕೊಡುತ್ತ ನನಗಾದ ತೀವ್ರ ಯನ್ನು ಅದುಮಿಟ್ಟುಕೊಳ್ಳುತ್ತಿದ್ದೆ.

ಯಾಪವಾರ್ ಅವರು ಗುಲ್ಬರ್ಗದಲ್ಲಿರುವ ಸಂಘಟನೆಗಳ ಬಗ್ಗೆ ಹೆಚ್ಚು ತಿಳಿದುಕೊಂಡು ತ' ಕಾದಂಬರಿಯ ಮುಂದಿನ ಭಾಗವನ್ನು ವಲ್ಲಿ ಸಾಮಗ್ರಿದೊರಕಬಹುದೆಂಬ ಆಶಯ ನಮ್ಮೊಂದಿಗೆ ಮಾತನಾಡಲು ಬಂದಿದ್ದಾ ು ಅನಂತರ ತಿಳಿಯಿತು. ನಾವೇ ಅವ ಗೆ ಚರ್ಚೆ ಪ್ರಾರಂಭಿಸಿದೆವು.

ತ್ ಪ್ಯಾಂಥರ್ಸ್ ಹುಟ್ಟನ್ನು ಅವರು ವಿವರಿಸುತ್ತಿದ್ದರು. "ರಿಪಬ್ಲಿಕನ್ ಪಾರ್ಟಿ ಸ್ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳ ಾದುದನ್ನು ಸಮಗ್ಗೆ ಅಂದರೆ ಯುವ ದಲಿತ ಗೆ ಸಹಿಸುವುದಾಗಲಿಲ್ಲ. 'ನಮ್ಮನ್ನು ನಾವು ಗ್ಲೋರಿಫೈ ಮಾಡಿಕೊಳ್ಳಲೂ ಬಾರದು' ಎಂಬುದನ್ನು ನಂಬಿದ್ದ ಯುವ ದಲಿತ ಮಿತ್ರರು ದಲಿತ್ ಪ್ಯಾಂಥರ್ಸ್ ಪ್ರಾರಂಭಿಸಲು ನಿರ್ಧರಿಸಿದರು. ಆಗ ಮರಾಠಿಯಲ್ಲಿ ಮೊದಲಬಾರಿಗೆ ಎಂಬಂತೆ 'ವಿದ್ರೋಹಿ' ಸಾಹಿತ್ಯ ಪ್ರಕಟವಾಗ ತೊಡಗಿತು. ಸಾಹಿತ್ಯದಲ್ಲಿ ಹೊಸ ಅಭಿವ್ಯಕ್ತಿ-ಮಾಧ್ಯಮ ಪ್ರತಿಮೆ-ಶಬ್ದಚಿತ್ರಗಳು ಮೂಡಿದವು. ಮರಾಠಿ ದಲಿತ ಸಾಹಿತ್ಯದಲ್ಲೇ ವಿಶಿಷ್ಟರಾದ ನಾಮದೇವ ಢಸಾಳ ಅವರ ಸಾಹಿತ್ಯ ಮರಾಠಿ ಮಡಿವಂತ ಸಾಹಿತಿಗಳಿಗೆ ಸುಡುವ



ದಲಿತಕವಿ ಕಾದಂಬರಿಕಾರ ದಯಾಪವಾರ್ ಮಾತುಕತೆ

ಬೆಂಕಿಯಾಯಿತು. ದಲಿತ್ ಪ್ಯಾಂಥರ್ಸ್ ಮಹಾರಾಷ್ಟ್ರದ ಮೂಲೆಗಳಲ್ಲಿಯೂ ಬೆಳೆಯತೊಡಗಿತು."

'ದಲಿತ್ ಪ್ಯಾಂಥರ್ಸ್' ಬಲಹೀನಗೊಳ್ಳುತ್ತಾ ಸಾಗಿದುದನ್ನೂ ದಯಾಪವಾರ್ ಇಳಿದನಿಯಲ್ಲಿ ಸ್ಪಷ್ಟವಾಗಿ ಹೇಳುತ್ತ ಸಾಗಿದರು. "ದಲಿತ್ ಪ್ಯಾಂಥರ್ಸ್‌ನ ಕೆಲ ಮುಂದಾಳುಗಳೂ ಕಾಂಗ್ರೆಸ್ ರಾಜಕೀಯದ ತಂತ್ರಕ್ಕೆ ಬಲಿಯಾದರು. ಕಾಂಗ್ರೆಸ್ ಸಂಸ್ಕೃತಿ ಪ್ಯಾಂಥರ್ಸ್ ಮುಂದಾಳುಗಳನ್ನೂ ಬಲಿ ತಗೊಂಡಿತು. ಒಳಜಗಳ—ಅಧಿಕಾರ ಲಾಲಸೆಗಳು ಬೆಳೆದವು. ವ್ಯಕ್ತಿಗಳ ವೈಯಕ್ತಿಕ ಬಯಕೆಗಳು ಆಂದೋಲನವನ್ನೇ ಮೊಟಕುಗೊಳಿಸಿದವು. ನಾಮದೇವ ಢಸಾಳ ಕಾಂಗ್ರೆಸ್- ಬಲ ಕಮ್ಯುನಿಸ್ಟ್ ವಲಯಗಳಲ್ಲಿ ಆಗೀಗ ಕಂಡುಬಂದರೆ ರಾಜಾಢಾಳೆ 'ಮಾಸ್ ಮೂವ್‌ಮೆಂಟ್' ಎಂಬ ಪ್ರತ್ಯೇಕ—ಆದರೆ ಅಷ್ಟು ಚುರುಕು ಇರದ ಸಂಘಟನೆ ಮಾಡಿಕೊಂಡಿದ್ದಾರೆ. ಅರುಣ ಕಾಂಬಳೆ, ಗಂಗಾಧರ ಗಾಡೆ ಅವರ ದಲಿತ್ ಪ್ಯಾಂಥರ್ಸ್ ಗುಂಪು ಚುರುಕಾಗಿ ಕೆಲಸ ಮಾಡುತ್ತಿದೆ."

ಪ್ರ: "ಮತಾಂತರದ ಬಗ್ಗೆ ನಿಮ್ಮ ಅಭಿಪ್ರಾಯ?

ದಯಾಪವಾರ್: ಈ ವಿಷಯದ ಬಗ್ಗೆ ನನ್ನ ಉತ್ತರವನ್ನು ಕ್ರೋಢೀಕರಿಸಿ 'ರವಿವಾರ' ಪತ್ರಿಕೆಯಲ್ಲಿ ಬರೆದಿರುವೆ. ಮತಾಂತರದಿಂದ ದಲಿತರ ಆರ್ಥಿಕ ಸಾಮಾಜಿಕ ಯಾವುದೇ ಸಮಸ್ಯೆಗಳು ಪರಿಹಾರಗೊಳ್ಳುವುದಿಲ್ಲ. ಸದ್ಯದ ಇಡೀ ವ್ಯವಸ್ಥೆ ಬದಲಾದಾಗ ಮಾತ್ರ ಮುಕ್ತ ಸಮಾಜ ವ್ಯವಸ್ಥೆ ನಿರ್ಮಾಣಗೊಳ್ಳುವುದು.

ದಲಿತ ನಾಯಕ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ದಾರಿ ಹಿಡಿದು ಬೌದ್ಧ ಧರ್ಮ ಅನುಸರಿಸಿದ ಹಲವಾರು ಜನ ದಲಿತರು ಮಾನಸಿಕವಾಗಿ ಇಂದು ಹಿಂದೂ-ಬೌದ್ಧ ಧರ್ಮಗಳೆರಡರ ನಡುವೆ ತೂಗಾಡುತ್ತಿದ್ದಾರೆ. ದಲಿತರ ಸಮಸ್ಯೆ ಧರ್ಮ ಬದಲಿ ಮಾಡಿಕೊಳ್ಳುವುದರಿಂದ ಬಗೆಹರಿಯುವಂಥದಲ್ಲ.

ಪ್ರಶ್ನೆ: ದಲಿತರು ಕಮ್ಯುನಿಸ್ಟರೊಂದಿಗೆ ಎಷ್ಟರ ಮಟ್ಟಿಗೆ ಒಟ್ಟಿಗೆ ಸೇರಿ ಹೋರಾಟ ಮಾಡಬಹುದು?

ದಯಾ: ದಲಿತರ ಪ್ರಥಮ ವೈರಿ ಯಾರೆಂಬುದನ್ನು ದಲಿತರು ಹಾಗೂ ಕಮ್ಯುನಿಸ್ಟರು ಅರಿತುಕೊಂಡು ಮುಂದಡಿಯಿಡಬೇಕು. ಜಮೀನ್ದಾರೀ-

ಮಂಗ್ಳೂರ ವಿಜಯ

ಜಾತೀವಾದಿ ಶಕ್ತಿ—ಬಂಡವಾಳಿಗರ ವಿರುದ್ಧ ಒಕ್ಕಟ್ಟಿನ ಹೋರಾಟ ಪ್ರಾರಂಭವಾಗಬೇಕು ದಲಿತರ ಒಬ್ಬ ವೈರಿಯ ವಿರುದ್ಧವಂತೂ ಕಮ್ಯುನಿಸ್ಟರು ಆಗಲೇ ಸಮರ ಸಾರಿದ್ದಾರೆ. ಜಾತೀವಾದದ ವಿರುದ್ಧವೂ ಪ್ರಾಮಾಣಿಕವಾಗಿ ಹೋರಾಟ ಹೂಡಲು ಕಮ್ಯುನಿಸ್ಟರು ಬಾರದಿದ್ದಾಗ ಈ ಬಗ್ಗೆ ಯೋಚನೆ ಮಾಡೋಣ. ಈಗಲೇ ಜಗಳ-ಆರೋಪ-ಪ್ರತ್ಯಾರೋಪ ಹಾಕುತ್ತಾ ಶ್ರಮ ವ್ಯರ್ಥಮಾಡಿಕೊಳ್ಳುವುದು ಸಲ್ಲ. ಮಹಾರಾಷ್ಟ್ರದಲ್ಲಿಯ ಕಮ್ಯುನಿಸ್ಟರಂತೂ ನೇರವಾಗಿ ದಲಿತ ವಿರೋಧಿ ಚಟುವಟಿಕೆ ಮಾಡುತ್ತಿಲ್ಲ. ಕರ್ನಾಟಕದಲ್ಲಿ ಹೇಗೋ ಕಾಣೆ. ಆದರೆ ಜಾತೀವಾದಿಗಳು ಕೆಲವರು ಕಮ್ಯುನಿಸ್ಟರಲ್ಲೂ ಇರುವುದಂತೂ ನನಗೂ ಕಂಡುಬಂದಿದೆ.

ಪ್ರಗತಿಪರ ಧೋರಣೆಯ ಸವರ್ಣೀಯರು ಜಾತಿ ವಿನಾಶದ ಕಾರ್ಯಕ್ರಮದಲ್ಲಿ ತೊಡಗುವುದು ಅತ್ಯಗತ್ಯವೆಂಬುದನ್ನು ಒತ್ತಿ ಹೇಳಿದ ದಯಾಪವಾರ್ ಗುಲ್ಬರ್ಗಾದ ದಲಿತ ಸಂಘರ್ಷ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದ ತಮ್ಮೆದುರೇ ಇದ್ದ ಹಲವಾರು ಜನ ಸವರ್ಣೀಯ ಮಿತ್ರರನ್ನು ಕಂಡು ಹೆಚ್ಚಿನ ಹೆಮ್ಮೆ ತೋರಿದರು.

ಗುಲ್ಬರ್ಗಾ ದಲಿತ ಸಂಘರ್ಷ ಸಮಿತಿಯ ಬಗ್ಗೆ ವಿವರವಾಗಿ ಕೇಳಿ ಟೇಪ್ ಮಾಡಿಕೊಂಡರು. ●

ನಾ ಕಂಡ ಪೇಜಾವರ

ಎಂ. ಮರಿಸ್ವಾಮಿ

ನನಗೆ ಧರ್ಮ ಮತ್ತು ಯೋಗಿಗಳ ಬಗ್ಗೆ
ತುಂಬಾ ಶ್ರದ್ಧೆ. ಅದರಲ್ಲೂ ಪ್ರಗತಿಪರ ವಿಚಾರ
ಗಳನ್ನು ಮೈಗೂಡಿಸಿಕೊಂಡಿರುವ ಯೋಗಿಗಳೆಂ
ದರೆ ಪಂಚಪ್ರಾಣ. ಸಮಾಜದಲ್ಲಿರುವ ಅಸ್ಪೃಶ್ಯತೆ
ಯನ್ನು ತೊಡೆದುಹಾಕಿ, ಬಡತನವನ್ನು ನಿರ್ಮೂ
ಲ ಮಾಡಿ ಹಿಂದೂ ಸಮಾಜವನ್ನು ಪವಿತ್ರ
ಗೊಳಿಸಬೇಕೆಂದು ಪೇಜಾವರ ಮಠಾಧೀಶರಾದ
ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರು ತಾವು
ಹೋದೆಡೆಗಳಲ್ಲೆಲ್ಲಾ ಆಶೀರ್ವಚನ ನೀಡುತ್ತಿರು
ವುದನ್ನು ಪತ್ರಿಕೆಗಳಲ್ಲಿ ಓದಿ ನಾನು ಆನಂದ
ಭರಿತನಾದೆ. ಒಂದು ಸಾರಿ ಅವರ ದರ್ಶನ
ಮಾಡಬೇಕೆಂಬ ಬಯಕೆ ಬೇರೂರಿತು.

ಕುತಂತ್ರದ ಕಥೆ

ಉಡುಪಿಗೆ ಹೋಗುವ ಅವಕಾಶ ಲಭಿಸಿತು.
ಬಹಳ ಸಂಭ್ರಮದಿಂದ ಮೊದಲು ದೇವರ ದರ್ಶನ
ಕ್ಕೆಂದು ಕೃಷ್ಣಮಠಕ್ಕೆ ಹೋದೆ. ದೇವಸ್ಥಾನದ
ಬಲ ಮಗ್ಗಲಿಗೆ ಸುಮಾರು 50 ಅಡಿ ಅಂತರದ
ಅಂಗಳದ ಒಂದು ಶಿಲಾ ಮಂಟಪದಲ್ಲಿ ದಾಸವ
ರೇಣ್ಯ ಕನಕದಾಸರ ಮೂರ್ತಿ ನಿಂತಿದೆ. ಆ
ಮೂರ್ತಿಗೆ ಎದುರಾಗಿ ದೇವಸ್ಥಾನದ ಕಲ್ಲಿನ
ಗೋಡೆಯಲ್ಲಿ ಮಾನವ ನಿರ್ಮಿತ ಕಿಟಕಿಯಂಥ
ಕಿಂಡಿಗಳಿವೆ. ಆವನ್ನು ನೋಡಿದಾಗ ನನ್ನ
ಮನುಸ್ಸು ಚಂಚಲವಾಯಿತು. ದೇವಸ್ಥಾನದ
ಒಳಗಡೆ ಕೂಡ ಗರ್ಭಗುಡಿಯ ಗೋಡೆಯಲ್ಲಿ
ಅಂಥದ್ದೇ ಕಿಂಡಿಗಳಿವೆ. ಹೊರ ಗೋಡೆಗೂ ಈ
ಅಂಗಳದ ಒಂದು ಶಿಲಾ ಮಂಟಪದಲ್ಲಿ ದಾಸವ
ರೇಣ್ಯ ಕನಕದಾಸರ ಮೂರ್ತಿ ನಿಂತಿದೆ. ಆ
ಮೂರ್ತಿಗೆ ಎದುರಾಗಿ ದೇವಸ್ಥಾನದ ಕಲ್ಲಿನ
ಗೋಡೆಯಲ್ಲಿ ಮಾನವ ನಿರ್ಮಿತ ಕಿಟಕಿಯಂಥ
ಕಿಂಡಿಗಳಿವೆ. ಅದನ್ನು ನೋಡಿದಾಗ ನನ್ನ
ಮನಸ್ಸು ಚಂಚಲವಾಯಿತು. ದೇವಸ್ಥಾನದ
ಒಳಗಡೆ ಕೂಡ ಗರ್ಭಗುಡಿಯ ಗೋಡೆಯಲ್ಲಿ
ಅಂಥದ್ದೇ ಕಿಂಡಿಗಳಿವೆ. ಹೊರಗೋಡೆಗೂ, ಈ
ಗೋಡೆಗೂ ಸುಮಾರು 50 ಅಡಿ ಅಂತರವುಂಟು.
ಗರ್ಭಗುಡಿಯನ್ನು ಸದಾ ಮುಚ್ಚಿರುವ ಕಾರಣ
ಯಾತ್ರಾರ್ಥಿಗಳೂ ಆ ಕಿಂಡಿಯಿಂದಲೇ ಚಿಕ್ಕ
ಮೂರ್ತಿಯ ದರ್ಶನ ಪಡೆಯಬೇಕು. ಇದನ್ನು
ನೋಡಿದ ಮೇಲಂತೂ ನನ್ನ ಮನಸ್ಸು ಇನ್ನೂ
ಕಸಿವಿಸಿಯಾಯಿತು. ದೇವರು ಮತ್ತು ಕನಕ
ದಾಸರು ಈರ್ವರ ಬಗ್ಗೆಯೂ ನನಗೆ ಸಿಟ್ಟು ಬಂತು.
ಸಾಮಾನ್ಯರಿಗೆ ಸಾನಿಧ್ಯ, ಪರಮಭಕ್ತನಿಗೆ ಕಿಂಡಿ
ಯಿಂದ ದರ್ಶನ ಕೊಡುವ ಇವನೆಂಥಾ ಅಯೋಗ್ಯ
ದೇವರಿರಬೇಕು ಎನಿಸಿತು. ತಕ್ಷಣ, ಪಾಪ! ದೇವ
ಸ್ಥಾನ, ದೇವರ ಮೂರ್ತಿ ಇವೆಲ್ಲಾ ಮಾನವ
ನಿರ್ಮಿತವಲ್ಲವೇ! ದೇವರನ್ನೇಕೆ ಬೈಯ್ಯಬೇಕೆಂ
ದುಕೊಂಡೆ. ಶಿಷ್ಯವೃತ್ತಿಯಲ್ಲಿದ್ದಾಗಲೇ ಎಲ್ಲೆ
ಲ್ಲೂ ಭಗವಂತನನ್ನು ಕಂಡ ಆ ಕನಕದಾಸರೇಕೆ
ಈ ರೀತಿ ಕೃಷ್ಣದರ್ಶನಕ್ಕೆ ಬಂದು ತಮ್ಮ ಅವಿ
ವೇಕದ ಫಲವನ್ನು ನಾವೆಲ್ಲಾ ತಲಾತಲಾಂತರ
ಅನುಭವಿಸುವಂತೆ ಮಾಡಬೇಕಾಗಿತ್ತು? ಎಂದಿತು
ಮನಸ್ಸು. ಆ ಕ್ಷಣ ವಿಚಾರದ ಮಿಂಚು ಹೊಳೆ
ಯಿತು: ಕನಕನ ಪ್ರತಿಭೆಗೆ ಅಸೂಹೆ ಪಡುತ್ತಿದ್ದ
ಡಾಂಬಿಕ ಶಿಷ್ಯಮಂಡಲಿಯ ಕುತಂತ್ರದ ಕಥೆ.

ಮಠ ಎಂಬ ಅರಮನೆ

ಆನಂತರದ ಅಷ್ಟಮಠಗಳನ್ನು ಒಂದೊಂದಾಗಿ
ನೋಡಿಕೊಂಡು ಹೋದೆ. ಗತಿಹೀನ ಸಮಾಜ
ದಿಂದ ಬಂದ ನನಗೆ ಆ ಮಠಗಳೊಂದೊಂದೂ
ಅರಮನೆಯಂತೆ ಕಂಡವು. ಆ ಮಠಗಳಿಗೆ ಉಪ
ಯೋಗಿಸಿರುವ ಬೃಹದಾಕಾರದ ಬೆಲೆಬಾಳುವ
ಮರದ ಕಂಬಗಳು, ಅಂದವಾದ ಕಿಟಕಿ-ಬಾಗಿಲು
ಗಳು, ಸಾವಿರಾರು ತೊಲೆ-ಜಂತಿಗಳು ಇದೆಲ್ಲಾ
ಕಂಡು ಬೆರಗಾದೆ. ಆಧ್ಯಾತ್ಮದ ತಿರುಳನ್ನು ಬಲ್ಲ
ವೈರಾಗ್ಯ ಮೂರ್ತಿಗಳಾದ ಯತಿಗಳಿಗಾಗಿ ಈ
ಭವ್ಯ ಭವನಗಳು ಬೇಕೆ? ಎಂದಿತು ಮನಸ್ಸು.
ಈ ಒಂದೊಂದು ಮಠಕ್ಕೂ ಖರ್ಚಾಗಿರುವ ಹಣ
ದಲ್ಲಿ ಸುಮಾರು ಸಾವಿರಾರು ವಸತಿಹೀನ ನಿರ್ಗತಿಕ
ರಿಗೆ ಮನೆಕಟ್ಟಿಸಿಕೊಟ್ಟು, ಅವರ ದೇವರಿಗಿರುವ
"ದೀನ ರಕ್ಷಕ'' ನೆಂಬ ಬಿರುದನ್ನು ಸಾರ್ಥಕಪಡಿಸ
ಬಹುದಾಗಿತ್ತು.

ಹರಿಜನೊಧ್ಧಾರ !

ಪೇಜಾವರ ಮಠಕ್ಕೆ ಹೋದೆ. ಆ ಮಠವೂ
ಚಿಕ್ಕ ಅರಮನೆಯೇ. ನೂರಾರು ಕೊಠಡಿಗಳಿವೆ.
ಸ್ವಾಮೀಜಿಯವರ ದರ್ಶನನಾಗಬಹುದೆಂಬ ಆಸೆ
ಯಿತ್ತು. ಆದರೆ ಸ್ವಾಮೀಜಿಯವರು ಪರ್ಯಟನ
ದಲ್ಲಿರುವುದಾಗಿ ಗೊತ್ತಾಯಿತು. ನನಗೆ ಸುಮಾ
ರು 21-22 ವಯಸ್ಸಿನ ತರುಣರು ಭೇಟಿಯಾ
ದರು. ನಾನು ಕುತೂಹಲದಿಂದ ಸ್ವಾಮೀಜಿ
ಯವರ ಬಗ್ಗೆ, ಮಠದಬಗ್ಗೆ ಮತ್ತು ಅಲ್ಲಿನ
ವ್ಯವಸ್ಥೆ ಬಗ್ಗೆ ಅವರನ್ನು ವಿಚಾರಿಸಿದೆ. ಸ್ವಾಮೀಜಿ
ಯವರು ಇರಲು ಬಿಡಾರದ ಕೊಠಡಿ ಸಾಕು, ಈ
ನೂರಾರು ಕೊಠಡಿಗಳು ಏಕೆ? ಎಂದೆ. ಅವೆಲ್ಲಾ
ವಿದ್ಯಾರ್ಥಿಗಳಿಗೆ ಮತ್ತು ಕ್ಷೇತ್ರದರ್ಶನಕ್ಕೆ ಬರುವ
ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಎಂದು ಹೇಳಿ
ದರು. ಸುಮಾರು ಎಷ್ಟು ವಿದ್ಯಾರ್ಥಿಗಳಿದ್ದಾರೆ
ಈ ಮಠದಲ್ಲಿ ಎಂದೆ. ಸುಮಾರು 140 ವಿದ್ಯಾ
ರ್ಥಿಗಳಿದ್ದಾರೆ ಎಂದರು. ಆ ಪೈಕಿ ಎಷ್ಟು ಹರಿ
ಜನ ವಿದ್ಯಾರ್ಥಿಗಳಿದ್ದಾರೆ ಎಂದೆ. ಅವರು ಸ್ವಲ್ಪ
ಕಸಿವಿಸಿಗೊಂಡು ಯಾರೂ ಇಲ್ಲವೆಂದರು. ಹಾಗಾ
ದರೆ ಪೂಜ್ಯಪಾದರು ಹರಿಜನರ ಉದ್ಧಾರ ಬಗ್ಗೆ
ನೀಡುವ ಭಾಷಣಕ್ಕೆ ಬೆಲೆ ಏನು? ಎಂದು ಕೇಳಿದೆ.
ಅವರ ಮುಖ ಕಪ್ಪಿಟ್ಟಿತು. ಈ ಪ್ರಶ್ನೆಯಿಂದ
ನಾನೂ ಸಹ ಹರಿಜನನೆಂದು ಅವರಿಗೆ ಭಾಸ

ವಸ್ತುಸ್ಥಿತಿ

ವಾಯಿತು.

ಕೈಂಕರ್ಯ ಮತ್ತು ಸ್ಮಾರ್ತ

ಅವರು ನನ್ನನ್ನು ಸಮಾಧಾನ ಪಡಿಸುತ
"ಹಾಗಲ್ಲ, ಸ್ವಾಮೀಜಿಯವರೇನೋ ಹರಿ
ವಿದ್ಯಾರ್ಥಿಗಳನ್ನು ಬೇಕಾದರೆ ಸೇರಿಸಿಕೊ
ಬಹುದು ಆದರೆ ಇತರ ಮಠದವರು ಅವ
ವಿರೋಧಿಗಳಾಗುತ್ತಾರಲ್ಲಾ, ಎಂದರು. ಹಾ
ದರೆ ಉಡುಪಿಯಲ್ಲೇ ಅವರ ಮಾತಿಗೆ ಬೆಲೆಯಿ
ವೆಂದಮೇಲೆ ಇತರರು ಹೇಗೆ ಬೆಲೆ ಕೊಡುತ್ತಾ
ಎಂದೆ. ಅವರ ಮುಖದ ಮೇಲೆ ಕೋಪದ ಛಾ
ನೋಡಿ ನಾನು ಮಾತು ಬದಲಾಯಿಸಿ
ಇಲ್ಲಿನ ಹರಿಜನರಿಗೆ ಮಠಕ್ಕೆ ಬರಲು ಅವಕಾ
ವುಂಟೇ ಎಂದು ಕೇಳಿದೆ. ಓಹೋ! ಅನೇಕ
ಮಠದಲ್ಲಿ ಕೆಲಸಕ್ಕಿದ್ದಾರಲ್ಲ ಎಂದರು. ಏ
ಕೆಲಸ ಮಾಡುತ್ತಾರೆ? ಎಂದೆ. ಅದೇ ದ
ಕಾಯುವ, ಕೊಟ್ಟಿಗೆ ಶುಚಿ ಮಾಡುವ, ಸೌ
ಹೊಡೆಯುವ ಮುಂತಾದ ಕೈಂಕರ್ಯ ಮಾ
ತ್ತಾರೆ ಅಂದರು. ಓಹೋ ಧನಿಕರ ಮನೆಯ
ಮಾಡುವ ಜೀತದ ಕೆಲಸಕ್ಕೆ ಇಲ್ಲಿ ನೀವು ಕೈ
ಕರ್ಯ ಎನ್ನುತೀರಿ ಅಷ್ಟೆ ಅಂದೆ. ನನ
ಸ್ವಾಮೀಜಿಯವರಿಗೆ ಜಾತಿಯಲ್ಲಿ ನಂಬಿಕೆಯಿ
ನಾನು ಹುಟ್ಟು ಸ್ಮಾರ್ಥ. ಆದರೂ ನನಗೆ ಅವ
ಮಠದ ವ್ಯವಹಾರ ವಹಿಸಿದ್ದಾರೆ ನೋಡಿಯೆ
ದರು. ಸ್ಮಾರ್ಥರು ಎಂದರೆ ನೀವೂ ಬ್ರಾಹ್ಮಣ
ತಾನೆ ಎಂದೆ. ಹಾಗಲ್ಲ, ಬ್ರಾಹ್ಮಣರಲ್ಲಿ
ಮಾಧ್ವರು, ವೈಷ್ಣವರು ಮತ್ತು ಸ್ಮಾರ್ಥ
ಬೇರೆ ಬೇರೆ. ನಮ್ಮಲ್ಲೇ ಪರಂಪರಾಗತವಾ
ಹಗೆತನ, ದ್ವೇಷವುಂಟು. ಇತ್ತೀಚೆಗೆ ಬದಲ
ವಣೆಯಾಗುತಿದೆ. ತ್ರಿಮಥಸ್ತರು ಒಂದಾಗು
ಪ್ರಯತ್ನಗಳು ನಡೆಯುತ್ತಿವೆ. ಅದರ ಸಂಕೇ
ವಾಗಿ ಸ್ಮಾರ್ಥನಾದ ನನಗೆ ವ್ಯವಹಾರವ
ವಹಿಸಿ ಕೊಟ್ಟಿದ್ದಾರೆ ನೋಡಿ ಎಂದರು.
ವಾಗಿಲ್ಲ ಹಾಗಾದರೆ, ಮುಂದಿನ ಪರ್ಯಾ
ಪೀಠಕ್ಕೆ ನಿಮ್ಮನ್ನೇ ಕೂಡಿಸಬಹುದಲ್ಲಾ ಎ
ನಾನು. ಅಯ್ಯೋ! ಅದು ಹೇಗೆ ಸಾಧ್ಯ ಎಂದು
ರಿಸುತ್ತಾ ಮಂಕಾದರು.

ದುರ್ಗತಿಗೆ ಮೂಲ

ದೇವರ ಬಗ್ಗೆ, ಧರ್ಮದ ಬಗ್ಗೆ ಮತ್ತು ಪ್ರ
ಪರ ಯತಿಗಳ ಬಗ್ಗೆ ಇರುವ ನನ್ನ ನಂಬ
ಆಧಾರವಿಲ್ಲವೆಂಬ ಸತ್ಯದರ್ಶನವಾಯ್ತು. "ಶ
ಓದೋಕೆ; ಬದನೆ ಕಾಯಿ ತಿನ್ನೋಕೆ, ಭಾ
ಪ್ರಚಾರಕ್ಕೆ ಆಚಾರ ಮಠಾಚಾರಕೆ" ಇದೇ ನ
ದೇಶದ ದುರ್ಗತಿಗೆ ಮೂಲ ಎಂದು ಕೊಂಡೆ.

ಹಾರುವರೊಳಗಿನ ಹೊಲೆಯರ ಪಾಡು

ಬ್ರಾಹ್ಮಣರೊಳಗೇ 'ಮಾರಕರು', 'ಹಳೇ ಪೈಕದವರು', 'ಮಧ್ಯಾಹ್ನ ಬ್ರಾಹ್ಮಣ ದಿನವೆಲ್ಲ ಹೊಲೆಯ'ಎಂಬ
ರುಗಳಿಂದ ಪ್ರಚಾರದಲ್ಲಿರುವ ಕೋಮೊಂದಿದೆ. ಈ ಕೋಮಿನ ಕೆಲವರ ಮನೆ ದೇವರು, ಹೆಸರುಗಳು ಶೂದ್ರ
ಲದವುಗಳಾಗಿದ್ದು, ಕೆದಕುತ್ತಾ ಹೋದಂತೆ ಅನೇಕ ಸಂದೇಹಗಳನ್ನೂ ಕುತೂಹಲವನ್ನೂ ಹುಟ್ಟಿಸು
ತೆ. ಬ್ರಾಹ್ಮಣ ಸಮಾಜದಿಂದ ಬಾರಿ ಹೊಡೆತತಿಂದಿರುವ ಇವರು ಅವರೊಂದಿಗೆ ಸರಿ ಸಮಾನವಾಗಿ ನಿಲ್ಲಲು
ಗಿ ಕಷ್ಟ ನೋವು ಅವಮಾನಗಳನ್ನು ಅನುಭವಿಸಿದ್ದರೂ ಇಂದೂ ಬಹಳಷ್ಟು ಜನ ತಾವೂ ಅಪ್ಪಟ ಬ್ರಾಹ್ಮ
ೇ ಅನ್ನುವ ರೀತಿಯಲ್ಲಿ ವ್ಯವಹರಿಸುತ್ತಿದ್ದಾರೆ.

ಮುಖ್ಯವಾಗಿ ಮೈಸೂರು ಜಿಲ್ಲೆಯ ದಕ್ಷಿಣ
ಲ್ಲೂಕುಗಳಲ್ಲಿ ಅಂದರೆ ಗುಂಡ್ಲುಪೇಟೆ, ಚಾಮ
ಜನಗರ, ಕೊಳ್ಳೇಗಾಲ. ಟಿ. ನರಸೀಪುರ,
ಜನಗೂಡು ಮತ್ತು ಮೈಸೂರು ತಾಲ್ಲೂಕು
ಲ್ಲಿ ದಟ್ಟವಾಗಿಯೂ, ಹುಣಸೂರು, ಕೆ. ಆರ್.
ರ (ಎಡತೊರೆ) ತಾಲ್ಲೂಕುಗಳಲ್ಲಿ ವಿರಳ
ಗಿಯೂ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ,
ಳವಳ್ಳಿ ಮದ್ದೂರು, ಬೆಂಗಳೂರು ಜಿಲ್ಲೆಯ
ಕಪುರ, ಮಾಗಡಿ ತಾಲ್ಲೂಕುಗಳಲ್ಲಿ, ತಮಿಳು
ಡಿನ ತಾಳವಾಡಿ ಫಿರ್ಕಾದಲ್ಲೂ ಮೂಲತಃ
ಗಿ ಕಂಡು ಬರುವ ಜಾತಿಗಳಲ್ಲಿ ಒಂದು 'ಹಳೆ
ಡು ಕರ್ನಾಟಕದ'ದವರು. ಇದೇ ಜಾತಿಗೆ
ರಕರು' 'ಹಳೆಪೈಕದ'ವರು, 'ಮಧ್ಯಾಹ್ನದ
ಹ್ಮಣದಿನವೆಲ್ಲ ಹೊಲೆಯ" –ಈ ಹೆಸರುಗಳು
ಪರ್ಯಾಯವಾಗಿ ಪ್ರಚಾರದಲ್ಲಿದ್ದು, ಈಚೀಚೆಗೆ
ಮೆಯಾಗುತ್ತಿದೆ. ಇವರಲ್ಲಿ ಮೂರು ಪ್ರಭೇಧ
ವೆ. ಮೂಗೂರು ಫಿರ್ಕಾ, ಬಂಡಳ್ಳಿ ಫಿರ್ಕಾ
ತ್ತು, ಸೋಸಲೆ ಫಿರ್ಕಾ.

ಚಾರಿತ್ರಿಕವಾಗಿ ಹಾಗೂ ದಂತಕಥೆಗಳ ಆಧಾ
ಮೇಲೆ ಈ ಕೋಮಿನಮೂಲವನ್ನು ಹೀಗೆ
ರ್ಮಾಡಿಕೊಳ್ಳಬಹುದು.

೧) ಹಳೆನಾಡು ಕರ್ನಾಟಕದವರು ಮೂಲತಃ
ದ್ರಗುಂಪಿಗೆ ಸೇರಿದವರು. ಹಿಂದಿನ ಕಾಲದಲ್ಲಿ
ಹ್ಮಣ ಸಂಸ್ಕೃತಿ ಸಮಾಜದ ಆಶಯವಾದ್ದ
ದ ಕೆಲವು ಜನರು ಆ ಕೋಮಿಗೆ ಆಕರ್ಷಣೆ
ಂದಿದರು. ಆದರೆ, ಆ ಹೊತ್ತಿಗಾಗಲೇ
ಹ್ಮಣರೆಂದು ಪ್ರತಿಷ್ಠಿತರಾಗಿದ್ದವರು ಅವ
ನ್ನು ಬ್ರಾಹ್ಮಣಮತದೊಳಕ್ಕೆ ಬರಗೊಡಲು
ಕಾಶಕೊಡದೆ, ಅವರನ್ನು ಬ್ರಾಹ್ಮಣತ್ವವನ್ನು
ಶಮಾಡುವವರು ಎಂದು ದೂಷಿಸಿ 'ಮಾರಕ'
ಎಂದು ಕರೆದರು. ಅವರು ದೇವಸ್ಥಾನದೊ
ನುಗ್ಗುವುದಕ್ಕೆ ಬಿಡಲಿಲ್ಲ. ಬ್ರಾಹ್ಮಣ
ಮಾಜದೊಂದಿಗೆ ವ್ಯವಹರಿಸಲು ಅವಕಾಶ
ಡಲಿಲ್ಲ, ಪೂಜೆ ಮಾಡಲು ಅನುಮತಿ ನೀಡ
. ಹಾಗೆ ನಿಯಮವನ್ನು ಧಿಕ್ಕರಿಸಿದವರ
ಲೆ ಮೃವಸ್ಥಿತ ಹಲ್ಲೆ ನಡೆಸಲಾಯಿತು. ನಂಜನ
ಡಿನ ಶ್ರೀ ಕಂಠೇಶ್ವರ ದೇವಸ್ಥಾನದೊಳಕ್ಕೆ
ಗ್ಗಬೇಕೆಂದು ಹದಿನೆಂಟನೆಯ ಶತಮಾನದ
ನೆಯಲ್ಲಿ ಹಳೆನಾಡು ಕರ್ನಾಟಕದವರು
ಯತ್ನ ನಡೆಸಿದಾಗ ಅವರನ್ನು ತಡೆ

ಹಿಡಿಯಲಾಯಿತು. ನಂಜನಗೂಡಿನ ಸುತ್ತ ಮುತ್ತಲ ಈ ಜನ ದೇವಸ್ಥಾನದೊಳಕ್ಕೆನುಗ್ಗಲು ಪ್ರಯತ್ನ ನಡೆಸುತ್ತಿರುವ ಸಂಗತಿ, ಆಗಿನ ದಿವಾನ್ ಪೂರ್ಣಯ್ಯನವರಿಗೆ ಗೊತ್ತಾಗಿ, ಆತ ಶ್ರೀರಂಗಪಟ್ಟಣದಿಂದ ಸೈನ್ಯತರಿಸಿ, ನಂಜನಗೂಡಿನ ಸುತ್ತಮುತ್ತಲ ಹಳ್ಳಿಹಳ್ಳಿಗಳಿಗೆ ನುಗ್ಗಿಸಿ, ಸುಮಾರು 700-800 ಜನ ಹಳೆನಾಡು ಕರ್ನಾಟಕದವರನ್ನು ಕೊಲ್ಲಿಸಿದನು. ಇತ್ತೀಚಿಗೆ 'ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಶುಕನಾಶಿ ಅಂಕಣ ಪ್ರವೇಶದ ಚಳವಳಿ (1928-29ರಲ್ಲಿ)'ಯನ್ನು ಕುರಿತು ಈ ಜಾತಿಯ ಹೋರಾಟಗಾರರಲ್ಲಿ ಒಬ್ಬರಾದ ಶ್ರೀ ತಗಡೂರು ರಾಮಚಂದ್ರರಾಯರು ತಮ್ಮ 'ಮೂಗೂರು ಕರ್ನಾಟಕ ಬ್ರಾಹ್ಮಣರು' ಪುಸ್ತಕದ 7-8ನೇ ಪುಟದಲ್ಲಿ ವಿವರಿಸಿದ್ದಾರೆ. (ಪುಸ್ತಕ ಪ್ರಕಟಣೆ, 1947).

೨ ಮೂಲತಃ ಈ ಕೋಮು ನಿಮ್ನ ವರ್ಗಕ್ಕೆ ಸೇರಿದ ಒಂದು ಪಂಗಡವಾಗಿತ್ತು. ನೂರಾರು ವರ್ಷಗಳ ಹಿಂದೆ ಮೈಸೂರು ಜಿಲ್ಲೆಯ ಹಳ್ಳಿಗಳಲ್ಲಿ ಅಸ್ಪೃಶ್ಯರಂತೆ ಬದುಕುತ್ತಿದ್ದವರು ಒಮ್ಮೆ ಆದಿಕರ್ನಾಟಕದವರಿಗೂ ಇವರಿಗೂ ಊರದೇವತೆಗೆ ಬಲಿ ಕೊಡುವ ಸಂದರ್ಭದಲ್ಲಿ ಜಗಳ ಬಂದು ಇವರು ಅವರಿಂದ ಬೇರೆಯಾಗಿ ತಮ್ಮನ್ನು ಹಳೆನಾಡಿನವರೆಂದು ಕರೆದುಕೊಂಡರು. ಅಂದಿನ ಸಮಾಜದ ಆಶಯವಾಗಿದ್ದ ಬ್ರಾಹ್ಮಣ ಸಂಸ್ಕೃತಿಯತ್ತ

ಮಾರಕ

ಒಲವು ತೋರಿಸಿದರು. ಗುಂಡ್ಲು ಪೇಟೆ ತಾಲ್ಲೋಕು ಬೇಗೂರು ಹೋಬಳಿಯ ಮುಖ್ಯಸ್ಥರಲ್ಲೊಬ್ಬರಲ್ಲಿ ನಾನು ಮಾತನಾಡುತ್ತಿದ್ದಾಗ ಬಂದ ಮಾತುಗಳನ್ನು ಇಲ್ಲಿ ಬರೆಯಲು ಇಚ್ಛಿಸುತ್ತೇನೆ. 'ಅಲ್ಲಾ ಸ್ವಾಮಿ, ಇವತ್ತು ಇವರೆಲ್ಲ ಬ್ರಾಹ್ಮಣ್ರು ಬ್ರಾಹ್ಮಣ್ರು ಅಂತ ಕುಣದಾಡ್ತಾರಲ್ಲಾ ಹಿಂದೆಲ್ಲ ಇವ್ರು ಬ್ರಾಹ್ಮಣ್ರೇ ಆಗಿದ್ರಾ ? ಇವರನ್ನೆಲ್ಲ ನಮ್ಮಜ್ಜ ಮುತ್ತಜ್ಜನಕಾಲದಲ್ಲಿ ನಮ್ಮ (ಲಿಂಗಾಯತ್ರು ಹಟ್ಟಿ ಒಳಕ್ಕೂ ಬಿಟ್ಕೊಂತಿರ್ಲಿಲ್ಲ. ಕುಡಿಯಕ್ಕೆ ನೀರ್ಕೊಟ್ರೆ ಹುಳಿ ಹಾಕ್ಕೊತ್ತಿದ್ರು. ಕುಳಿತಿದ್ದ ಜಾಗಕ್ಕೆ ಸಗಣಿ ನೀರು ಎರಚತಿದ್ರು. ಆದಿ ಕರ್ನಾಟಕದವರಿಂದ ಬ್ಯಾರೆ ಅಂತ ಹೇಳಕ್ಕೆ ಇವರ್ನ ಹಳೆನಾಡ್ನವ್ರು ಅಂತ ಕರದ್ರು'.

೩ ಆದಿ ಶಂಕರಾಚಾರ್ಯರು ಕೇರಳದ ಕಾಲಟಿಯಿಂದ ಹೊರಟು ಮತ್ತೆ ವಾಪಸ್ಸು ಬಂದಾಗ ಒಂದು ಗುಂಪು ಅವರನ್ನು ತಿರಸ್ಕರಿಸಿತು. ಆಗ ಶಂಕರಾಚಾರ್ಯರುಅಥವಾ ಅವರ ಅನುಯಾಯಿಗಳು ಆ ಗುಂಪನ್ನು 'ಮಾರಕ' ಅಂತ ಕರೆದರು. ಅಂದಿನಿಂದ ಆ ಗುಂಪಿಗೆ 'ಮಾರಕರು' ಅನ್ನುವ ಹೆಸರು ಬಂತು. 'ಮಾರಕ' ಅಂದರೆ 'ಕೆಟ್ಟವನು' ಎಂಬ ಅರ್ಥ ಇದೆ. ಈ ಮಾತು ನಿಜವೇ ಆಗಿದ್ದರೆ ಕೇರಳದಲ್ಲಿ 'ಮಾರಕರ' ಗುಂಪು ಇರಬೇಕಾಗಿತ್ತು.

೪ ತಮ್ಮ ಗುರುಗಳಾದ ಶೃಂಗೇರಿ ಮಠದವರಿಗೆ ಕೊಡುತ್ತಿದ್ದ ಕಪ್ಪ ಕಾಣಿಕೆಯನ್ನು ಕೊಡದೆ ನಿಲ್ಲಿಸಿದ್ದರಿಂದ ಸುಮಾರು 300ವರ್ಷಗಳ ಹಿಂದಿನ ಶೃಂಗೇರಿ ಸ್ವಾಮಿಗಳು ಇವರನ್ನು ಬ್ರಾಹ್ಮಣ ಜಾತಿಯಿಂದ ಹೊರಹಾಕಿದರು.

ಈ ನಾಲ್ಕುಕಾರಣಗಳು ಈ ಜಾತಿಯ ಮೂಲದ ಬಗ್ಗೆ ನಮ್ಮನ್ನು ಕೆದಕುತ್ತವೆ.

ಇದರೊಂದಿಗೆ ಇಲ್ಲಿ ನನ್ನದೇಆದ ಎರಡು ಸ್ವಂತ ಅನುಭವಗಳನ್ನು ಬರೆಯಲು ಇಚ್ಛಿಸುತ್ತೇನೆ : 1962ನೆಯ ಇಸವಿಯಲ್ಲಿ ನಾನು ಬಬ್ಬೂರು ಕಮ್ಮೆ ಬ್ರಾಹ್ಮಣರೊಬ್ಬರ ಮನೆಯಕೆಲಸಗಳನ್ನು ಮಾಡುತ್ತಿದ್ದೆ. ಒಮ್ಮೆನಾನು ಅವರಿಗೆ ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಬಳಿಯಿಂದ ಕೃಷ್ಣಮೂರ್ತಿಪುರಂನ ಅವರ ಮನೆಗೆ ಸಕ್ಕರೆ ತಂದು ಕೊಟ್ಟೆ. ಅದಕ್ಕೆ ಕೂಲಿಯಾಗಿ ನನಗೆ ಅವರು ಒಂದು ಲೋಟ ಕಾಫಿ ಕೊಟ್ಟರು. ಕಾಫಿ ಕುಡಿದ ಲೋಟವನ್ನು ಅವರ ಮನೆಯ ವರಾಂಡದ ಒಂದು ಮೂಲೆಯಲ್ಲಿ ಇರಿಸಲು ಹೇಳಿದರು. ಅದರಂತೆ ಇರಿಸಿದೆ. ಅನಂತರ ಆ ಮನೆಯ ಹುಡುಗಿ ಆ ಲೋಟವನ್ನು ಹುಳಿಹಚ್ಚಿ ತೊಳೆದುಕೊಂಡಳು. ಹೈಸ್ಕೂಲು ಓದುತ್ತಿದ್ದ ನನಗೆ ತೀರ ಸಂಕೋಚವಾಯಿತು.

1969ರಲ್ಲಿ ನಾನು ಕನ್ನಡ ಎಂ.ಎ. ಓದುತಿದ್ದಾಗ ಒಬ್ಬ ಮಾಧ್ವ ಬ್ರಾಹ್ಮಣರ ಮನೆಗೆ ಬಾಡಿಗೆ ಕೇಳಲು ಹೋದೆ. ಜಾತಿ ಕೇಳಿದರು. ನನಗೆ ಬಲು ಮುಜುಗರವಾಯಿತು. ನನ್ನ ಬಳಿ ನಿಂತಿದ್ದ, ಹೈಸ್ಕೂಲ್ ಓದುತ್ತಿದ್ದ ಅವರ ಮೊಮ್ಮಗ 'ಮಾರ್ಕರು' ಅಂತ ಉತ್ತರಿಸಿದ. ಮನೆಯ ಒಡೆಯರಿಗೆ ನನಗೆ ರೂಮು ಕೊಡಲು ಹಿಂಜರಿಕೆಯಾಯಿತು. ಆದರೆ ನಿಲ್ಲುವುದಕ್ಕೆ ನೆಲೆಯಿಲ್ಲದೆ ಒದ್ದಾಡುತ್ತಿದ್ದ ನನ್ನ ನೋವು ಅವರಿಗೆ ನನ್ನ ನಿರಾಶೆಯ ಮುಖದ ಮೂಲಕ ಅರ್ಥವಾಯಿತೋ ಏನೋ-ಅವರು "ರೂಮು ಬೇಕಾದ್ರೆ ಕೊಡ್ತೇನೆ, ನಮ್ಮ ಲ್ಯಾವಟರಿ ಪಕ್ಕದಲ್ಲಿರೋದು. ಒಪ್ಗೆ ಆದ್ರೆ ಇರು". ಅಂದರು. ಸಧ್ಯ, ರೂಮು ಸಿಕ್ಕಿತಲ್ಲಾ ಅನ್ನುವ ಸಂತೋಷದಿಂದ, ಆ ಲ್ಯಾವಟರಿ ಪಕ್ಕದ ರೂಮಿನಲ್ಲೇ ಒಂದೂವರೆ ವರ್ಷಗಳು ಉಳಿದು ಎಂ. ಎ. ಓದಿದೆ.

[10ನೇ ಪುಟ ನೋಡಿ]

ವಿಶ್ವವಿದ್ಯಾನಿಲಯಗಳ ಕಾಮ ಪಿಶಾಚಿಗಳು : ಮ

(ಮೊದಲ ಪುಟದಿಂದ)

ಸಸ್ಯಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ಪ್ರಾಧ್ಯಾಪಕನೊಬ್ಬ ಅಕ್ಕಮಹಾದೇವಿ ಎಂಬ ವಿದ್ಯಾರ್ಥಿನಿಯೊಬ್ಬಳನ್ನು ಹಠ ಸಂಭೋಗ ಮಾಡಿದ್ದರಿಂದ ಅವಳು ವಿದ್ಯಾರ್ಥಿನಿಲಯದ ತನ್ನ ಕೋಣೆಯಲ್ಲಿ ಸುಟ್ಟುಕೊಂಡು ಸತ್ತಳು.

ಕಾಮರ್ಸ್ ಪ್ರಾಧ್ಯಾಪಕನೊಬ್ಬ ಬೆಳಗಾವಿಯಿಂದ ಧಾರವಾಡಕ್ಕೆ ಬರುವಾಗ ರಾತ್ರಿ ಸಮಯದಲ್ಲಿ ಕುಡಿದು ಮತ್ತನಾಗಿ ಮುಂದುಗಡೆ ಸೀಟಿನಲ್ಲಿ ಕುಳಿತ ಹುಡುಗಿಯೊಬ್ಬಳ ಕುಚ ಮರ್ದನಕ್ಕೆ ಪ್ರಯತ್ನಿಸಿದಾಗ ಬಸ್ಸಿನಲ್ಲಿದ್ದವರೆಲ್ಲ ಛೀಮಾರಿ ಹಾಕಿದರು. ಆತ ಗುಂಡಿನ ಮತ್ತಿನಲ್ಲಿ 'I am head of the commerce department' ಎಂದು ಚೀರಾಡುತ್ತಿದ್ದನಂತೆ. ಬಸ್ಸು ಪೋಲೀಸ್ ಸ್ಟೇಶನ್ ತಲುಪಿದಾಗಲೇ ಅವನಿಗೆ ಪ್ರಜ್ಞೆ ಬಂದದ್ದು.

ಕರ್ನಾಟಕ ವಿಶ್ವವಿದ್ಯಾನಿಲಯದ ಹಾಸ್ಟೆಲುಗಳ ಮೆಸ್ ಅನ್ನು ಕಾಂಟ್ರ್ಯಾಕ್ಟ ಕೊಡುವ ವ್ಯವಸ್ಥೆಯಿತ್ತು. ಪ್ರತಿ ವರ್ಷ ಬೇರೆ ಬೇರೆಯವರಿಗೆ ಕಾಂಟ್ರ್ಯಾಕ್ಟ ಕೊಡುವ ಸಾಧ್ಯತೆಗಳೂ ಇದ್ದವು. ಇದೇ ಪ್ರಾಧ್ಯಾಪಕ ವಾರ್ಡನ್ ಆಗಿದ್ದಾಗ ಅಕ್ಕಿಯಲ್ಲಿಯ ಕಲ್ಲು ಆರಿಸಲು ಬರುವ ಹೆಂಗಸರಲ್ಲಿ ಸುಂದರ ಹುಡುಗಿಯೊಬ್ಬಳು ಇದ್ದಳು. ಅವಳ ಮೇಲೆ ಕಣ್ಣಿಟ್ಟ ಇವನು ಆ ಕಾಂಟ್ರ್ಯಾಕ್ಟರನನ್ನು ಕರೆಸಿ ಹುಡುಗಿಯನ್ನು ಒಪ್ಪಿಸಲು ಹೇಳಿದ. ಇಲ್ಲದಿದ್ದರೆ ಮುಂದಿನ ಸಲ ಕಾಂಟ್ರ್ಯಾಕ್ಟ ರದ್ದು ಮಾಡುವುದಾಗಿ ತಿಳಿಸಿದ. ಇಂಥ ಚಿಕ್ಕ ಕೆಲಸ ಮಾಡಲು ಕಾಂಟ್ರ್ಯಾಕ್ಟರ್ ಹೇಸಲಿಲ್ಲ.

ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕನೊಬ್ಬ ತಾನು ಕಾಮಿಸಿದ ಹುಡುಗಿ ಪರೀಕ್ಷೆಗೆ ಬರದಿದ್ದರೂ ಪಾಸು ಮಾಡಿಬಿಟ್ಟ. ಓದದೆ, ಬರೆಯದೆ ಎಂ.ಎಸ್.ಸಿ. ಡಿಗ್ರಿ ಬಂದದ್ದು ಅಂಥ ಆಶ್ಚರ್ಯ ಹುಟ್ಟಿಸುವ ವಿಷಯವೇನಲ್ಲ. ಆದರೆ ಡಿಪಾರ್ಟಮೆಂಟಿನ ಒಳ ಜಗಳಗಳಿಂದಾಗಿ ಈ ಹೂರಣ ಹೊರಬಿದ್ದು ವಿಚಾರಣಾ ಆಯೋಗವೊಂದನು ನೇಮಿಸಲಾಗಿ ಆ ಆಯೋಗ ಅವನನ್ನು ಪರೀಕ್ಷಾ ಮೌಲ್ಯಮಾಪನದಿಂದ ಮೂರು ವರ್ಷ ಸಸ್ಪೆಂಡ್ ಮಾಡಲು ಸೂಚಿಸಿತು. ಅಂದರೆ 3 ವರ್ಷದ ನಂತರ ಆತ ಮತ್ತೆ ಹಾಗೆ ಮಾಡಬಹುದು ಎಂದ ಹಾಗಲ್ಲವೆ?

ಕನ್ನಡ ವಿಭಾಗದಲ್ಲಿ ಇನ್ನೊಬ್ಬ ವಿಚಿತ್ರ ಮನುಷ್ಯನಿದ್ದಾನೆ. ಏನೂ ಸಾಧ್ಯವಾಗದಿದ್ದರೂ ಚೇಂಬರಿಗೆ ಬಂದ ಹುಡುಗಿಯರ ಮೈ-ಕೈಗಳನ್ನು ಮುಟ್ಟುವುದು ಈತನ ಸ್ವಭಾವ. ಅನುಭಾವದಿಂದ ಕ್ರಾಂತಿವರೆಗೆ ಈತ ಸರಾಗವಾಗಿ ಮಾತನಾಡಬಲ್ಲ.

ಮೈಸೂರು ವಿಶ್ವವಿದ್ಯಾನಿಲಯ :

ಇಲ್ಲಿಯ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕನೊಬ್ಬ ತನ್ನ ಕೈ ಕೆಳಗೆ ಸಂಶೋಧನೆ ಮಾಡುತ್ತಿದ್ದ ಕೊಡಗಿನ ಹುಡುಗಿಯೊಬ್ಬಳನ್ನು ತಬ್ಬಿಕೊಳ್ಳಲು ಹೋಗಿ ಒದೆತ ತಿಂದರೂ ಏನೂ ಅರಿಯದವರಂತೆ ನಡೆದುಕೊಂಡ.

ಮನಃಸಶಾಸ್ತ್ರದ ಅಧ್ಯಾಪಕನೊಬ್ಬ ರಾಜೇಶ್ವರಿ ಎಂಬ ಹುಡುಗಿ ಯೊಬ್ಬಳನ್ನುಹಿಡಿದು ಹಠ ಸಂಭೋಗ ಕ್ಕಾಗಿ ಪ್ರಯತ್ನಪಟ್ಟಾಗ ಆಕೆ ಕೊಸರಿಕೊಂಡುಓಡಿಹೋಗಿ ತನ್ನಗೆಳತಿಯರಿಗೆತಿಳಿಸಿದಾಗ ದೊಡ್ಡ ಗಲಾಟೆಯಾಗಿ ಆ ದಿನ ವಿಶ್ವವಿದ್ಯಾನಿಲಯವು ಮುಚ್ಚಬೇಕಾಯಿತು. ಅವನಿಗೆ ಮಹಾರಾಜಾ ಕಾಲೇಜಿಗೆ ವರ್ಗ ಮಾಡಲಾಯಿತು. ನಂತರ ಆತ ವಿಶ್ವವಿದ್ಯಾನಿಲಯಕ್ಕೆ ಮರಳಿ ರೀಡರ್ ಹುದ್ದೆ ಪಡೆದುಕೊಂಡು ಈಗ ಪ್ರಾಧ್ಯಾಪಕನಾಗಲು ಹವಣಿಸುತ್ತಿದ್ದಾನೆ. ಈತ ಮುಖ್ಯಸ್ಥನಾನ ಮೇಲೆ ಕಲಿಯಲು ಬರುವ ಹುಡುಗಿಯರನ್ನು ಯಾರು ರಕ್ಷಿಸುವರೋ ಗೊತ್ತಿಲ್ಲ.

ವಿಶ್ವವಿದ್ಯಾನಿಲಯಗಳ ಮೂಲೆಮೂಲೆಗಳಲ್ಲೆಲ್ಲ ಜಾತಿ ಇದ್ದರೂ ಕಾಮುಕ ಅತ್ಯಾಚಾರಗಳ ವಿಷಯದಲ್ಲಿ ಮಾತ್ರ ಇಲ್ಲ! ಕಾಮುಕ್ಕೆ ಯಾವುದೇ ಜಾತಿಯ ಹುಡುಗಿಯಿದ್ದರೂ ನಡೆಯುತ್ತದೆ.

ರಸಾಯನಶಾಸ್ತ್ರದ ಪ್ರಾಧ್ಯಾಪಕನೊಬ್ಬ ವಿದ್ಯಾರ್ಥಿನಿಯೊಬ್ಬಳನ್ನು ಫಸ್ಟ್ ಕ್ಲಾಸ್, ನೌಕರಿ ಮೊದಲಾದ ಆಸೆ ತೋರಿಸಿ ವರ್ಷವಿಡೀ ಹೆಂಡತಿಯಂತೆ ಬಳಸಿಕೊಂಡು ಅವಳು ಗರ್ಭಿಣಿಯಾದಾಗ ಏನೂ ಅರಿಯದವರಂತೆ ವರ್ತಿಸಿದ. ಹೀಗಾಗಿ ಆಕೆ ಆತ್ಮಹತ್ಯೆ ಮಾಡಿಕೊಳ್ಳ ಬೇಕಾಯಿತು.

ಈ ರೀತಿಯ ಕಾಮ ಸಂಬಂಧಗಳು ಅನೇಕ ವಿಧವಾಗಿ ಇರುತ್ತವೆ. ಇಂಥ ಕೆಲಸ ಮಾಡುವವರು ಹೆಂಡಿರು ಮಕ್ಕಳು ಇದ್ದವರು, ಮತ್ತು ವಿಶ್ವವಿದ್ಯಾನಿಲಯದ ಅನೇಕ ವರ್ಷಗಳ ಅನುಭವವಿದ್ದವರು ಇರುತ್ತಾರೆ. ಇಂಥ ಸಂಬಂಧಗಳಲ್ಲಿ ಒಂದು ರೀತಿಯ ಮೌನ ದಬ್ಬಾಳಿಕೆ ಇರುತ್ತದೆ. ಇಂಥ ಅನೇಕ ಕ್ರೂರ ಕಾಮ ಸಂಬಂಧಗಳು ಬಹಿರಂಗಗೊಳ್ಳುವುದೇ ಇಲ್ಲ. ಬಲತ್ಕಾರ ಮಾಡಲು ಹೋದಾಗ ವಿದ್ಯಾರ್ಥಿನಿ ಕೂಗಿಕೊಂಡರೆ, ಓಡಾಟ ಜಾಸ್ತಿಯಾದರೆ, ಹುಡುಗಿಯರು ಗರ್ಭಿಣಿಯರಾದರೆ, ಆತ್ಮಹತ್ಯೆ ಮಾಡಿಕೊಂಡರೆ ಇಂಥ ಪ್ರಸಂಗಗಳು ಬೆಳಕಿಗೆ ಬರುವುದುಂಟು. ಆದರೆ ಮಾನಹಾನಿಯ ಅಂಜಿಕೆಯಿಂದ ಅನೇಕ ಹುಡುಗಿಯರು ತಮ್ಮ ಶೀಲಭಂಗದ ನೋವನ್ನು ನುಂಗಿಕೊಂಡೇ ಬದುಕುತ್ತಾರೆ. ಅನೇಕ ಡಿಪಾರ್ಟಮೆಂಟುಗಳಲ್ಲಿಯ ಒಳಜಗಳಗಳಿಗೆ ಪ್ರಮೋಶನ್ ತರುವಾಯ ಲೈಂಗಿಕ ಸಂಬಂಧವೇ ಹೆಚ್ಚು ಕಾರಣವಾಗಿ, ಒಂದೊಂದು ಸಲ ಇಬ್ಬರು ಶಿಕ್ಷಕರು ಕೂಡಿ ಒಂದೇ ಹುಡುಗಿಯನ್ನು ಪ್ರೀತಿಸಿದಾಗ ಈ ಜಗಳ ಇನ್ನಷ್ಟು ಬೆಳಕು ಬೀರುವುದು. ರಸಾಯನ ಶಾಸ್ತ್ರ ವಿಭಾಗದಲ್ಲಿ ಒಮ್ಮೆ ಹೀಗೆಯೆ ಆಯಿತು.

ಅಲ್ಲಿಯ ಇಬ್ಬರು ಶಿಕ್ಷಕರು ಕೇರಳದ
ಸುಂದರ ಹಾಗೂ ದಡ್ಡ ಹುಡುಗಿಯನ್ನು
ದರು. ಹೀಗಾಗಿ ಒಳಗೊಳಗೆ ದ್ವೇಷದ
ಹಬ್ಬಿತು. ಅವಳ ಪೇಪರೊಂದಕ್ಕೆ ಕಾ
ಶಿಕ್ಷಕನೊಬ್ಬ 70ರಷ್ಟು ಅಂಕಗಳನ್ನು
ಅದೇ ಪೇಪರಿಗೆ ಬಾಹ್ಯ ಅಂಕಗಳು 3
ಬಿದ್ದಿದ್ದವು. ಪರೀಕ್ಷಾ ಮಂಡಳಿಯಲ್ಲಿ ಈ
ಯಿದ್ದಾಗ ಇದನ್ನೇ ಕಾಯ್ದು ಕೊಂಡಿದ್ದ
ಬ್ಬ ಕಾಮುಕ ಶಿಕ್ಷಕ ಈ ಹೂರಣವನ್ನು
ಎಳೆದು 'ಅವಳ ಮುಖ ನೋಡಿ ಅಂಕ
ಕೊಟ್ಟಿದ್ದಾನೆ' ಎಂದು ಸಾರಿಯೇ ಬಿಟ್ಟ.
ಪಾಸಾಗಲೂ ಯೋಗ್ಯತೆ ಇಲ್ಲದವಳು

ವಿಶೇಷ ಲೇಖ

ಸೌಂದರ್ಯ ಶಕ್ತಿಯಿಂದ 70ರಷ್ಟುಅಂಕ
ಪಡೆದುಕೊಳ್ಳಬಲ್ಲಳು. ಇಂಥದೇ ಕ
ಯೊಬ್ಬಳು ಭೂಗರ್ಭಶಾಸ್ತ್ರ ವಿಭಾಗದಲ್ಲಿ
ರ್‍ಯಾಂಕ್ ಪಡೆದುಕೊಂಡ ದಾಖಲೆಯಿದೆ.

ಕೆಲ ಹುಡುಗಿಯರು ಇಂಥದೇ ಅವಕಾ
ಕಾಯ್ದುಕೊಂಡು ಆಕ್ರಮಣವನ್ನು ಬಯ
ಕುಳಿತಿರುತ್ತಾರೆ. ಪ್ರಾಣಿಶಾಸ್ತ್ರ ವಿಭಾಗದ
ಗಿನ ಬೆಡಗಿಯೊಬ್ಬಳು ಅಭಿಸಾರಿಕೆಯಂತೆ
ದ್ದುಂಟು. ಈ ಮೊದಲು ಒಬ್ಬ ಶಿಕ್ಷಕನ ಕೈ
ಸಂಶೋಧನೆ ಮಾಡುತ್ತಿದ್ದಾಗ ಅಪರಿಬ್ಬರ
ಸೆಕ್ಸ್ ವಿಷಯದಲ್ಲಿ ಜಗಳ ಬಂದಿತು.
ಅವನು ಈಕೆ ಸಂಶೋಧನೆ ಮಾಡಲು
ಳೆಂದು ತಿಳಿಸಿದ. ನಂತರ ಅವಳು ತನ್ನ
ಮ್ಮನ ಕೂಡ ಇಟ್ಟುಕೊಂಡಿದ್ದ ಸಂಬಂಧ
ರದ ಮೇಲೆ important ಮಂತ್ರಿಯ
ತಂದು ಇನ್ನೊಬ್ಬ ಕದೀಮನ ಕೈಯಲ್ಲಿ
ಧನೆ ನಡೆಸುತ್ತಿದ್ದಾಳೆ. ಈಗ ಅವಳಿಗೆ ಫ
ಕೂಡ ಹೆಚ್ಚಿಗೆ ಬರುತ್ತಿದೆ. ಆತನಿಗೆ ವ
ಸಂಬಂಧ ಬಂದದ್ದು ಒಂದು ಖುಷಿಯಾದ
ಸಿಕ್ಕಿದ್ದು ಇನ್ನೊಂದು ಖುಷಿ. ಇಬ್ಬರು
ಹತ್ತು ಜನ ಸೂಳೆಯರು ಇದ್ದೂ ಈತ
ಸಿಕ್ಕಾಗಲೆಲ್ಲ ಹುಡುಗಿಯರ ಮೇಲೆ ಕೈ
ತ್ತಲೇ ಇರುತ್ತಾನಂತೆ.!

ಇವರ ಸಂಬಂಧಗಳು ವಿದ್ಯಾರ್ಥಿನಿಯ
ಮಾತ್ರ ಇರುವುದಿಲ್ಲ. ಸ್ಥಳೀಯಅಭ
ಬಂದ ಶಿಕ್ಷಕಿಯರಿಂದ ಹಿಡಿದು ಕಸ
ಹುಡುಗೀರವರೆಗೆ ಇರುತ್ತದೆ. ರ
ಪ್ರಾಧ್ಯಾಪಕನೊಬ್ಬ ಸಿಂಡಿಕೇಟ್
ದ್ದಾಗ ಹುಡುಗಿಯೊಬ್ಬಳಿಗೆ ಟೆಲಿಫೊ

ಯಲಗಳು

...ಕೆಲಸ ಕೊಡಿಸಿ ಅವಳೊಡನೆ ಲೈಂಗಿಕ ...ಬೆಳಸಿಕೊಂಡ. ತತ್ವಶಾಸ್ತ್ರ ವಿಭಾಗ ...ಗುಡಿಸುವ ಹರಿಜನ ಹುಡುಗಿಯೊಬ್ಬಳು ...ಕಾಮ ಪಿಪಾಸೆಗೆ ತುತ್ತಾದಳು. ವಿಶ್ವ ...ಲಯಗಳಲ್ಲಿ ಎಲ್ಲ ಕಡೆ ಜಾತಿ ಇದ್ದರೂ ...ಳಿಯ ವಿಷಯದಲ್ಲಿ ಮಾತ್ರ ಇಲ್ಲ. ...ಯಾವುದೇ ಜಾತಿಯ ಹುಡುಗಿಯಿದ್ದರೆ ...ತ್ತದೆ. ಆದರೆ ಅವಳು ಸುಂದರಿಯಾಗಿರ ...ಇಲ್ಲವೆ ಮೋಹಕಿಯಾಗಿರ ಬೇಕು.

...ಒಂದು ಸಲ ಬೇರೆಯವರ ಚಾರಿತ್ರ್ಯವಧೆ ...ು ಹುಡುಗಿಯರನ್ನು ಬಳಸಿಕೊಳ್ಳಲಾಗ್ ... ತಮ್ಮ ಒಳ್ಳೆಯ ಭವಿಷ್ಯಕ್ಕಾಗಿ ಬೇರೆಯ್ ...ೇಲೆ ಸುಳ್ಳು ಅಪವಾದ ಹೊರಿಸಲು ಹಿಂಜ ... ಹುಡುಗಿಯರೂ ಉಂಟು. ಇಂಥ ...ವೊಂದು ನಡೆದು ಪೇಪರಿನಲ್ಲಿ ಪ್ರಕಟ ... ಜನತೆಗೆ ಗೊತ್ತಿದೆ.

... ಎಲ್ಲಾ ಅನ್ಯಾಯಗಳಿಗೆ ಮೂಲಭೂತ ...ವ ಕಾರಣಗಳಲ್ಲಿ ಮುಖ್ಯವಾದ ಪರೀಕ್ಷಾ ...ಯನ್ನು ಮತ್ತು ನೇಮಕಾತಿಗಳನ್ನು ನವೀ ...ದರಿಂದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾ ...ಸಾಧ್ಯತೆಗಳಿವೆ. ಕೇರಳ ಮತ್ತು ಆಂಧ್ರದ ...ನಿಲಯಗಳಲ್ಲಿರುವಂತೆ ಈ ವಿಶ್ವವಿದಾ ...ಳ ಪದ್ಧತಿಯೂ ಇರಬೇಕು. ಅಂದರೆ ...ತ್ರಿಕೆಗಳು ಬೇರೆ ವಿಶ್ವವಿದ್ಯಾನಿಲಯದವ ...ದ್ಧವಾಗಬೇಕು. ಈ ವಿಷಯದಲ್ಲಿ ಡಿಪಾ ...ಂಟನ ಯಾವುದೇ ಶಿಕ್ಷಕನಿಗೆ ಅಧಿಕಾರ ...ದು. ಕೆಲ ಕಡೆ ಇರುವ ಸೆಮಿಸ್ಟರ್ ವ್ಯವ ...ಸ್ತೆಗೆಯಬೇಕು. ಅಷ್ಟೇ ಅಲ್ಲದೆ ಶಿಕ್ಷಕರು ...ಗಳ ಮೇಲೆ ಮಾರಕಾಸ್ತ್ರವಾಗಿ ಉಪ ...ಸಲು ಸಾಧ್ಯವಾಗುವಂಥ ಯಾವುದೇ ಅಧಿ ...ಬಾರದು. ಅಭ್ಯರ್ಥಿಗಳ ಆಯ್ಕೆಯಲ್ಲಿ, ...ಫ್ ಕೊಡುವಲ್ಲಿ ಇವರ ಆಟ ನಡೆಯ ... ಇಲ್ಲದಿದ್ದರೆ ವಿಶ್ವವಿದ್ಯಾನಿಲಯಗಳಲ್ಲಿ ...ಸ್ಪತ್ರೆಗಳನ್ನು ಮತ್ತು ಪೋಸ್ಟ್‌ಮಾರ್ಟಂ ...ಗಳನ್ನು ಕಟ್ಟಬೇಕಾದ ಪ್ರಸಂಗಬರುವುದು.

...ೂರ ಮುಂಡೆ ಇದೇನು ಮಹಾ !

...ಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಳೀ ...ರ್ಥಿಯಾಗಿ ಕೆಲಸ ಮಾಡುತ್ತಿದ್ದು ಈಗ ... ಮುಖ್ಯಸ್ಥನ ಸಂಬಂಧಿಕನಿಗೆ ಹೋದ ... ಅವಳು ಕೆಲಸ ಕಳೆದುಕೊಂಡು ಮರಳ ...ಿತು. ಆಕೆಗೆ ಈ ವಿಷಯಗಳನ್ನು ವಿವರಿಸಿ ...ರುವಿ.ವಿ.ವಾತಾವರಣದ ಬಗ್ಗೆ ಕೇಳಿದಾಗ ...ರು ವಿಶ್ವ ವಿದ್ಯಾನಿಲಯ ಪ್ರಕರಣಗಳ ... ಇವೇನು ಮಹಾ ಎಂದುಬಿಟ್ಟಳು. ...ಅನೇಕರ ಕಾಮಕೇಳಿಯ ಪ್ರಸಂಗಗಳನ್ನು ...ಲಾಗಿದೆ. ಅವನ್ನು ನಂತರ ಪ್ರಕಟಿಸಲಾ ... ಇವನ್ನೆಲ್ಲಮೀರಿದ ಶಿಕ್ಷಕರೂ ಇದ್ದಾರೆ. ...ಶಸ್ಯ ಸಮಸ್ಯೆ]

—ವರದಿಗಾರ

ಕಂಡದ್ದು ಕಂಡಂಗೆ

ನೀರ ನಡುವೆ ನೀರಿಗಾಗಿ ಕಾದ ಜೀವ!

ಕೋಲಾರ ತಾಲ್ಲೂಕಿನಲ್ಲಿ ವಾನರಾಶಿ ಎಂಬುದೊಂದು ಗ್ರಾಮ. ಆ ಗ್ರಾಮಕ್ಕೆ ದಲಿತ ಸಂಘರ್ಷ ಸಮಿತಿಯವನಾಗಿ ನಾನು ಭೇಟಿ ಕೊಟ್ಟಾಗ: ಊರಿನ ಪಕ್ಕದಲ್ಲಿ ಒಂದು ಕುಂಟೆ ಇದೆ. ಆ ಕುಂಟೆಯನ್ನು ನೋಡಲು ಹೋದೆ. (20-9-81) ಆಗ ಬೆಳಿಗ್ಗೆ 9 ಗಂಟೆಯಾಗಿತ್ತು. ಆ ಕುಂಟೆಯ ಮೆಟ್ಟಲುಗಳ ಮೇಲೆ ಒಬ್ಬ ಹರಿಜನ ಮಹಿಳೆ ಬಿಂದಿಗೆ ಮುಂದಿಟ್ಟುಕೊಂಡು ಕುಳಿತಿರುವುದನ್ನು ನೋಡಿ "ಯಾಕಮ್ಮ ಒಂಟಿಯಾಗಿ ಇಲ್ಲಿ ಕುಳಿತಿದ್ದೀಯ" ಎಂದು ಕೇಳಿದೆ.

ಬಿ. ಮುನಿಯಪ್ಪ

"ಯಾಕೂ ಇಲ್ಲಾ ಸ್ವಾಮಿ ನೀರಿಗೆ ಬಂದಿದ್ದೇನೆ" ಎಂದಳು. "ನೀರು ತೆಗೆದುಕೊಂಡು ಹೋಗಮ್ಮ" ಎನ್ನಲು "ನಾವು ಈ ನೀರನ್ನು ಮುಟ್ಟುವುದಿಲ್ಲ. ಈ ಕುಂಟೆಯಲ್ಲಿ ದೇವರನ್ನು (ಈರಲಪ್ಪ) ತೊಳಿತಾರೆ" ಎಂದಳು. ಅಷ್ಟರಲ್ಲಿ ಒಬ್ಬ ಮಹಿಳೆ ಬಂದಳು. ಆಕೆ ಸವರ್ಣೀಯ ಹೆಂಗಸು. ಆಕೆಯನ್ನು ನೀರಾಕುವಂತೆ ಕೇಳಿಕೊಳ್ಳಲು ಆಕೆ ನನಗೆ ಬಿಡುವಿಲ್ಲ, ನನ್ನ ಗಂಡ ಬೇಗನೆ ಹೋಗದಿದ್ದರೆ ಬಯ್ಯುತ್ತಾನೆಂದು ಹೇಳಿದವಳೇ ಹೊರಟು ಹೋದಳು. ಆಗ ನನಗೆ ಈಕೆಯ ಗಂಡ ಬಯ್ಯುವುದಿಲ್ಲವೆ ಎನಿಸಿತು. ಮತ್ತೆ ನಾನು "ಏನಮ್ಮ ನೀನು ನೀರು ತೆಗೆದುಕೊಂಡು ಹೋಗಮ್ಮ" ಎಂದೆ. ನನ್ನ ಮಾತು ನಿರಾಕರಿಸಿದಳು. ಕಾರಣ ಕೇಳಲು, ಈ ಕುಂಟೆಯಲ್ಲಿ ನಾನು ಹಿಂದೆ ಒಂದು ದಿನ ನೀರು ಮಗೆದುಕೊಂಡು ಹೋಗಿದ್ದಕ್ಕೆ ನಮ್ಮ ಕೇರಿಯಲ್ಲಿನ ದೊಡ್ಡ ಮನುಷ್ಯರು "ನಿನ್ನಿಂದ ನಾವೆಲ್ಲಾ ಮಾನ ಮರ್ಯಾದೆ ಕಳೆದು ಕೊಳ್ಳಬೇಕೆ" ಎಂದು ಹೀನಾಮಾನವಾಗಿ ಜರಿದು ನನ್ನ ಗಂಡನ ಕೈಯಲ್ಲಿ ಚನ್ನಾಗಿ ಥಳಿಸಿದರು" ಎಂದಳು. ಆಗ ನನಗೆ ಹರಿಜನ ಗಂಡಸರಿಗಿಂತ ಹೆಂಗಸರೇ ಮೇಲು ಎನಿಸಿತು. ಅಷ್ಟರಲ್ಲಿ ಮತ್ತೊಬ್ಬ ಮೇಲ್ಜಾತಿಯ ಕೊಳಕು ಹೆಂಗಸು ಬಂದಳು. ಆಕೆಯನ್ನು ನೀರಾಕುವಂತೆ ಪ್ರಾರ್ಥಿಸಿದಳು. ಆಕೆಯೂ ಸಹ "ನನಗೆ ಬಿಡುವಿಲ್ಲ ಇಟ್ನಿಸರು ಇಟ್ಟು ಬಂದಿದ್ದೇನೆ" ಎಂದವಳೆ ಹೊರಟು ಹೋದಳು. ನಾನು ಅಲ್ಲಿಯೇ ನೊಂದ ಮನಸ್ಸಿನಿಂದ ಕುಳಿತೆ. ಆಗ ಸಮಯ 10 ಗಂಟೆ. ಆಕೆ ನನ್ನನ್ನು ನೋಡಿ "ಸ್ವಾಮಿ ಈ ಕರ್ಮ ಎಂದಿಗೆ ಕಳೆಯುತ್ತೊ? ಏನೋ .... ನಾನು 10ಗಂಟೆಗೆ ಕೂಲಿಗೆ ಹೋಗಬೇಕು. ವಲೆಮೇಲೆ ಸೊಪ್ಪಾಕಿ ಬಂದೆ ಏನಾಗಿದೆಯೋ ಏನೋ" ಎಂದು ನಿಟ್ಟುಸಿರು ಬಿಡುತ್ತಿದ್ದಂತೆ ಮತ್ತೊಬ್ಬಳು ಬಂದಳು. ಆಕೆಯನ್ನು ದೀನತೆಯಿಂದ ಕೇಳಿಕೊಳ್ಳಲು "ನಿಮ್ಮದೊಂದು ಕೊಪ್ಪ ನಮಗೆ" ಎಂದುಕೊಂಡು ನೀರು ತಂದುಮೇಲಿಂದ ಹರಿಜನಮಹಿಳೆಯ ಬಿಂದಿಗೆಗೆ ಎರಚಲು ಆಕೆಯ ಸೀರೆ ಸ್ವಲ ಭಾಗ ತೊಯ್ದು ಹೋದರೂ ನೀರು ಸಿಕ್ಕಿದ ಉತ್ಸಾಹದಿಂದ ಬಿಂದಿಗೆ ತಲೆಯ ಮೇಲೆ ಇಟ್ಟುಕೊಂಡು ಕೇರಿಯ ಕಡೆಹೊರಟು ಹೋದಳು.

ಆಗ ನನಗನಿಸಿತು: ಈ ಊರಿನಲ್ಲಿ ಹರಿಜನ ಮಹಿಳೆಯರಿಗೆ ಗಂಡಂ"ದಿರಿಲ್ಲವೆ? ಇವರ ಮನೆಗಳಲ್ಲೂ ಇಟ್ನಿಸರು ಇಡುವುದಿಲ್ಲವೆ?

ದೇವಸ್ಥಾನಕ್ಕೆ ಬಿಡಲು ದೊಣ್ಣೆನಾಯ್ಕರ ಚರ್ಚೆ !

ನಾನು ಧರ್ಮಗುರುಗಳ ಭಾಷಣ ಕೇಳಲು ತಾ. 13-6-81 ರಂದು ಸೋಮವಾರಪೇಟೆಯಲ್ಲಿ ನಡೆದ "ವಿಶ್ವಹಿಂದು ಪರಿಷತ್" ಸಭೆಯಲ್ಲಿ ಹಾಜರಿದ್ದೆ. ಧರ್ಮಗುರುಗಳ ನಯೂ ವಿನಯೂ ಕಂಡು ಧರ್ಮದ ಬಗ್ಗೆ ಅರಿತುಕೊಳ್ಳಲು ಕಾತುರನಾಗಿದ್ದೆ. ಅವರು ಧರ್ಮದ ಬಗ್ಗೆ ದೇವರ ಬಗ್ಗೆ ದಲಿತರಿಂದ ಹಿಡಿದು ಐಶ್ವರ್ಯವಂತರವರೆಗೂ ವಂಚಿಸದೆ ಮಾತನಾಡುತ್ತಾರೆಂದು ನಂಬಿಕೆ ಇತ್ತು. ಪ್ರಾರಂಭದ ಮಾತು ಕಳೆದು ಮಧ್ಯದಲ್ಲಿ ಧರ್ಮಗುರುಗಳ ವಚನ, ಗೀತೆ, ಶ್ಲೋಕ ಪಠಿಸಿದರು. ಕೊನೆಗೆ ದಲಿತರ ಮಾತು ಎತ್ತಿದಾಗ ನನಗೆ ಕಿವಿನೆಟ್ಟಗಾದವು.

"ಅಸ್ಪೃಶ್ಯರನ್ನು ಕೀಳಾಗಿ ಕಾಣಬಾರದು. ಅವರೂ ಮನುಷ್ಯರು. ಹಿಂದೂಧರ್ಮ ಅವರನ್ನು ಎಂದೂ ಕೆಟ್ಟದೃಷ್ಟಿಯಿಂದ ಕಾಣುವುದಿಲ್ಲ. ಈಗ ಅಸ್ಪೃಶ್ಯರನ್ನು ಮಠ, ದೇವಸ್ಥಾನಗಳ ಒಳಗೆ ಹೋಗಲು, ಕರೆದುಕೊಳ್ಳಲು, ನಾವು ಮಠಾಧೀಶ್ವರರು ಎಲ್ಲರೂ ಸೇರಿ ಚರ್ಚೆ ಏರ್ಪಾಡು ಮಾಡಿದ್ದೇವೆ. ಅಸ್ಪೃಶ್ಯರನ್ನು ಹೀಗೆಯೇ ಬಿಟ್ಟರೆ ಅವರು ಬೇರೆ ಧರ್ಮಕ್ಕೆ ಮತಾಂತರ ಹೊಂದಿ ನಮ್ಮ ಹಿಂದೂ ಧರ್ಮಕ್ಕೆ ಕಳಂಕ ತರುತ್ತಾರೆ, ಆದ್ದರಿಂದ ನಾವು ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ" ಇದಕ್ಕಾಗಿ ಸತತ ಪ್ರಯತ್ನ ಮಾಡುತ್ತಿದ್ದೇವೆ. ಈ ಮಾತುಗಳು ನನಗೆ ದುಃಖ ನೋವು ಉಂಟುಮಾಡುವುದಾಗಿತ್ತು. ಏಕೆಂದರೆ ಧರ್ಮಗುರುಗಳು ಚರ್ಚೆ ಮಾಡಿದ ಮೇಲೆ ಸೇರಿಸಿಕೊಳ್ಳಲು ಒಪ್ಪಿದರೆ ಸೇರಿಸಿ ಕೊಳ್ಳುತ್ತಾರೆ. ಒಂದು ಪಕ್ಷ ಆ ಚರ್ಚೆಯಲ್ಲಿ ಏನಾದರೂ ಬೇಡ ಎಂದು ತೀರ್ಮಾನವಾದರೆ ದೇವಸ್ಥಾನದಂಗಳಕ್ಕೂ ಬಿಡುತ್ತಾರೋ ಇಲ್ಲವೊ? ಗೊತ್ತಿಲ್ಲ. ಇಂತಹವರ ಚರ್ಚೆಯಿಂದ ಅಸ್ಪೃಶ್ಯರ ಸಮಸ್ಯೆ ಪರಿಹಾರವಾಗಬಹುದೆ!

—ಟಿ. ಎನ್. ಜೋಯಪ್ಪ

ಹಾರ್ವರೊಳಗಿನ ಹೊಲೆಯರು

[7ನೇ ಪುಟದಿಂದ

ಹಿಂದೆ, ಈ ಜಾತಿಯವರಲ್ಲಿ ಬಳಕೇಲಿದ್ದ ಹೆಸರುಗಳು ಕೂಡ, ಪ್ರಮುಖವಾಗಿ ಶೂದ್ರ ಮೂಲದವುಗಳಾಗಿವೆ. ಉದಾ: ಚಿಕ್ಕಯ್ಯ, ದೊಡ್ಡತಾಯಮ್ಮ, ಚಿಕ್ಕಪುಟ್ಟತಾಯಿ, ಪುಟ್ಟತಾಯಮ್ಮ, ರಂಗಪ್ಪ, ರಂಗಯ್ಯ, ಸುಬ್ಬ, ಸಾಕಮ್ಮ ಇತ್ಯಾದಿ.

ಮುಖ್ಯವಾಗಿ ಇವರು ಶೈವಾರಾಧಕರು. ಮನೆ ಮಾತು ಕನ್ನಡ. ಈ ಜಾತಿಯ ಕೆಲವು ವಂಶಸ್ಥರ ಮನೆದೇವರು ಕೂಡ ಶೂದ್ರ ಮೂಲವುಳ್ಳದ್ದೇ. ಉದಾ: ಈ ಜಾತಿಗೆ ಸೇರಿದ ನನ್ನ ಕುಲ ದೇವರು 'ಸುತ್ತೂರಮ್ಮ'. ನಂಜನಗೂಡು ಬಳಿ ಇರುವ ಸುತ್ತೂರು ದೇವತೆ. ಪಿರಿಯಾಪಟ್ಟಣದ ಕೆಲವು ವಂಶಸ್ಥರಮನೆದೇವರು ಮೂಗೂರು ತ್ರಿಪುರ ಸುಂದರಮ್ಮಣ್ಣಿ. ಇನ್ನು ಕೆಲವರಿಗೆ 'ತಿಬ್ಬಾದೇವಿ'. ಇವು ಯಾವುವೂ ಬ್ರಾಹ್ಮಣ ಮೂಲ ದೇವತೆಗಳಲ್ಲ.

ಆರ್ಥಿಕವಾಗಿ ಈ ಪಂಗಡದ ಕಸುಬು ಮೊದಲಿನಿಂದಲೂ ಮುಖ್ಯವಾಗಿ ವ್ಯವಸಾಯವಾಗಿದೆ. ಇಂದಿಗೂ ಮೈಸೂರು ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ವ್ಯವಸಾಯವನ್ನೆ ಪೂರ್ಣವಾಗಿ ಅವಲಂಬಿಸಿರುವ ಅನೇಕ ಕುಟುಂಬಗಳನ್ನು ನಾನೇ ಖುದ್ದು ನೋಡಿದ್ದೇನೆ. ಜೊತೆಗೆ, ತಮ್ಮನ್ನು ಯಾರಾದರೂ ಬ್ರಾಹ್ಮಣರೆ ಅಂತ ಪ್ರಶ್ನಿಸಿದರೆ, ರೇಗಿ ಬೀಳುವುದು ಕೂಡ ಸಾಮಾನ್ಯ ಸಂಗತಿಯಾಗಿದೆ. ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದ ಈ ಕೋಮು ಅಷ್ಟೇನು ಬಲಿಷ್ಠ ವರ್ಗಕ್ಕೆ ಸೇರಿದುದಲ್ಲ. ಇತರ ಬ್ರಾಹ್ಮಣ ವರ್ಗದವರೊಂದಿಗೆ ಹಣಕಾಸಿನ ಪರಿಸ್ಥಿತಿಯಿಂದ ಒಟ್ಟಾಗಿ ಈ ಕೋಮು ಸ್ಪರ್ಧಿಸಲಾರದು. ಮಧ್ಯಮ ವರ್ಗಕ್ಕೆ ಸೇರುವವರು ಕೂಡ ಬಹಳ ಕಡಿಮೆ.

ಸಾಮಾಜಿಕವಾಗಿ, ಈ ಕೋಮಿನ ಸ್ಥಾನಮಾನ ಯಾವುದು ಅನ್ನುವುದರ ಬಗ್ಗೆ ಕೆಲವಾರು ಸಂದೇಹಗಳಿವೆ. ಈ ಕೋಮನ್ನು ಮಧ್ಯಾಹ್ನ ಬ್ರಾಹ್ಮಣ ದಿನವೆಲ್ಲ ಹೊಲೆಯ ಅಂತ ಯಾಕೆ ಕರೆಯುತ್ತಾರೆ? ಮಾರಕ ಅಂತ ಕರೆಯುವುದರ ಔಚಿತ್ಯವಾದರೂ ಏನು? ಚಾಮರಾಜನಗರದ ವೇದಪಾಠಶಾಲೆಗಳಿಗೆ 1947 ರವರೆಗೂ ಈ ಕೋಮಿನ ವಿದ್ಯಾರ್ಥಿಗಳಿಗೆ ಯಾಕೆ ಪ್ರವೇಶವಿರಲಿಲ್ಲ? ನಂಜನಗೂಡಿನ ದೇವಸ್ಥಾನದ ಶುಕನಾಶಿಯ ಪ್ರತೀಕಕ್ಕೆ ಸರ್ಕಾರ ಯಾಕೆ ವಕಾಲತ್ತು ವಹಿಸಬೇಕಾಯಿತು? ಈ ಸಂದರ್ಭದಲ್ಲಿ ಮೈಸೂರು ಮಹಾರಾಜರ ಪ್ರವೇಶ ಯಾಕೆ ಬೇಕಾಯಿತು ? ಈ ರೀತಿ ಅನೇಕ ಸಮಸ್ಯೆಗಳು ಈ ಕೋಮನ್ನು ಅಭ್ಯಸಿಸುವ ಯಾರಿಗಾದರೂ ಕುತೂಹಲವನ್ನುಂಟುಮಾಡಲಾರದೆ ಇರಲಾರದು. ಬಹಳ ಹಿಂದೆ ಈ ಕೋಮಿನ ಸಾಮಾಜಿಕ ಸ್ಥಾನಮಾನ ಯಾವುದಿತ್ತೆಂದು ಸ್ಪಷ್ಟವಾಗಿ ತಿಳಿದು ಬರದಿದ್ದರೂ, ಈ ಕೋಮಿನ ಜನ ಕೀಳರಿಮೆಯಿಂದ ಬದುಕುತ್ತಿದ್ದರು ಎಂಬುದನ್ನು South India Castes and Tribes ಮತ್ತು ಹಯವದನರಾವ್ ಗೆಜೆಟೇರ್‌ನಿಂದ ಅರ್ಥಮಾಡಿಕೊಳ್ಳಬಹುದು. ನಾನು ಸಂಗ್ರಹಿಸಿರುವ ಮಾಹಿತಿಯ ಆಧಾರದ ಪ್ರಕಾರ ಇತರ ಬ್ರಾಹ್ಮಣರೊಂದಿಗೆ ಸರಿಸಮಾನತೆಯಿಂದ ಈ ಕೋಮಿನ ಜನ ಊಟಕ್ಕೆ ಕುಳಿತಾಗ, ಪಂಕ್ತಿಯಿಂದ ಇವರನ್ನು ಏಳಿಸಿ, ಅವಮಾನಿಸಿದ ಕೆಲವಾರು ದಾಖಲೆಗಳು ಸಿಗುತ್ತವೆ. ಶೂದ್ರವರ್ಗದವರು ಕೂಡ ಇವರನ್ನು ಹೀಯಾಳಿಸಿರುವ ಪ್ರಸಂಗಗಳೂ ಉಂಟು. 1947ನೆಯ ಇಸವಿಯ ಹೊತ್ತಿನಲ್ಲಿ, ಈ ಕೋಮಿನ ಪ್ರಮುಖ ಹೋರಾಟಗಾರರಲ್ಲೊಬ್ಬರಾದ ಶ್ರೀ ತಗಡೂರು ರಾಮಚಂದ್ರ ರಾಯರು, ಈ ಕೋಮಿಗೆ ಸಾಮಾಜಿಕ ಸ್ಥಾನಮಾನವನ್ನು ತಂದುಕೊಡಲು ನಡೆಸಿರುವ ಪ್ರಯತ್ನಗಳು ಅವರ 'ಮೂಗೂರು ಕರ್ಣಾಟಕ ಬ್ರಾಹ್ಮಣರು' ಪುಸ್ತಕದಲ್ಲಿ ವಿವರವಾಗಿ ಸಿಗುತ್ತದೆ. ಚಾಮರಾಜನಗರದ ವೇದಪಾಠ ಶಾಲೆಗೆ ಈ ಕೋಮಿನ ವಿದ್ಯಾರ್ಥಿಗಳನ್ನೂ ಸೇರಿಸಲು ನಡೆಸಿರುವ ಹೋರಾಟ, ಹಾಗೆ ಮೂಗೂರು ಕರ್ನಾಟಕ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಂಡರೂ ಅವರಿಗೆ ಪಾಠ ಹೇಳಿಕೊಡಲು ಅಧ್ಯಾಪಕರು ನಿರಾಕರಿಸಿದ್ದು, ಆಗ ಸರ್ಕಾರ ಮಧ್ಯಪ್ರವೇಶ ಇವೆಲ್ಲವನ್ನು ಶ್ರೀ ತಗಡೂರು ತಮ್ಮ ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದ್ದಾರೆ.

ಸಾಮಾಜಿಕವಾಗಿ ಬ್ರಾಹ್ಮಣ ಸಮಾಜದಿಂದ ಬಹಳಷ್ಟು ಹೊಡೆತ ತಿಂದಿರುವ ಈ ಕೋಮು ಬ್ರಾಹ್ಮಣರೊಂದಿಗೆ ಸರಿಸಮಾನವಾಗಿ ನಿಲ್ಲಲು ಬಹಳಷ್ಟು ಶ್ರಮಪಟ್ಟಿದೆ. ಅನೇಕ ಕಷ್ಟ ನೋವು ಅವಮಾನಗಳನ್ನು ಅನುಭವಿಸಿದ್ದರೂ ಇಂದು ಈ ಕೋಮಿನ ಬಹಳಷ್ಟು ಜನ ತಾವು ಅಪ್ಪಟ ಬ್ರಾಹ್ಮಣರೇ ಅನ್ನುವ ರೀತಿಯಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ಆದರೆ, ಈ ಹಿಂದಕ್ಕೆ, ಅಂದರೆ ಸುಮಾರು ನೂರು ವರ್ಷಗಳ ಹಿಂದಕ್ಕೆ ಹೋದರೆ, ಈ ಕೋಮಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿದವರು (ಮುಖ್ಯವಾಗಿ ವೇದಾಧ್ಯಯನ ಮಾಡಿದವರು) ಸಿಗುವುದಿಲ್ಲ. ಇದು ಬ್ರಾಹ್ಮಣಿಕೆಯ ಅತ್ಯಂತ ಅವಶ್ಯಕವಾದ ಗುಣ. ಜೊತೆಗೆ, ಈ ದೇಶದ ಪರಂಪರೆಯಲ್ಲಿ ಬೌದ್ಧಿಕ ಚಟುವಟಿಕೆಯನ್ನು ಮುಂದುವರಿಸಿಕೊಂಡು ಬಂದ ಬ್ರಾಹ್ಮಣಿಕೆಯ ಲಕ್ಷಣಗಳೂ ಇವರಲ್ಲಿ ಈ ಹಿಂದೆ ಕಂಡುಬರುವುದಿಲ್ಲ.

ಮೇಲಿನ ಪರಿಸ್ಥಿತಿಗಳು ಮತ್ತು ಘಟನೆಗಳನ್ನು ಅವಲೋಕಿಸಿದರೆ ಈ ಕೋಮು ಮೂಲತಃವಾಗಿ ಬ್ರಾಹ್ಮಣ ಕೋಮೆಂದು, ಬ್ರಾಹ್ಮಣಿಕೆಗೆ ಆಕರ್ಷಕವಾಗಿ ಹೋರಾಡಿ ಬ್ರಾಹ್ಮಣರಾದ ಒಂದು ಕೋಮೆಂದೂ, ಬ್ರಾಹ್ಮಣರೊಳಗೇ ಇರುವ ಅಸ್ಪೃಶ್ಯರೆಂದೂ ಅರ್ಥವಾಗುತ್ತದೆ. ●

ಕೊಲ್ಲಲು ಹೇಸದ ಹಿಂದೂ ತಾಂಡವ ನೃತ್ಯ: ಮುಸ್ಲಿಂನೊಬ್ಬನ ತಳಮ

ಅಲ್ಲಿಯವರೆಗೆ ಸಾರಕ್ಕಿಯಲ್ಲಿರುವ ಸ
ಕರ ಮನೆಯಲ್ಲಿಯೇ ಉಳಿದುಕೊಂಡಿದ್ದ
ಶ್ರೀನಿವಾಸನಿಗೆ ತುಂಬ ಕಷ್ಟಪಟ್ಟನಂತರ
ನಗರದಲ್ಲಿ ಬಾಡಿಗೆ ಮನೆಯೊಂದು ಸಿಕ್ಕಿತು.
ಅದು ಸ್ವತಂತ್ರವಾದ ಮನೆಯಾಗಿರಲಿಲ್ಲ. ಮ
ರು ತಾವು ವಾಸಿಸುತ್ತಿರುವಮನೆಯ ಎರ
ಣೆಗಳನ್ನುಕೊಟ್ಟಿದ್ದರು. ಹಾಲು, ಸ್ನಾನದ
ಮುಂತಾದವು ಸಾಮೂಹಿಕವಾಗಿದ್ದವು.
ಮಾಲಿಕ ಸಂಯಮದ ಮನುಷ್ಯ. ಹೆಂಡತಿ
ವಾಚಾಳಿ, ಜಗಳಗಂಟಿ, ಅವಳ ಪ್ರಕಾರ ಶ
ಮನೆಗೆ ಹೆಚ್ಚು ಜನ ಬರಬಾರದು. ಬ
ಸ್ನಾನಗೃಹ ಇತ್ಯಾದಿಗಳನ್ನು ಬಳಸಬ
ಶೂದ್ರನ ಮುದ್ದು ಮುದ್ದಾದ ಮಕ್ಕಳು
ಬಾರದು, ನೀರವ ತೆಗೆ ದಾಳಿಯಿಡಬಾರದು
ಈ ಕಟ್ಟಳೆಗಳನ್ನು ಮೀರಿದ ಪ್ರಸಂಗಗಳ
ಹೆಂಗಸು ಜಗಳ ಕಾಯುತ್ತಲೇ ಇನ್ನಳು.
ವಿಷಮ ಸ್ಥಿತಿಯಲ್ಲಿ ಏನೊಂದೂ ಅರಿಯದ
ಪತ್ನಿ ಸಮೇತ ಶೂದ್ರನ ಮನೆಯಲ್ಲಿ
ಕೊಂಡೆ. ಎರಡು ದಿನಗಳಲ್ಲೆ ಈ ಎಲ್ಲ
ಗಳ ತಾಂಡವ ನೃತ್ಯದ ಒಗ್ಗೆ ಗೊತ್ತಾ
ತೀರ ಅನಿವಾರ್ಯವಾಗಿ ನಾನು 5–6ದಿನ
ಬೇಕಾಗಿತ್ತು. ಶೀತಲಯುದ್ಧ ಸಾಗಿಯೇ
ಸಾಧ್ಯವಾದಷ್ಟು ಬೇಗ ಅಲ್ಲಿಂದ ನಾವು ಮ

ಇನ್ನೊಂದು ಸಲ ಬೆಂಗಳೂರಿಗೆ ಹೋ
ಶೂದ್ರ ಸಿಕ್ಕಿದ್ದ. ಮಾತನಾಡುತ್ತ
ಬಗ್ಗೆ ವಿಚಾರಿಸಿದೆ. ಆ ಮನೆ ಬಿಟ್ಟರು
ಹೇಳಿದ. 'ಜಗಳ ನೋಡಿ ಬೇಸರವಾ
ಎಂದು ತಮಾಷೆ ಮಾಡಿದೆ. ಆತಕೊಟ್ಟ
ಮಾತ್ರ ಇಂದಿಗೂ ಭಯ ಹುಟ್ಟಿಸುತ್ತದೆ
ಅವರ ಮನೆಯಿಂದ ಹೋದನಂತರ ಮ
ತಿಗೆ ನಾವು ಮುಸ್ಲಿಂರೆನ್ನುವುದುಗೊತ್ತಾ
ಶೂದ್ರನಹೆಂಡತಿಯೊಂದಿಗೆ ಮತ್ತೆ ಜಗಳಪ
ರೆಡ್ಡಿಗಳಾಗಿ ಮುಸ್ಲಿಮರನ್ನು ಮನೆಯಲ್ಲಿ
ಕೊಂಡದ್ದಕ್ಕೆ ನಿಂದೆ. ಸ್ವಜಾತಿಯವರಿಂ
ಯಿಂದ ಮನೆಯೊಳಗೇ ಮನೆ ಕೊಟ್ಟ
ಕುಲಗೇಡಿ ಕೆಲಸಮಾಡಿದ್ದಕ್ಕೆ ದೋಷಾರ

ಮರುದಿನ ಬೆಳಿಗ್ಗೆ ಮಕ್ಕಳನ್ನು
ಮಾಡಿಸುವಾಗ ಸ್ನಾನ ಗೃಹದ ಹಂಡೆ
ನೀರು ಹಸಿರಾಗಿದ್ದನ್ನು ಅಕಸ್ಮಿಕವಾ
ಪರೀಕ್ಷಿಸಲಾಗಿ ವಿಷ ಹಾಕಿದ್ದು ತಿಳಿದುಬ
ಕೊಲ್ಲಲು ಹೇಸದವರ ಮನೆಯನ್ನುಅಂದೆ
ಕೊಟ್ಟು, ಕಷ್ಟ ಅನುಭವಿಸಿ

ಬೆಂಗಳೂರಿನಂಥ ರಾಜಧಾನಿ ಪ್ರದೆ
ರೆಡ್ಡಿಯೊಬ್ಬ ಮುಸ್ಲಿಮನನ್ನು ಮನೆಯ
ಕೊಂಡಿದ್ದಕ್ಕೆ ಎಂಥ ಶಿಕ್ಷೆ! —ರಂಜಾನ

ಮೂಢ ನಂಬಿಕೆ ಎಂಬ ನೇಣುಗಂಬಕ್ಕೆ

…ಪ್ರನ ಹೆಸರು ಬದಲಾವಣೆಯಾದದ್ದು …ತೂಹಲ ಕೆರಳಿಸುವ ಸಂಗತಿ. ಕೋಳಿ …ರು ಮಾಡಿದಾಗ, ಕೋಳಿಯ ಹೀರಿ, … ರಕ್ತ, ಕಡ್ಲೆಕಾಳು, ಕಾಯಿಚೂರು …ದರಿ ಮಂಧಗೆ ಮಾಡುವ ರುಚಿಯಾವ… 'ಉರುಗರಿ' ಎಂದು ಕರೆಯುತ್ತಾರೆ. …ಗೆ ಉರುಗರಿ ಎಂದರೆ ಪ್ರಾಣ. ಯಾರ …ಕೋಳಿ ಕೊಯ್ತ್ರೆ ಅವರ ಮನೇಲಿ …ಮಯಕ್ಕೆ ಸರಿಯಾಗಿ ಹೋಗಿ, ಹೊಸ … ಕಣ್ಣಗಲಿಸಿ ಕೂರುತ್ತಿದ್ದ. ಉರುಗರಿ … ರುಚಿ ಹಿಡಿಯುವುದರಲ್ಲಿ ನಿಸ್ಸೀಮ …ದ, ಉಗ್ರಪ್ಪನಿಗೆ ಉರುಗರಿಯಪ್ಪ …ರು ನಿಂತುಹೋಯ್ತು.

…ಯುವರೆಗೆ ನೇತಾಡುವ ಖಾಕಿಚಡ್ಡಿ …ಂಬುದೋಳಿನ ಕೋಟಿನಂತ ಬಟ್ಟೆಯ …ರ್ಟ ಹಾಕುತ್ತಿದ್ದನು. ಅರಳೆಣ್ಣೆ ಬಣ್ಣ …ಲುಮುಖದ ಅಂಚಿಕಡ್ಡಿ ಪೈಲ್ವಾನ್ …ಮಿಲ್ಟ್ರಿಯ ಗೋವಿಂದ್ ಸಿಂಗ್ ತಂದು … ದೊಗಲೆ ಬೂಡ್ಸು ಹಾಕಿಕೊಂಡು …ಗಿ ನಡೆಯುತ್ತಿದ್ದನು. ಅವನ ಶರ್ಟಿನ … ಸ್ಟೀಲಿನಿಂದ ಮಾಡಲ್ಪಟ್ಟು ನಾಲ್ಕಾ… ಮಧ್ಯ ಸ್ವಲ್ಪ ಉಬ್ಬಿಕೊಂಡು …ಟ್ಟವು. ಗುಂಡಿಯ ಮೇಲೆ B. E. L. …ಚ್ಚೊತ್ತಿರುವುದು ಸ್ಪಷ್ಟವಾಗಿತ್ತು. …ನ್ನೂ ಹಾಲು ಕುಡಿಯುತ್ತಿದ್ದಾಗಲೆ …ೇವಿನ ರೂಪದಲ್ಲಿ ಬಂದ ಸಾವು ಅವನ … ನುಂಗಿತ್ತು. ಅಪ್ಪ ಸೀರಿಯಸ್ಸಾಗಿ …ದ್ದಿದ್ದಾಗ ಪಡೆದ ಸಾಲ ತೀರಿಸಲು …ನೆಗೆ ಜೀತ ಸೇರಿದ್ದ. ಗೌಡರ ಹಿರೇ… …E. L ನಲ್ಲಿ ಕೆಲಸದಲ್ಲಿದ್ದಾನೆ. ಅವನು …ದಾಗ, ತನ್ನ ಫ್ಯಾಕ್ಟರಿ ಡ್ರೆಸ್ ತಂದು …ಗೆ ಕೊಡುತ್ತಿದ್ದ. ಉಗ್ರಪ್ಪನಿಗೂ …ತು.

…ನ ಹೆಂಡತಿ, ಸುತ. ಹಳ್ಳಿಗಳ ಹೆಣ್ಣಾ… …ಯುಕಿ, ಆವಳು ಮೀರಿದ ಹೆಂಗಸು. …ಳನ್ನು ಕಂಡರೆ ಹೆದರುತ್ತಿದ್ದಗು. … ಕೂಲಿಮಾತು ಬಂದಾಗ ಪಕ್ಕದ …ೀಲನಸ್ತು, 'ಪಟೇಲಾಪ್ರೆ ಈ ಊರ್ಗೆ … ಸವಾಸಕ್ಕೆ ಬಂಪ್ರೆ ಸೀರೆ ಗುಬ್ರ… …ಂತ …ಸುಸನ್ನ ಈ ಪತ್ರಿಗೂ ಜಪ …ಿ. ಸ್ವಲ್ಪ ಕಪ್ಪು, ಬಣ್ಣದ, ಕಪ್ಪಿ… …ಟ್ಟಿನ ಹೆಂಗಸು ಮಾರಕ್ಕ ಬುಡ್ಡಗೆ …ದರಿಂದ ಬುಡುಮೆಕಾಯಿಯಂತ… …ಸ್ತಾಲ್ಕು ಗಂಟೆ ಅಡಿಕೆ ಎಲೆ ಅಗಿ… …ತುಟಿಗಳು ಕೆಂಪಾಗಿದ್ದವು. ಆವಳ

ಮೊದಲ ಮಗ ಇನ್ನೂ ಶಾಲೆಗೆ ಸೇರಿರಲಿಲ್ಲ. ಆಗ ಮಾರಕ್ಕ ತುಂಬು ಬಸರಿ.

ಆಗಾಗ ಬರುತ್ತಿದ್ದ ಹೊಟ್ಟೆನೋವಿಗೆ ಆಸ್ಪತ್ರೆ ಔಷಧಿ ಕಡೆಗಾಣಿಸಿ ಈಗ ಹಳ್ಳಿ ಪಂಡಿತರನ್ನು ಮೊರೆಹೊಕ್ಕಿದ್ದಳು. ಇಬ್ಬರು ಪಂಡಿತರು ಈ ಖಾಯಿಲೆ ಗುಣಪಡಿಸುವುದಾಗಿ ಒಪ್ಪಿಕೊಂಡರು. ಒಬ್ಬ ಲಕ್ಷ್ಮೀದೇವರ ಪೂಜಾರಿ, ಇನ್ನೊಬ್ಬ ಎಲ್ಲಮ್ಮ ದೇವರ ಪೂಜಾರಿ. ಒಂದು ಅಮಾವಾಸ್ಯೆ ದಿನ ಮಾರಕ್ಕನಿಗೆ ಪೂಜೆ ಹಾಕಲು ಒಪ್ಪಂದ ವಾಯಿತು. ಈ ಕೆಳಕಂಡ ಕಾಣಿಕೆಯನ್ನ ಸ್ವೀಕರಿಸಿದರು: ೪೮ ಕಣಗಿಲೆ ಹೂಗಳು ಅದರಲ್ಲಿ ೨೪ ಕೆಂಪು ೨೪ ಬಿಳಿಯವು. ೪ ವಿಭೂತಿ ಗಟ್ಟಿ ೨ ತಾಮ್ರದ ತಗಡು ೨ ಬಿಳಿ ಹೊಸ ಪಂಚೆಗಳು, ೭ ತೆಂಗಿನಕಾಯಿ, ೧೨ ಇರುವ ಎರಡು ಚಿಪ್ಪು ಯಾಲಕ್ಕಿ ಬಾಳೇಹಣ್ಣು, ೪ ಮೊಟ್ಟೆಕೋಳಿಗಳು, ೬೨ ಸಾಸವೇಕಾಳು, ೧ ರೂಪಾಯಿ ಅರಿಷಿಣ

ಕತ್ತಲೊಡನೆ ಮಾತುಕತೆ

ಕುಂಕುಮ. ೧೧ ಅಥವಾ ೭ ರೂಪಾಯಿಗೆ ಗಂಧದ ಚಕ್ಕೆ, ತಲಾ ನೂರಾ ಒಂದು ರೂಪಾಯಿ. ೨೫ ಸೇರು ಅಕ್ಕಿ, ಕೊನೆಯಲ್ಲಿ ೫೦ ಪೈಸೆ ಸಪ್ಪೆ ನೂಲು.

ಅಮಾವಾಸ್ಯೆಯ ದಿನ ಬಂತು. ಉಗ್ರಪ್ಪನ ಮನೆಯಲ್ಲಿ ಪೂಜೆ ಕಾರ್ಯಕ್ರಮ. ನಡುಮನೆಯಲ್ಲಿ ಎರಡು ದೇವರುಗಳನ್ನು ಪೂಜಲಾಗಿತ್ತು. ಒಬ್ಬೊಬ್ಬ ಪೂಜಾರಿಯು ತಮ್ಮ ದೈವೀ ಶಕ್ತಿಯನ್ನು ಪ್ರದರ್ಶನ ಮಾಡಲು ಶುರುಮಾಡಿದರು. ಬಲಗೈಯಲ್ಲಿ ಬೇವಿನ ಬರಚಲು ಕಂತೆ, ಎಡಗೈಲಿ ಊದುಬತ್ತಿ ಹಿಡಿದು ರೆಡಿಯಾಗಿದ್ದರು. ಊದುಬತ್ತಿ ಕೆಟ್ಟುಹೋದರೆ ಅತ್ತಿಸಲು ಒಬ್ಬ ಬೆಂಕಿಪಟ್ಟಣ ಹಿಡಿದು ಓಡಾಡುತ್ತಿದ್ದ. ನೆಂಟರಿಷ್ಟರು, ಅಕ್ಕಪಕ್ಕದ ಮನೆಯವರು ಪೂಜೆ ಕಾರ್ಯಕ್ಕೆ ಕಿಕ್ಕಿರಿದು ಬಂದಿದ್ದರು. ಸಣ್ಣ ಮಕ್ಕಳು ಬಂದ್ರೆ, **'ಇಲ್ಲೇನ್ರೊ ಕೆಲ್ಸ ನಿಮ್ಗೆ'** ಎಂದು ಗದರಿ ಕಳಿಸುತ್ತಿದ್ದರು. ಆಗ ರಾತ್ರಿ ಹನ್ನೊಂದು ಗಂಟೆ ಸಮಯ. ಪಂಡಿತರು ಮಾರಕ್ಕನನ್ನು ಕರೆಯುವಂತೆ ಆಜ್ಞೆ ಮಾಡಿದರು. ಉಗ್ರಪ್ಪ ದಢಾರನೆ ಎದ್ದು ಹೋಗಿ ಪಕ್ಕದ ಮನೆಯಲ್ಲಿ ಮಲಗಿದ್ದ ತನ್ನ ಹೆಂಡತಿಯ ಕೈಹಿಡಿದು ಕುಂತಿದ್ದವರ ಸಂದಿಯಲ್ಲಿ ಜಾಗಮಾಡಿಕೊಂಡು ಬಂದು ದೇವರ ಮುಂದೆ ನಿಲ್ಲಿಸಿದನು. ಪಂಡಿತರು ಹಲ್ಲು ಕಡಿಯುತ್ತ ಮರ ಮುರಮುರನೆ ನೋಡಿದರು. ಮಾರಕ್ಕ ಮಬ್ಬಿನಲ್ಲಿ ಯಾವುದೋ ಲೋಕದಿಂದ ಕೂಗು ಬಂದಂತೆ; 'ನನ್ನ ಹುಡುಗನ ಕರೀರಿ'. ಆಗ ಮಾರಕ್ಕನ ತಂಗಿ ತೊಡೆಯ ಮೇಲೆ ಮಲಗಿದ್ದ ಮಗುವನ್ನು ತಂದು ಅಂಗಲಾಚುತ್ತಿದ್ದ ಅಕ್ಕನ ಕೈಗೆ ಹಾಕಿದಳು. ಮಗ ನಿದ್ದೆಗೆಟ್ಟು ಎದ್ದು ಚಿಟ್ಟನೆ ಚೀರಿತು. ಮಾರಕ್ಕ ಮಗನನ್ನು ಬಾಚಿ ಎದೆಗೆ ತಬ್ಬಿಕೊಂಡು ಮುತ್ತಿಕ್ಕಿ, ಕೆನ್ನೆ ಚಿವುಟಿ, ವಾಪಸ್ಸು ಕೊಟ್ಟಳು. ಹಲ್ಲು ಕಡಿಯುತ್ತ ಉಗ್ರವಾಗಿ ತಲೆ ಕೆದರಿಕೊಂಡು, ಮೈಕೈ ತುಂಬ ವಿಭೂತಿ ಬಳಿದು ನಿಂತಿದ್ದ ಪಂಡಿತರು ಮಾರಕ್ಕನನ್ನು ಹಿಡಿದು ದೇವರ ಕಡೆ ತಿರುಗಿಸಿದರು. ಜನ ನಿದ್ದೆಗೆಟ್ಟಿದ್ದರೂ ಎಚ್ಚರ ತಪ್ಪಿರಲಿಲ್ಲ. ದೇವರ ಮುಂದೆ ಉರಿಯುತ್ತಿರುವ ಹೊಂಗೆ ಎಣ್ಣೆ ದೀಪಗಳು ಮಾರಕ್ಕನ ಮಗನ ಕಣ್ಣೊಳಗಿನ ಪಂಜುಗಳಾದವು. ಮಾಳಿಗೆ ಮನೆ ಸೋರಿ ಸೋರಿ ಮಣ್ಣು ಮಿಶ್ರಿತ ಕೆಂಪುನೀರು ಗೋಡೆಯ ಮೇಲೆ ಹರಿದು ಮೂಡಿಸಿದ್ದ ಬರೆಗಳು ದೀಪದ ಬೆಳಕಿಗೆ ಚಾಟಿಗಳಾದವು.

ಪಂಡಿತರು ಮಾರಕ್ಕನ ಜುಟ್ಟು ಹಿಡಿದು 'ನೀನು ಯಾರು? ನಿನಗೆ ಏನು ಬೇಕು? 'ಎಲ್ಲಿಂದ ಬಂದೆ'? 'ನಮ್ಮ ಮಗಳ ಹೊಟ್ಟೆಗೆ ಯಾಕೆ ಸೇರಿದೆ'? ಇತ್ಯಾದಿ ಪ್ರಶ್ನೆ ಕೇಳಿದರು. ಮಾರಕ್ಕ ಮೌನವಾದಳು. ಬೇವಿನ ಬರಚಲಿಂದ ಮನಸ್ಸಿಗೆ ಬಂದಂತೆ ಮಾರಕ್ಕನಿಗೆ ರುಬ್ಬಿದರು. ಒಬ್ಬ ಒಂದು ಕಡೆಯಿಂದ ಜುಟ್ಟು ಹಿಡಿದು ಗರ್ರನೆ ತಿರುಗಿಸಿ ಬಿಟ್ಟರೆ ಇನ್ನೊಬ್ಬನು ಅದೇರೀತಿ ಮಾಡುತ್ತಿದ್ದನು. ಜನ ಕಣ್ಣುಮನ ಅಗಲಿಸಿ ನೋಡುತ್ತಿದ್ದರು. ಕೊನೆಗೆ ಮಾರಕ್ಕ, ಸುಸ್ತಾಗಿ ನೆಲ ಕಚ್ಚಿದಳು: ಕುಂತಿದ್ದವರೆಲ್ಲಾ ಎದ್ದು ಬರಲು, 'ಯಾರೂ ಇಲ್ಲಿಗೆ ಬರಬೇಡಿ ನೀವೆಲ್ಲಾ ಹೋಗಿ' ಎಂದು ಪಂಡಿತರು ರೇಗಿದರು. ಉಗ್ರಪ್ಪ, ಮಾರಕ್ಕನ ತಂಗಿ, ಪಂಡಿತರು ಅಲ್ಲೆ ಇದ್ದರು, 'ಇವತ್ತು ಹಿಂಗೆ ಇರ್ಲಿ' ಎಂದು ಕಾಯಿ ಹೊಡೆದು, ಪೂಜೆ ಮಾಡಿ ಮಾರಕ್ಕನ ಮೇಲೆ ತೀರ್ಥ ಚುಮುಕಿಸಿ,

ಕೇಬಿ

ನಾಳೆ ಬರುವುದಾಗಿ ಹೇಳಿ ಪೂಜಾರಿಗಳು ಹೊರಟರು. ನೋಡಿ ನೋಡಿ ಸಾಕಾಗಿ ಮನೆಯ ಬಾಗಲಿಗೆ ತಲೆಹಾಕಿ ವಪ್ಪಾರಿನ ಬಾಗಲಿಗೆ ಕಾಲು ನೀಡಿ ಕ್ರಾಸಾಗಿ ಉಗ್ರಪ್ಪ ಮಲಗಿದ. ಅಕ್ಕನ ತಲೆಯ ಹತ್ತಿರ ತೊಡೆಯ ಮೇಲೆ ಮಗ ಮಲಗಿಸಿಕೊಂಡು ತಂಗಿ ಕೆಂಪವ್ವ ಕೂತಳು.

ಎಚ್ಚರಗೊಂಡು, ಒಂದೊತ್ತಿಗೆ ಉಗ್ರಪ್ಪ ಎದ್ದು ಹೆಂಡತಿ ಮಾತಾಡಿಸಲು ಬಂದ. ಏನವ್ವ ಎಂದು ನಾದನಿ ಕೇಳಿದ. ಆವಳಿಗೆ ಮಾತಿಲ್ಲ. ತಾನೇ ಖುದ್ದು ಮಾರಕ್ಕನ ಮೈ ಮುಟ್ಟಿದ, ತಣ್ಣಗಿತ್ತು. ನೀರು ಚಿಮುಕಿಸಿದ, ಏನೂ ಕಾಣಲಿಲ್ಲ! ಎಡಬಲಕ್ಕೆ ಹೊರಳಿಸಿದ, ಮಾರಕ್ಕ ಅಲುಗಾಡಲಿಲ್ಲ!

ಓದಿರಿ

ಲಂಕೇಶ್ ಪತ್ರಿಕೆ

ತುಮಕೂರು ರಾಯವಾರ ಸಮೀಕ್ಷೆ ಪತ್ರ

ರಾಯವಾರ ಎಂಬುದು ತುಮಕೂರು ಜಿಲ್ಲಾ ಕೊರಟಗೆರೆ ತಾಲೋಕಿನ ಒಂದು ಹಳ್ಳಿ. ಇಲ್ಲಿರುವ ನೂರು ಮನೆಗಳಲ್ಲಿ ನಲ್ವತ್ತು ಸವರ್ಣೀಯರವು, ಅರವತ್ತು ದಲಿತರವು. ಇಲ್ಲಿನ ಸವರ್ಣೀಯರು ಎರಡಾಗಿ ಜನತಾ– ಕಾಂಗ್ರೆಸ್(ಐ) ಆಪ್ಪಿಕೊಂಡಿದ್ದಾರೆ. ಇದೇ ರೀತಿ ದಲಿತರೂ ಎರಡು ಗುಂಪಾಗಿ ಒಡೆದು ಸವರ್ಣೀಯರ ಒಂದೊಂದು ಗುಂಪಿನ ಕಡೆಯೂ ಹಂಚಿಹೋಗಿದ್ದಾರೆ. ಸವರ್ಣೀಯರ ರಾಜಕೀಯದ ಕೈಗೊಂಬೆಗಳಾದ ಈ ಎರಡೂ ಗುಂಪಿನವರೂ ಆಗಾಗ ಒಬ್ಬರಿಗೊಬ್ಬರು ಹೊಡೆದಾಡುತ್ತಾ ಹಾಲಿ ಈಗ ಇವರ ಮೇಲೆ ಮೂರು ಕೇಸುಗಳಿವೆ.

ದಲಿತರ ಕೇರಿ ಸವರ್ಣೀಯರ ಕೇರಿಯಿಂದ ಒಂದು ಫರ್ಲಾಂಗ್ ದೂರವಿದ್ದು, ತಾತನ ಕಾಲದಲ್ಲಿಹಸಿ ಗದ್ದೆ ಬದದ ಎಂಟೆಯಿಂದ ಕಟ್ಟಿದ ಗೋಡೆಗಳಿಂದ ಕೂಡಿರುವ ಎಲ್ಲ ಗುಡಿಸಲುಗಳೂ ಸೋಗೆ ಸೂರು ಹೊದ್ದುಕೊಂಡಿವೆ. ಕೆಲವು ಮಳೆ ಹೊಡೆತ ತಡೆಯಲಾರದೆ ಬಿದ್ದು ಹೋಗಿದ್ದು, ಪುನಃ ಇವನ್ನು ದುರಸ್ತಿ ಮಾಡಿಕೊಳ್ಳಲು ಶಕ್ತಿಯಿಲ್ಲದ ದಲಿತರು ಮುರುಕಲುಗಳಲ್ಲೇ ಕಾಲ ತಳ್ಳುತ್ತಿದ್ದಾರೆ. ಕುಡಿಯುವ ನೀರೂ ದಕ್ಕದ ಇವರ ಕಥೆ ಹೇಳತೀರದು. ಸರ್ಕಾರದಿಂದ ಹಾಕಿಸಿರುವ ಬೋರ್

ಸಮೀಕ್ಷಕ : ನರಸಿಂಹಮೂರ್ತಿ

ವೆಲ್‌ನಲ್ಲಿ ನೀರು ತರಲು ಹೋದರೆ ಸವರ್ಣೀಯ ಹೆಂಗಸರು ತಮ್ಮ ಸೀರೆಗಳನ್ನು ಎತ್ತಿ ಬೋರ್ ವೆಲ್‌ಗೆ ಗುಬುರು ಹಾಕುತ್ತಾರಂತೆ. ಗಂಡಸರು ದೊಣ್ಣೆ ಹಿಡಿದು ಅಟ್ಟುತ್ತಾರಂತೆ. ಹೀಗಿದೆ ಇವರ ಸ್ಥಿತಿ.

ಮೇಲಿನಂಥ ಸ್ಥಿತಿ ಇರುವ ರಾಯವಾರಕ್ಕೆ ದ. ಸಂ.ಸ ಕಾರ್ಯಕರ್ತರಾದ ನಾವು ಅಕ್ಟೋಬರ್ ೨೪ ರಂದು ಹೋದೆವು. ಆಗ ಸಂಜೆ ನಾಲ್ಕು ಗಂಟೆಯಾಗಿದ್ದು ದಲಿತರು ಕೂಲಿ ಮುಗಿಸಿ ಇನ್ನೂ ಬಂದಿರಲಿಲ್ಲ. ಊರು ಸ್ಮಶಾನವಾಗಿ ಕಾಣುತ್ತಿತ್ತು. ನಾವು ಸವರ್ಣೀಯ ಕೇರಿಯತ್ತ ನಡೆವೆವು. ದೇವಸ್ಥಾನದ ಬಳಿ ಬಂದಾಗ ಅಲ್ಲಿ ಸವರ್ಣೀಯಯುವಕನೊಬ್ಬ ಸಿಕ್ಕಿದ. ಅವನ ಜೊತೆ ಮಾತಾಡುತ್ತಾ ಆಡುತ್ತಾ ಅವ ಊರಿನ ಒಳಾಡಳಿತವನ್ನೆಲ್ಲಾ ಬಿಚ್ಚತೊಡಗಿದ. ಊರಲ್ಲಿ ಜನತಾ– ಕಾಂಗ್ರೆ ಜೋರಾಗಿದ್ದು, ಮಾದಿಗರಲ್ಲೂ ಎರಡು ಪಾರ್ಟಿ ಇದೆ ಎಂದ. ಮತ್ತೆ ಮುಂದುವರಿಸಿ ಕಾಂಗ್ರೆ ಮಾದಿಗರೇನಾದರೂ ಜಂಬ ಕೇದರೆ ನಮ್ಮ ಕಡೆ ಇರೋ (ಜನತಾ) ಮಾದಿಗರಿಗೆ ಕುಡಿಸಿ ಚಚ್ಚಿಸಿ ಬಿಡ್ತೀವಿ ಎಂದನು. ಅವರು ಸುಮ್ನೆ ಇರ್ತಾರ ಅಂದಿದ್ದಕ್ಕೆ' ಅವರೂ (ಕಾಂಗ್ರೈ ಸವರ್ಣೀಯರು) ಕಾಂಗ್ರೈ ಮಾದಿಗರಿಗೆ ಕುಡಿಸಿ ನಮ್ಮ ಕಡೆಯ ಜನತಾ ಮಾದಿಗರಿಗೆ ಹೊಡೆಸುತ್ತಾರೆ. ಅವರವರ್ಗ ಜಗಳ ತಂದಿಕ್ಕೋದೆ, ಸಾಯೊ ನನ್ಮಕ್ಕೆಲ್ಲ ಅವರೇ ನಮಗೇನು ಹೋದರೆ ಒಂದು ೫೦–೬೦ ರೂಪಾಯಿ ಖರ್ಚಾಗ್ತೈತೆ ಅಷ್ಟೆ' ಅಂದ.

ನಾವು ದಲಿತ ಕೇರಿಗೆ ಬರೋವಷ್ಟರಲ್ಲಿ ಕತ್ತಲಾಗಿತ್ತು. ಜನ ಎಲ್ಲ ನಮ್ಮನ್ನು ನೋಡಿ ಭಯಗ್ರಸ್ಥರಾದರು. ಅವರು ಹೆದರಲು ಆಗಾಗ ಸವರ್ಣೀಯರು ಬೇರೆ ಊರಿನವರನ್ನು ಕರೆಸಿ ಅವರನ್ನು ಹೊಡೆಸುತ್ತಿದ್ದದೇ ಕಾರಣವಾಗಿತ್ತು. ನಾವು ಮನೆಮನೆಗೂ ಹೋಗಿ ನಾವೂ ನಿಮ್ಮವರೇ ಮಧುಗಿರಿಯಿಂದ ಬಂದಿದ್ದೇವೆ. ಎಂದು ಎಷ್ಟು ಹೇಳಿದರೂ ನಂಬಲಿಲ್ಲ. ಅವರ ಮನೆಗಳಲ್ಲೆ ನೀರು ಕುಡಿದು ಕೂತೆವು. ಆಗ ಒಬ್ಬೊಬ್ಬರೇ ಹತ್ತಿರ ಬಂದವರು ನೀವೆಲ್ಲಾ ಯಾರೋ ನಮ್ಮನ್ನು ಹೊಡೆಯಲು ಕಳಿಸಿದ ಗೂಂಡಾಗಳು ಎಂದುಕೊಂಡಿದ್ದೆವು"ಅಂದರು. ನಾವು "ನೀವೆಲ್ಲಾ ಒಂದುಕಡೆ ಸೇರಿ,ಮಾತಾಡಬೇಕಾಗಿದೆ" ಅ
ಯಾರೂ ಬರಲಿಲ್ಲ. ಒಂದು ಪಾರ್ಟಿಯ
ಬಂದರೆ ಇನ್ನೊಂದು ಪಾರ್ಟಿಯವರು ಬ
ಲಿಲ್ಲ. ಅರವತ್ತು ಮನೆಗಳ ಪೈಕಿ ಕೇವಲ
ಜನ ಬರಲಿಲ್ಲ ಕತ್ತಲಾಯಿತು. ರಾತ್ರಿ
ತಂಗಿದೆವು.

ಬೆಳಿಗ್ಗೆ ಮನೆಮನೆಗೂ ಮೂರು ನಾಕು
ತಿರುಗಿ ಸುಮಾರು ೬೦-೭೦ ಜನರನ್ನು
ಕಡೆ ಸೇರಿಸಿದೆವು. ನಮ್ಮ ಮೇಲೆ ನಡೆ
ರುವ ಕೊಲೆ-ಸುಲಿಗೆ ಅನ್ಯಾಯಗಳನ್ನು ವಿ
ದ. ಸಂ. ಸದ ಹುಟ್ಟು, ಬೆಳವಣಿಗೆ, ಉ
ಸಂಘಟನೆಯ ಶಕ್ತಿ ಎಂಥದ್ದೆಂದು ಹೇಳ
ಕೆಲವು ತರುಣರು ಒಂದಾಗಲು ಮುಂದಾ
ತಮ್ಮಲ್ಲೇ ಇರುವ ಒಡಕನ್ನು ತೊಡೆದು ಒಗ
ಮೂಡಿಸಲು ತಯಾರಾದರು. ನಾವು ಮಾತ
ತ್ತಿದ್ದಾಗ ಒಬ್ಬ ಮುದುಕ 'ಒಂದು ಸೇರು
ಕಾಳು ಚೆಲ್ಲಿದರೆ ಕಾಲು ಭಾಗವಾದರೂ ಹ
ತ್ತವೆ' ಎಂದಮಾತು ನನಸಾಗತೊಡಗಿತು.

ಒಬ್ಬ ಮನುಷ್ಯನ ಸಾವು

ಬಾನಂದೂರು ಕೆಂಪಯ್ಯ

೧೯೭೦ ರಿಂದ ೧೯೭೪ರ ಸಮಯ. ನಾನು ಪ್ರತಿನಿತ್ಯ ಬೆಂಗಳೂರಿನ ಅವಿನ್ಯೂ ರಸ್ತೆಯಲ್ಲಿರುವ ಯಾವುದಾದರೂ ಹೋಟೆಲಲ್ಲಿ ಊಟಮಾಡಿಕೊಂಡು ರೂಮಿಗೆ ಹಿಂತಿರುಗುತ್ತಿದ್ದೆ. ನನ್ನ ಕಣ್ಣಿಗೆ ಆ ರಸ್ತೆಯಲ್ಲಿ ಅಪೂರ್ವ ದೇಹದ ಮನುಷ್ಯ ಒಂದು ಕಾಣುತ್ತಿತ್ತು. ಆ ಮನುಷ್ಯ ಆಗಾಗ ಸ್ಥಳ ಬದಲಾವಣೆ ಮಾಡುತ್ತಿದ್ದ. ೧೯೭೧ನೇ ಇಸವಿಯಲ್ಲಿ ಆತನನ್ನು ನೋಡಿದ್ದೆ. ಆತ ರಸ್ತೆಯ ಬದಿಯಲ್ಲಿದ್ದ ದೊಡ್ಡಮರದ ಬುಡ ಕಿತ್ತು ಹೋದ ಎಕ್ಕಡದ ರಾಶಿಯಲ್ಲಿ ಉಳಿ, ರಂಪಿಕೆ, ಅಡಗಲ್ಲು, ಸುತ್ತಿಗೆ ಇಟ್ಟುಕೊಂಡು ಆ ರಸ್ತೆಯಲ್ಲಿ ನಡೆವ ಅನೇಕ ಜನರ ಎಕ್ಕಡ ರಿಪೇರಿ ಮಾಡುತ್ತಿದ್ದ. ಆದರೆ ಈಗ ಅವನ ಮೈ ಮಳೆ ಗಾಳಿ, ಬಿಸಲಿಗೆ ಎದರದು. ಕಪ್ಪಗೆ ಸೀದುಹೋದ ಮೈನಲ್ಲಿ ಅರ್ಧ ಅಂಗುಲದಷ್ಟು ಕೊಳೆ ಕಚ್ಚಿ, ಒಂದೊಂದಂಗಲ ಬೆಳೆದ ಕೈಕಾಲಿನ ಉಗುರು, ಮೈನಲ್ಲಿ ಸಲೀಸಾಗಿ ಎಣಿಸುವಂತ ಮೂಳೆಗಳು, ಗುಳಿಬಿದ್ದ ಕಣ್ಣು, ಗಟಾರ ಸೇರಿದ ಹೊಟ್ಟೆ, ದವಡೆ ಕಚ್ಚಿದ ಕೆನ್ನೆ, ಆಳದಲ್ಲಿ ಮಿಣಕಮಿಣಕನೆ ಹೊರಳಾಡುತ್ತಿದ್ದ ಕಣ್ಣುಗಳಲ್ಲಿ ಇಡೀ ವಿಶ್ವದ ನೋವು. ಇಚ್ಚೆಬಂದಂತೆ ಬೆಳೆದು ನರೆತು ಜಡೆಕಟ್ಟಿದ ಕೂದಲು. ಆ ಮನುಷ್ಯ ನಡುವಿಗೆ ಒಂದು ಗೋಣಿಚೀಲ ಸುತ್ತಿಕೊಂಡಿದ್ದರೂ ಅವನ ಬೆತ್ತಲೆ ಎದ್ದುಕಾಣುತ್ತಿತ್ತು. ಸಣ್ಣಗೆ ಮಡಿಚಿಕೊಂಡಿದ್ದ ಕಾಲುಗಳಲ್ಲಿ ಕೂತು ತೆವೆಯುತ್ತ, ಅನ್ನಕ್ಕೆ ವಲಸೆ. ಒಂದು ದಿನಕ್ಕೆ ಒ
ಅಂಗಡಿ ಬಾಗಿಲಿನಿಂದ ಸ್ವಲ್ಪದೂರ ತೆ
ತ್ತಿದ್ದ.

ಈ ವಿಚಿತ್ರದೇಹದ ದಲಿತ ಮನುಷ್ಯನ
ಅಮೆರಿಕಾದ ಕಲಾವಿದನೊಬ್ಬ ಚಿತ್ರ ಬಿ
ಓರ್ವ ಫೋಟೋ ತೆಗೆದು ಅದನ್ನು ಇಟ್ಟ ಕೊ
ನನ್ನ ಗೆಳೆಯ ಸಾಹಿತಿಯೊಬ್ಬ ಅವನ
ತಿಳಿದು ಕಥೆ ಬರೆದ. ಆಗಾಗ್ಗೆ ಮಹಡಿ
ಜರುಗುತ್ತಿದ್ದ ರಾಜಕೀಯ ಭಾಷಣಕಾ
ಉದಾಹರಣೆಯಾದ.

೧೯೭೪ರ ಒಂದು ದಿನ ಆ ವಿಚಿತ್ರ ದೇ
ವಾಸವಾಗಿದ್ದ ಪ್ರಾಣಪಕ್ಷಿ ಹಾರಿಹೋಗ
ಆ ಬೀದಿಯ ಹಲವು ಭಿಕ್ಷುಕರು ಹೆಣವನ್ನು
ಪಾತಿನಲ್ಲಿ ಹಾಕಿಕೊಂಡು ಒಂದು ಕೆ
ಟವಲ್ಲು ಹಾಸಿ ಅವನ ದೇಹದ ಮೇಲೆ
ಕುಂಕುಮ ಹರಡಿ ಕಾಸು ಬೇಡುತ್ತಿ
"ಬೇವಾರ್ಸಿ ಹೆಣ ಸ್ವಾಮಿ ದಫನ್ ಮಾ
ಧರ್ಮ ಮಾಡಿ" ಎಂದು ಕೇಳುತಿದ್ದರು.

ಈ ಹಿನ್ನೆಲೆಯಲ್ಲಿ ಒಬ್ಬ ಭಿಕ್ಷುಕ "
ಹೆಂಡತಿ ಸೂಳೆಯಾಗಿ ಸತ್ತಳು. ಇದ್ದ
ಮಗಳು ಬೀದಿ ಸೂಳೆಯಾಗಿ ಸೀರೆ
ಬಂದು ಅವಳೂ ಕೂಡ ಸತ್ತಳು. ಇದೇ ಯೋ
ಯಲ್ಲಿ ಬುದ್ಧಿಭ್ರಮಣೆಯಿಂದ ಇವನೂ
ಸತ್ತಿದ್ದಾನೆಂದು" ವೀಕ್ಷಕರಿಗೆ ಹೇಳುತ್ತಿ

ೂಲೆಯ ಸುತ್ತಾ.....

● ಎಸ್. ಮಂಜುನಾಥ

ಪಾತ್ರ ಹರ್ಷನಿಗೆ-
ಾಗ ನೀನೇ ಬಲಹೀನನಾಗಿದ್ದೆ
ಒಂದೊಂದು ಸೂಜಿ ಎರಡು ಮಾಸಗಳು ಸತತ
ಸಿಕೊಳ್ಳಲು ಡಾಕ್ಟರು ಹೇಳಿದ್ದರು.
ಕೊನೇಸಾರಿ ಸಿಕ್ಕಾಗ ಹಲವು
ಗಳಿಗಾಗಿ ಇಪ್ಪತ್ತು ರೂಪಾಯಿ ಕೇಳಿದೆ
ಳಿಯಿರಲಿಲ್ಲ.

ಂದೆ
ಅವರದೇ ಬಂದೂಕು.—
ವ ನೀಳ ಹಾಲು ಗಡ್ಡದ ಕುಳ್ಳು ಅಗಸ್ತ್ಯನಂಥ
ಬರಿದೇ ತಿರುಗುತ್ತಿದ್ದಾರೆ ಹಳ್ಳಿಯಲ್ಲೀಗ
ವಿವಶರಾಗಿ ಅವರು
ುಲ್ಲಿ ಸುಟ್ಟು ಬೂದಿಯಾದ ಸಾವಿರಡೆಂಟು
ನೂರು
ೂರಿದ ದುಡ್ಡಲ್ಲಿ, ಈ ಸಾರಿ
ಗ್ನ ಕಟ್ಟಿಸುವುದಾಗಿ ಗುಟ್ಟಾಗಿ ಹೇಳಿದ್ದರು
ಆಸೆಯಿಂದ
ಳಿ.
್ಕ ಮುನ್ನ ತಮ್ಮ ಮಗನಿಗೆ ತುಂಬ ದೊಡ್ಡ
ಂದ ಔಷದಿ ಕೊಡಿಸಬೇಕೆಂದಿತ್ತು.
ಆತುರ
ನಿನ್ನ, ಅವರ ಮನೆಗೆ
ಬಿತ್ತು.

ವರ್ಷವಿಡೀ ಬೇಯಬೇಕಿದ್ದ ಮಾರಿ ಉಳಿದ ಛತ್ರದ
ಮೂಟೆಗಳು
ಸುಟ್ಟು ಬೂದಿಯಾದ್ದನ್ನು ಜನ ಜೊಳ್ಳು ಅಂದರು
ಇಷ್ಟು ಮೂಟೆ ಕಾಳು ಇಷ್ಟೊದು ಹಣ ಇವ ದಲಿತನಲ್ಲ
ಎಂದು ವರದಿ ಮಾಡಿದ ಒಬ್ಬ ಪ್ರತಿನಿಧಿ
ಪೋಲಿಸರಿಗೆ ಕೈಮುಗಿದು ನಿನ್ನ ತಂದೆ ತಾನೇ
ಕೊಂದದ್ದು ಎಂದು ಸುಳ್ಳು ಹೇಳಿಕೊಂಡಿದ್ದಾರೆ
ಇನ್‌ಸ್ಪೆಕ್ಟರ್ ಹೇಳಿಕೊಂಡು ತಿರುಗುತ್ತಾನೆ ಅವನಿಗೆ
ಖಾತ್ರಿಯಂತೆ ಕೆಟ್ಟಿದೆ ಅವರ ತಲೆ ಅಂತ.

ಅವರೆಲ್ಲ ಕುಡುಕ ಗೂಂಡಾಗಳು, ಹೌದು
ನಿನ್ನ ಮನೆ ನುಗ್ಗಿದರು, ಲೈಟು ತಂತಿ ಕತ್ತರಿಸಿ
ಕತ್ತಲು ಮಾಡಿ ಬೆಂಕಿಯಿಟ್ಟರು.
ಮನೆಯಿಂದೋಡಿ ಬಂದೆ ನೀನು– ಹೊರಕ್ಕೆ,
ಬಂದೂಕಿನೊಂದಿಗೆ, ಗಾಳಿಗೀಡಿಟ್ಟು ಕೂಗಿಕೊಂಡೆ
ಕೊಲೆಯಾಗುವುದರಲ್ಲಿದ್ದೆ, ಕೊಂದೆ.

ಹೊಲೆಯನಾಗಿ ಹುಟ್ಟಿದೆ, ಜಾತಿ ಬೆಂಕಿಗೆ ಸಿಕ್ಕ
ಪ್ರಸಂಗದುದ್ದಕ್ಕೂ ನಿನ್ನ ಮೇಲೆ ಕಣ್ಣಿತ್ತು
ಹಣವಂತರದ್ದು. ಉರಿ ಬೆಳೆಸುತ್ತಲೇ ಹೋದೆ
ಅನಾಹುತದ ಗುರಿಗೆ- ಅಂತ ನನಗೆ ಶಂಕೆಯಿದ್ದೇ ಇತ್ತು
ನಿನಗೂ ರಕ್ತದ ರುಚಿ ಬೇಕಿತ್ತಾ,
ಎಲ್ಲವೂ ಹೀಗೇ
ಕೊನೆಯಾಗುವುದು ಎಂದು ನಿನಗೆ ಗೊತ್ತಿರಲಿಲ್ಲವಾ,
ಯಾವುದನ್ನೂ ಅನುಮಾನದಲ್ಲಿ ಉಳಿಸಲಿಲ್ಲ ನೀನು.

ನೀ ಕೊಂದದ್ದೇನು ದೊಡ್ಡದಲ್ಲ ಬಿಡು
ಸಾವು ಅಂಥ ಮಹತ್ವದ್ದಂತೇನು ನಾನಂದು ಕೊಂಡಿಲ್ಲ
ಗುಂಡು ಹಾರಿದರೆ ಯಾರಾದರೂ ಸತ್ತಾರು
ಅದೂ ಮುಗಿದದ್ದು ಒಬ್ಬದಡ್ಡ ಕ್ರೂರ ಜಂತು
ಅದರ ಸಾವಿಗಿಂತ ನಿಮ್ಮಗಳ ಬದುಕು
ದೊಡ್ಡದು ಎಷ್ಟೊ ಪಾಲು ಎಲ್ಲರಿಗೂ—
ಆದರೆ ಕೊಂದೆ— ನೀ ಸಿಕ್ಕಿಬಿದ್ದೆ
ನಾಯಿಗಳು ನಿನ್ನನ್ನು ಅಟ್ಟಿಸಿಕೊಂಡೋಡಿಸುತ್ತಿವೆ
ಯಲ್ಲೊ ಈಗ.

ನಿನ್ನ ಭಯ, ಭೀಕರ.
ಸಮಾಜದ ಹಸ್ತಕ್ಕೆ ಕುತ್ತಿಗೆಸಿಕ್ಕಿ ಕೊಲೆಯಾಗುವುದಿಲ್ಲ
ಅಂತ ಎದೆಯಾಳದಿಂದ ಬಯಸುತ್ತೇನೆ,
ನೀನು ಅಡಗಿರುವಲ್ಲೇ ನೀನೇ ಸಾಯುವಂತಾಗಲಿ
ಎಂದು.

ನಿನ್ನ ಧೋರಣೆ
ನಮಗಿಳಿದು ಬರಲಿಲ್ಲ
ಮಹತ್ತಾಗಿ ಮರು ಹುಟ್ಟಿಸಲು
ಎಂದೇ ಕೊಂದೆ
ನೀನು ಸರಿ
ಎಂದು ಬರೆದಿಡುತ್ತೇನೆ
ಯಾಕೆಂದರೆ ನೀನು
ಬದುಕಿನ ಪ್ರೀತಿಯ ನೀರನ್ನೊ-
ಳಗೊಳ್ಳುವ ಪಾತ್ರವಾಗಿದ್ದೀ.

ಾತಿ ಅವಮಾನದ ಬೆಂಕೀಲಿ...

ವಲಿನಿಂದ ನನ್ನ ವಿದ್ಯಾಭ್ಯಾಸ ಸಾಗಿದ್ದು ್ಯತೆ ಆಚರಿಸುವ ವಿದ್ಯಾರ್ಥಿ ನಿಲಯ ಅಲ್ಲಿ ವಡ್ಡರಿಗೆ ಮಾತ್ರ ಪ್ರವೇಶವಿತ್ತು. ಾದಿಗರಿಗೆ ಅತ್ಯಂತ ಕೀಳುಮಟ್ಟದ (ಅಂದರೆ ಕಣ್ಣೀರು ಸುರಿಸಿ, ಕಾಲು ಹಿಡಿ ು.) ನಂತರ ಸಾಕಷ್ಟು ಕಾಡಿಸಿ ಬೇಡಿಸಿ ಪ್ರವೇಶ ಕೊಟ್ಟಿದ್ದರು. ಅಂಥ ಹುಡುಗ ವೊಂದು ನಾಲ್ಕು ಜನ ಇದ್ದೆವು. ಅವ ಾದ ಮತ್ತು ರಾಜೇಂದ್ರ ಮತ್ತು ನಾನು ಆಪ್ತರಾಗಿದ್ದೆವು. ತಮ್ಮ ತಮ್ಮಲ್ಲಿನ

ಗಂಗಾರಾಂ

ರುಕುಗಳನ್ನು ಮರೆತಹಾಗೆ ಇದ್ದೆವು. ುನೆಯಲ್ಲಿ ಒಪ್ಪೊತ್ತಿಗೂ ಗತಿಯಿಲ್ಲದ ನನ್ನ ಊರಿಗೆ ಎಂದಾದರೂ ಸ್ನೇಹಿತ ಕರೆದುಕೊಂಡು ಹೋಗಬೇಕೆನಿಸಿದರೂ ನಸ್ಸು ಒಪ್ಪುತ್ತಿರಲಿಲ್ಲ. ರ ಬಗ್ಗೆ ಅಲ್ಲಿನ ಗೆಳೆಯ ಗೆಳತಿಯರ ಬಗ್ಗೆ ಾಚರಣೆ ಬಗ್ಗೆ ಬಯ್ದು ಖುಷಿಯಿಂದಿದ್ದ ನಮ್ಮ ಮಧ್ಯೆ ಕಣ್ಣಿಗೆ ಕಾಣದ ಮತೀಯ ು ಶಕ್ತಿ ನಮ್ಮಲ್ಲಿದೆಯೆಂದು ಅನ್ನಿಸಿರ ನ್ನ ಗೆಳೆಯರು ಒಂದೇ ಊರಿನವರಾಗಿ ದ್ದರು. ಒಂದು ಸಲ ಪಟ್ಟಾಗಿ ನಾನು ಊರಿಗೆ ಬರಬೇಕೆಂದೂ ಕೇಳಿದ. ಆ ಸಲ ಕ್ಷಮಿಸಿ ಪ್ರಸಾದನ ಹಿಂದೆ ಊರಿಗೆ ಹೋಗಿದ್ದೆ. ರಾತ್ರಿ ಕತ್ತಲ ಗವಿಯಲ್ಲಿ ತೂರಿ ಹೋದ ಹಾಗಾಗಿ ಊಟ ಮಾಡಿ ಮಲಗಿದೆವು. ಬೆಳಗ್ಗೆ ಕುಂಟೆ ಕಡೆಗೆ ಹೋಗಿ ಬೆಳಗಿನ ಕಾರ್ಯ ಮುಗಿಸಿ ಮನೆಗೆ ಬಂದು ತಂಗಳೆಂದು ಬಿಸಿ ಊಟ ಮಾಡಿದೆವು.

ಸ್ವಲ್ಪ ಹೊತ್ತಿಗೆ ನನ್ನ ಗೆಳೆಯ ರಾಜೇಂದ್ರ ಸಿಕ್ಕಿದವನೇ ಸಿಕ್ಕಾಪಟ್ಟೆ ಕೂಗಾಡಲು ಸುರು ಮಾಡಿದ. ಯಾವ ಕಾರಣಕ್ಕಾಗಿ ಎಂದು ವಿಚಾರಿಸಲು, ಅವರ ಮನೆಗೆ ನಾನು ಹೋಗದಿರುವುದು ಎಂದು ತಿಳಿಯಿತು. ಸರಿ ಬಂದರಾಯಿತು ಅದಕ್ಯಾಕೆ ಇಷ್ಟೊಂದು ರಂಪ ಎಂದು ಸಮಾಧಾನಿಸಿ ಅವರ ಮನೆಗೂ ಹೋದೆ. ರಾಜೇಂದ್ರನ-ಮನೆಯವರು ತಟ್ಟೆ ಉಜ್ಜಿ ತೊಳೆದು ಊಟಕ್ಕಿಟ್ಟರು. ಊಟವಾದ ನಂತರ ಅದೂ ಇದೂ ಮಾತುಕತೆಯಾಗಿ ಪ್ರಸಾದನವರು ಹೊಲೆಯರೆಂದು, ಅವರ ಮನೆಯಲ್ಲಿ ಉಂಡಿದ್ದು ಅಷ್ಟೊಂದು ಸರಿ ಕಾಣುವುದಿಲ್ಲ ಎಂದು ಮೂರ್ಖತನದ ಬುದ್ಧಿವಾದ ಅಲ್ಲಿ ಬಂತು. ನಾನು ಸಹ ಹೊಲೆಯರವನೆಂದು ಶಾಂತವಾಗಿ ತಿಳಿಸಿದೆ.

ಅನುಭವದ ಗಣಿಯಿಂದ

ನಾನು ತಿಂದಿದ್ದ ತಟ್ಟೆಯನ್ನು ಮೈಲಿಗೆಯಾಯಿತೆಂಬಂತೆ ಮತ್ತೊಮ್ಮೆ ಬೂದಿಹಾಕಿ ಉಜ್ಜಿ ತೊಳೆದು ಮನೆ ಸೇರಿಸಿಕೊಂಡರು. ಅವಮಾನದ ಬೆಂಕಿಯಲ್ಲಿ ಕೈ ಸುಟ್ಟುಕೊಂಡಂತಾಗಿ ಅಲ್ಲಿಂದ ಬರ್‍ತೀನಮ್ಮ ಎಂದು ಮನೆಯಿಂದ ಆಚೆ ಬಂದೆ. ಬಂದವನೇ ನೇರ ಪ್ರಸಾದನ ಮನೆಗೆ ಹೋದೆ. ಅಲ್ಲಿ ನಾನು ಮಾದಿಗನೆಂದು ಸಂದೇಹಿಸಿ, ನಾನು ತಿಂದಿದ್ದ ಸಿಲ್ವರ ತಟ್ಟೆಯನ್ನು ಅದೇ ಹಾಳೂರ ಬೂದಿ ಹಾಕಿ ಉಜ್ಜುತ್ತಿದ್ದ ಕಂಡು ಪೂರ್ತಿ ಸುಟ್ಟುಹೋದೆ. ●

ಪಂಚಮ ಬೆಳೆಯಲಿ

ಶುಭಾಶಯಗಳೊಡನೆ

ಪ್ರಸಾದ್
ಗ್ಯಾಸ್ ಸರ್ವೀಸ್

ಕೃಷ್ಣ ಮೂರ್ತಿ ಪುರಂ,
ಮೈಸೂರು-8

ಆಳುವ ಕಿವುಡರ ನಡುವೆ

[4ನೇ ಪುಟದಿಂದ]

ಉಳಿಕೆ ಬಾಬ್ತು 450ರೂಗಳನ್ನು ಕಟ್ಟಿದ. ಅಸಲು ಬಡ್ಡಿ ಸೇರಿ 800ರೂಗಳ ಸಂದಾಯವಾಯ್ತು. ಹಣ ಕಟ್ಟಿದ್ದಕ್ಕೆ ರಸೀತಿಯೂ ಸಿಗಲಿಲ್ಲ. ಮುಂಗಡ ಹಣ ಕಟ್ಟಿ ಸಮಯ ಕೇಳಿಕೊಂಡಿದ್ದರೂ ಹರಾಜು ಮಾಡಿದ್ದೇಕೆಂಬುದು ಬಂದಿಗಯ್ಯನಿಗೆ ಸಮಸ್ಯೆಯಾಗೇ ಉಳಿಯಿತು.

ಹೀಗಿರಲು, 17-4-64ರಲ್ಲಿ ಸಿವಿಲ್ ನ್ಯಾಯಾಲಯದ ಮೂಲಕ ಸಿದ್ದೇಗೌಡ ಜಮೀನು ಸ್ವಾಧೀನ ಪಡಿಸಿಕೊಂಡು ಉಳುಮೆಗೆ ತೊಡಗಿ, 24. 7. 64ರಂದು ಹರಾಜು ಹಣ 766ರೂ. ಸಂದಾಯ ಮಾಡಿದ. ಈ ಅನ್ಯಾಯದ ವಿರುದ್ಧ ಬಂದಿಗಯ್ಯ ಮುನ್ಸೀಫ್ ಕೋರ್ಟಿನಲ್ಲಿ ಮನವಿ ಸಲ್ಲಿಸಿ ಸದರಿ ಜಮೀನು 10,000ರೂ ಗಳಿಗೆ ಬಾಳುವುದೆಂದೂ, ಕೇವಲ 766 ರೂಗಳು ಪಡೆದಿರುವುದು ಅಕ್ರಮವೆಂದೂ ತಿಳಿಸಿದ. ಕೋರ್ಟ್ ಸಹ ಜಮೀನಿನ ಅಂದಾಜು ಮೌಲ್ಯ 5 ರಿಂದ 6 ಸಾವಿರದವರೆಗೆ ಆಗುತ್ತದೆಂದು ತಿಳಿಸಿತು. ಸಿದ್ದೇಗೌಡ ಈ ಬಗ್ಗೆ ಸ್ಪಷ್ಟನೆ ನೀಡುತ್ತಾ ಜಮೀನಿನ ಒಟ್ಟು ಮೌಲ್ಯ 2 ಸಾವಿರ ರೂ. ಎಂದೂ ಬಂದಿಗಯ್ಯ ತನ್ನಿಂದ 1500 ರೂ. ಸಾಲ ಪಡೆದಿದ್ದನೆಂದೂ, ತಾನು ಅದಕ್ಕಿಂತ ಹೆಚ್ಚಿಗೆ ಕೊಟ್ಟಿರುವುದಾಗಿ ವಾದಿಸಿದ. ಈ ವಾದಕ್ಕೆ ನಿಜವಾದ ಆಧಾರಗಳಿಲ್ಲದಿದ್ದರೂ ಅದು ಅವನ ಪರವಾಗಿ ನಿಂತಿತು. ಬಂದಿಗಯ್ಯನ ಮನವಿ ಕಸದ ಬುಟ್ಟಿ ಸೇರಿತು. 67ರಲ್ಲಿ ನ್ಯಾಯಾಲಯ ಸಿದ್ದೇಗೌಡನ ಪರ ತೀರ್ಪುಕೊಟ್ಟಿತು. ತೀರ್ಪು ನೀಡಲು ನ್ಯಾಯಾಲಯ ಆಶ್ರಯಿಸಿದ್ದ "ಪ್ರಬಲ"ವಾದ ಅಂಶ–ಬಂದಿಗಯ್ಯನು ಹರಾಜಿನ ವಿರುದ್ಧ ನಿಗದಿತ ಹದಿನೈದು ದಿವಸಗಳಲ್ಲಿ ಅಪೀಲ್ ಮಾಡಲಿಲ್ಲ ಎಂಬುದು. ತನಗೆ ಇಂಥ ಘೋರ ಅನ್ಯಾಯವಾಗಿದೆ ಎಂದು ಅಂದಿನಿಂದಲೂ ಬಂದಿಗಯ್ಯ ಮೊರೆಯಿಡುತ್ತಲೇ ಬಂದ. ಅಧಿಕಾರಿಗಳಾಗಲೀ, ಆಳುವವರಾಗಲೀ ಕಣ್ಣು ತೆರೆಯಲಿಲ್ಲ.

ಬಂದಿಗಯ್ಯ ಭೂಮಿ ಪಡೆಯುವ ಛಲ ಬಿಡದೆ ತನಗೆ ಮಂಜೂರಾದ ದರಖಾಸ್ತು ಜಮೀನಿನ ಪಕ್ಕದಲ್ಲೇ ಸುಮಾರು ನಾಲ್ಕು ಎಕರೆಗಳಿಗಿಂತ ಹೆಚ್ಚಿನ ಬಗರ್ ಹುಕುಂ ಜಮೀನನ್ನು ಸಾಗುವಳಿ ಮಾಡುತ್ತಿರುವುದಾಗಿಯೂ, ಅದನ್ನು ತನ್ನಂತೆ ಮಾಡಿಕೊಡಬೇಕೆಂದು ಮನವಿ ಮಾಡಿದ. ತಹಶೀಲ್ದಾರ್‌ರವರು ಜಮೀನು ಮಂಜೂರಾತಿಗೆ ಎ.ಸಿ. ಯವರಿಗೆ ಶಿಫಾರಸ್ಸು ಮಾಡಿದರು. ಎ.ಸಿ. ಮಾತ್ರ ಗುಂಡುಕಲ್ಲಿನಂತಿದ್ದರು. ಬಂದಿಗಯ್ಯನ ನೋವಾಗಲೀ, ಕೂಗಾಗಲೀ ಅಧಿಕಾರಿಗಳಿಗೆ ಅರ್ಥವಾಗಲೇ ಇಲ್ಲ. ಅದೇ ಕೊರಗಿನಲ್ಲಿ ಆತ ಕಣ್ಣು ಮುಚ್ಚಿದ.

ಬಂದಿಗಯ್ಯ ಸತ್ತದ್ದು, ಸಿದ್ದೇಗೌಡ ಮತ್ತು ಚಿಕ್ಕೈದರಿಗೆ ಮತ್ತಷ್ಟು ಸಲೀಸಾಯಿತು. ಚಿಕ್ಕೈದನಿಗೆ ಕೇವಲ ಒಂದೂವರೆ ಎಕರೆಯನ್ನು ಬಿಟ್ಟುಕೊಟ್ಟು ಉಳಿದದ್ದನ್ನೆಲ್ಲಾ ಸಿದ್ದೇಗೌಡ ಲಪಟಾಯಿಸಿ ಉಳುಮೆ ಮಾಡಲು ತೊಡಗಿದ. ಬಂದಿಗಯ್ಯನ ಹೆಂಡತಿ ಇದೆಲ್ಲವನ್ನೂ ಮೂಕಳಾಗಿ ನೋಡುತ್ತ ದುಃಖಿತಳಾಗಿದ್ದರೂ ಜ...
ಗಂಡನ ಜೊತೆಯಲ್ಲೇ ಮಣ್ಣಾಗಿದ್ದ ಆಸೆ...
ಕಾಡಮ್ಮನಲ್ಲಿ ಚಿಗುರಿತು. ಆಕೆಯು...
ಮುಖ್ಯಮಂತ್ರಿಯವರನ್ನೂ ಮುಟ್ಟಿ...
ಶೀಘ್ರ ಕ್ರಮಕ್ಕೆ ಆದೇಶ ಮಾಡಿದ್ದರೂ ಪ್ರ...
ಜನವೇನೂ ಆಗಿಲ್ಲ.

● ನಮ್ಮ ಸುತ್ತಲೂನೂ

ಭೂಮಿಗಾಗಿ ದಲಿತರ ಅಲೆತ

ಮೈಸೂರು: ಈ ತಾಲೂಕಿನ ಕೇರುಗಳ್ಳಿ ಗ್ರಾಮದ ಓದುಬರಹ ಬಾರದ ಸಿದ್ದಯ್ಯ ಮತ್ತು ದೇವಯ್ಯ ಎಂಬ ಮುಗ್ಧ ದಲಿತರ ದರಖಾಸ್ತು ಭೂಮಿಯನ್ನು ಊರಿನ ಭೂಮಾಲೀಕರು ಆಕ್ರಮಿಸಿಕೊಂಡು ಅವರಿಗೆ ನೆಲೆಯಿಲ್ಲದಂತೆ ಮಾಡಿರುವರು. ತಾಲ್ಲೋಕ್ ಬೋರ್ಡ್ ಸದಸ್ಯ ಪಟೇಲ್ ಜವರೇಗೌಡ ಭೂಮಿ ಕಬಳಿಸಿರುವವರ ಬೆನ್ನೆಲುಬಾಗಿರುವನು. ಭೂಮಿ ಕಳೆದುಕೊಂಡಿರುವ ದಲಿತರು ಭೂಮಿ ಆಕ್ರಮಿಸಿಕೊಂಡಿರುವವರ ಮೇಲೆ ದೂರು ಕೊಟ್ಟು ತಮ್ಮ ಭೂಮಿಯನ್ನು ಸರ್ವೆ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ, ಸರ್ವೆ ಸೂಪರಿಡೆಂಟ್‌ರಿಗೆ ಮತ್ತು ತಹಸಿಲ್‌ದಾರರಿಗೆ ಅರ್ಜಿಕೊಟ್ಟು ಕೈಯಲ್ಲಿ ಸಾಗುವಳಿಪತ್ರ ಹಿಡಿದು ಭೂಮಿಕಾಣದೆ ಅಲೆಯುವುದೇ ಕೆಲಸವಾಗಿದೆ ಅವರಿಗೆ.

ಜೀತ ಮುಕ್ತರಿಗೆ ಪರಿಹಾರಕ್ಕೆ ಒತ್ತಾಯಿಸಿ ಸತ್ಯಾಗ್ರಹ

ಚಿಕ್ಕಮಗಳೂರು : ಈ ತಾಲೂಕಿನ ಸಾವಿರಾರು ಜೀತದಾರರಲ್ಲಿ ಸುಮಾರು ೩೧೫ ಜನ ಜೀತದಾರರಿಗೆ ಮಾತ್ರ ಜೀತ ವಿಮುಕ್ತಿ ಸರ್ಟಿಫಿಕೇಟ್ ದೊರೆತಿದ್ದು ಇನ್ನೂ ನೂರಾರು ಜನರಿಗೆ ಸರ್ಟಿಫಿಕೇಟ್ ದೊರೆಯ ಬೇಕಾಗಿದೆ. ಜೀತದಲ್ಲಿ ಬೆಂದು ಹೋಗುತ್ತಿರುವ ಸಾವಿರಾರು ಜನರನ್ನು ಬಿಡುಗಡೆ ಮಾಡಬೇಕಾಗಿದೆ.

ಜೀತ ವಿಮುಕ್ತರಿಗೆ ಪರಿಹಾರ ನೀಡುತ್ತೇವೆಂದು ಕೊಚ್ಚಿಕೊಂಡ ಸರ್ಕಾರ ಇಲ್ಲಿಯವರೆಗೂ ಯಾವುದೇ ರೀತಿಯ ಪರಿಹಾರ ನೀಡಿಲ್ಲ. ದ.ಸಂ.ಸ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಕೊಟ್ಟು ಜೀತ ವಿಮುಕ್ತರಿಗೆ ಪರಿಹಾರ ನೀಡಿ ಎಂದು ಒತ್ತಾಯಿಸಿದ್ದರೂ ಅಧಿಕಾರಿಗಳು ಗಮನ ಹರಿಸಿಲ್ಲ. ಆದ ಕಾರಣ ದ.ಸಂ.ಸ. ಅನಿವಾರ್ಯವಾಗಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೇಡಿಕೆ ಈಡೇರಿಕೆಗಾಗಿ ೧.೧೨-೮೧ರಿಂದ ಸತ್ಯಾಗ್ರಹ ಹೂಡಿದೆ.

ಅಯ್ಯಪ್ಪ ಭಕ್ತನಿಗೂ ದಂಡ

ಪಿರಿಯಾಪಟ್ಟಣ : ಇದೇ ತಾಲೂಕಿನ ಅಂಕನಹಳ್ಳಿ ಗ್ರಾಮದ ಅಸ್ಪೃಶ್ಯ ನಾಗರಾಜು ಅಯ್ಯಪ್ಪ ಸ್ವಾಮಿ ಯಾತ್ರೆಗೋಗಲು ಮಾಲೆ ಹಾಕಿಕೊಂಡಿದ್ದು ಆ ಧೈರ್ಯದ ಮೇಲೆ ಕಾರ್ತಿಕ ಸೋಮವಾರ ಊರಿನ ಬಸವೇಶ್ವರ ದೇವಸ್ಥಾನಕ್ಕೆ ...
ಮಾಡಿದ್ದೇ ಅಪರಾಧವಾಗಿ ಪಟೇಲ ಅಪ್ಪೂ...
ನೇತೃತ್ವದಲ್ಲಿ ಗ್ರಾಮದ ಸವರ್ಣೀಯರು ...
ಯ್ತಿಸೇರಿ ಆತನಿಗೆ 500ರೂ ದಂಡ ಹಾಕಿ...

ಅಪ್ಪೂಗೌಡನ ದಬ್ಬಾಳಿಕೆ ಮಿತಿ...
ತ್ತಿದ್ದು ದಲಿತರು ಬದುಕುವುದೇ ಶೋಚ...
ವಾಗಿದೆ ಎಂದು ಈರಯ್ಯ ಮತ್ತಿತರರ ...

ಭೂನ್ಯಾಯ ಮಂಡಳಿ ಮೇ... ಶಾಸಕನ ಪ್ರಭಾವ : ಖಂ...

ಭದ್ರಾವತಿ : ಈ ತಾಲ್ಲೂಕಿನ ಕೋ...
ಗ್ರಾಮದ ದಲಿತರು ೧೫ ವರ್ಷಗಳಿಂದ ...
ಲಯದ ಭೂಮಿ ಸಾಗುವಳಿ ಮಾಡುತ್ತಿ...
ಈ ಭೂಮಿ ವಿವಾದ ಭೂನ್ಯಾಯ ಮಂ...
ಮುಂದಿದ್ದು, ಸ್ಥಳೀಯ ಶಾಸಕ ರಾಜಶೇ...
ಭೂ ನ್ಯಾಯ ಮಂಡಳಿಮೇಲೆ ಪ್ರಭಾವ...
ದಲಿತರಿಗೆ ಭೂಮಿ ದಕ್ಕದಂತೆ ಮಾಡಲು ...
ತ್ನಿಸುತ್ತಿರುವುದನ್ನು ದ. ಸಂ. ಸ. ಖಂಡಿಸಿ...

ನೀಚ ಶಿಕ್ಷಕರು

ಗುಲಬರ್ಗ : ಇಲ್ಲಿನ ಸರ್ಕಾರಿ ಪ್ರಾಕ್ಟೀ...
ಹೈಸ್ಕೂಲ್‌ನಲ್ಲಿ ಕಲಿಯುತ್ತಿರುವವರಲ್ಲಿ ...
ರಷ್ಟು ಮಕ್ಕಳು ಹರಿಜನ-ಗಿರಿಜನ-ಹಿ...
ಮರಾಠ ಪಂಗಡಕ್ಕೆ ಸೇರಿದವರಾಗಿದ್ದಾರೆ...
ಕಾರಣಕ್ಕಾಗಿಯೋ ಏನೋ ಇಲ್ಲಿನ ಶಿ...
(ಬಹುತೇಕ ಬ್ರಾಹ್ಮಣರು) ೧೦-೧೫ ...
ತಡವಾಗಿ ತರಗತಿಗಳಿಗೆ ಹೋಗುವ ಪದ್ಧತಿ...
ಕೊಂಡಿದ್ದಾರೆ. ಈ ಶಾಲೆಯು ಶಿಕ್ಷಣ...
ನಿರ್ದೇಶಕರ ಕಛೇರಿಗೆ ಹೊಂದಿಕೊಂ...
ಇಲ್ಲಿನ ಶಿಕ್ಷಕರು ಯಾವುದೇ ಭಯವಿಲ್ಲದೆ...
ಬೇಜಾರಾದಾಗ ಮನೆಕಡೆಗೆ ಕಛೇರಿ ಮುಂ...
ಹೋಗುತ್ತಾರೆ. ಹಿಂದುಳಿದ ಪಂಗಡಗಳ...
ರ್ಥಿಗಳಿಗೆ ಶಾಲಾಶುಲ್ಕ ವಿನಾಯಿತಿ ನ...
ರೂ ಈ ಶಾಲೆಯಲ್ಲಿ ಬಿ. ಟಿ ಪಂಗಡಕ್ಕೆ...
ಮಕ್ಕಳಿಂದ ಶುಲ್ಕ ವಸೂಲಿ ಮಾಡಿದ್ದಾರೆ...

ಇಲ್ಲಿನ ವಿದ್ಯಾರ್ಥಿಗಳ ಬಗ್ಗೆ– 'ಅವರು ...
ಹಾಜರಾತಿಗಾಗಿ ಬರುತ್ತಾರೆ. ಮೊದಲೇ ...
ಯರುಅವರಿಗೆ ಕಲಿಯುವ ವಿಚಾರವೇಇಲ್ಲ...
ಹೇಳಿದರೂ ಅವರಿಗೆ ತಿಳಿಯುವುದಿಲ್ಲ' ...
ನೀಚ ಶಿಕ್ಷಕರ ಮೇಲೆ ಕ್ರಮ ತೆಗೆದುಕೊ...
ರಿಲ್ಲವೆ?

ಂದ]

ಕೆಲವು ಸಲ ಹಳ್ಳಿಯ ಒಳಗೆ ಸುತ್ತ
ು ರಸ್ತೆಯ ಮೇಲೆ ಅಲ್ಲವೆ?
; ಜನ ದೂರ ಹೋಗದಷ್ಟು ಆಲಸಿಗ
ಹೀಗಾಗುವುದು.
ಸಿಂದಾಗಿ ಈ ಮಲ ಒಣಗುವುದು.

ಹಳ್ಳಿಗರೊಂದಿಗೆ ಸಾಕ್ರೆಟೀಸ್‌ನ ಮಾತುಕತೆ

ಹ : ಹೌದು

ಸಾ : ದನಗಳು ಬೆಳಿಗ್ಗೆ ಹೋಗಿ ಸಾಯಂಕಾಲ ಮರಳಿ ಬರುವಾಗ ಗೋಧೂಳಿಯಿಂದಾಗಿ ಈ ಮಲ ಗಾಳಿಯಲ್ಲಿ ಕೂಡುವುದಲ್ಲವೆ?

ಹ : ಹೌದು.

ಸಾ : ಮಳೆ ಬಂದಾಗ ಅದು ಹೊಂಡದಲ್ಲಿ ಹೋಗಿ ಬೀಳುವುದು. ಆ ನೀರನ್ನು ದನಗಳು ಕುಡಿಯುವುವು. ಆ ನೀರಲ್ಲಿ ನೀವು ಬಟ್ಟೆ ತೊಳೆಯುವಿರಿ ಮತ್ತು ಕೆಲಸಲ ಕುಡಿಯುತ್ತೀರಿಕೂಡ.

ಹ : ಹೌದು.

ಸಾ : ಅಲ್ಲದೆ ಮಳೆ ಬಂದಾಗ ಆ ಮಲವೆಲ್ಲ ಮಳೆ ನೀರಿನೊಂದಿಗೆ ಮಡುವಿನಲ್ಲಿ ಸೇರುವುದು, ಬಾವಿಯಲ್ಲೂ ಹೋಗುವುದು ಮತ್ತು ಆ ನೀರನ್ನೂ ಗಲೀಜು ಮಾಡುವುದು.

ಹ : ಹೌದು, ಕೆಲಸಲ ಹಾಗೂ ಆಗುವುದು.

ಸಾ : ಕೆಲವು ಸಲ ಆ ಮಲವನ್ನು ನೀವು ನಿಮ್ಮ ಚಪ್ಪಲಿಗಳಿಗೆ ಅಂಟಿಸಿಕೊಂಡು ಬರುವಿರಿ.

ಹ : ಹೌದು ನಮಗೆ ಆ ಭಯ ಇದೆ. ಕೆಲವುಸಲ ಹಾಗೆ ಆಗುವುದು ಕೂಡ.

ಸಾ : ನಿಮ್ಮ ಹೆಂಡಂದಿರು ಬೀಸುವಾಗ ಹಿಟ್ಟಿನ ಮೇಲೆ ಈ ಮಲದ ಧೂಳು ಬಂದು ಬೀಳುವುದಲ್ಲವೆ?

ಹ : ಹೌದು.

ಸಾ : ನಿಮ್ಮ ಹೆಂಗಸರು ಅಡಿಗೆ ಮಾಡುವಾಗ ಅದು ಆಹಾರದ ಮೇಲೆ ಕೂಡಬೀಳುವುದಲ್ಲವೆ ?

ಹ : ಹೌದು.

ಸಾ : ಹಾಗಾದರೆ ನೀವು ಯಾವಾಗಲೂ ಹಳ್ಳಿಯ ಮಲದ ಒಂದು ಭಾಗವನ್ನು ತಿನ್ನುತ್ತಲೇ ಇರುತ್ತೀರಲ್ಲವೆ?

ಹ : ಹಾಗೆ ಅನ್ನಿಸುತ್ತದೆ.

ಸಾ : ಮತ್ತು ನೀರಿನೊಂದಿಗೆ ಕುಡಿಯುವಿರಿ.

ಹ : ಹೌದು, ಗೊತ್ತಿದ್ದು ಕೂಡ.

ಸಾ : ಮತ್ತು ಗಾಳಿಯೊಡನೆ ಅದನ್ನು ಉಸಿರಾಡುವಿರಿ.

ಹ : ಹೌದು.

ಸಾ : ಹಾಗಾದರೆ ಪ್ರತಿದಿನ ನಿಮ್ಮ ಊಟ, ಕುಡಿಯುವುದು ಮತ್ತು ಉಸಿರಾಟದಿಂದಲೇ ಮೈಲಿಗೆಗೊಳಗಾಗುವಿರಿ. ಮಾದಿಗನನ್ನೇಕೆ ದೂರುವಿರಿ? ನಿಮ್ಮ ಜಾತಿಗಳ ಬಗ್ಗೆ ಬಡಾಯಿ ಕೊಚ್ಚಿಕೊಂಡು ಮಾದಿಗನನ್ನು ಅಸ್ಪೃಶ್ಯನೆಂದು ದೂರುವ ಮೊದಲು ಆಳವಾದ ಗುಂಡಿಯನ್ನು ತೋಡಿ, ಕೊಳೆ ಮತ್ತು ಕಸವನ್ನು ಅವುಗಳಲ್ಲಿ ಹಾಕುವ ವ್ಯವಸ್ಥೆ ಮಾಡಿ, ಮಲವಿಸರ್ಜನೆಗಾಗಿ ಗುಂಡಿಗಳನ್ನು ತೋಡಿಕೊಳ್ಳಲು ಎಲ್ಲರಿಗೂ ಒತ್ತಾಯಮಾಡಿ. ಹಳ್ಳಿ ಕೊಳೆಯಾಗದಂತೆ ನೋಡಿಕೊಂಡು ನೀವೂ ಆಲಸ್ಯತನ ಮತ್ತು ಕೊಳಕು ಚಟಗಳಿಂದ ಹೊರ ಬಂದು ಮೈಲಿಗೆಯಾಗದಂತೆ ಬದುಕುವುದು ಒಳ್ಳೆಯದಲ್ಲವೆ?

ಹ : ನಾವೂ ಹಾಗೆ ಪ್ರಯತ್ನಿಸುವೆವು. ಮತ್ತು ಸಾಧ್ಯವಾದಷ್ಟು ಮಾಡುವೆವು. ಆದರೆ ಯುಗ ಯುಗಗಳಿಂದ ಬಂದ ರೂಢಿಯನ್ನು ಕಿತ್ತೊಗೆಯುವುದು, ಕಠಿಣವಾದ ಕೆಲಸವಾಗಿದೆ.

ಕನ್ನಡಕ್ಕೆ: ರಂಜಾನ್ ದರ್ಗಾ

ು ಸುತ್ತಲೂನೂ

● ನಮ್ಮ ಸುತ್ತಲೂನೂ

ಳಿಕೆ ವಿರುದ್ಧ ಮಲಿಯೂರಿನಲ್ಲೊಂದು ಪುಟ್ಟ ಕ್ರಾಂತಿ

ಪ್ರಸಿದ್ಧವಾಗಿರುವ ಬನ್ನೂರು ಯೂರಿನಲ್ಲಿ ಒಂದು ಪುಟ್ಟ ಕ್ರಾಂತಿ ಗಿದೆ. ಅಂಗಡಿ ಮಹಾದೇವಪ್ಪ ಯಿತ ಜಮೀನುದಾರನ ದಬ್ಬಾಳಿಕೆ ನ್ನೂರು ಪೋಲೀಸ್ ದೌರ್ಜನ್ಯಕ್ಕೆ ಕಳಕೊಂಡಿದ್ದ ಇಲ್ಲಿನ ದಲಿತರು ರ್ಷಸಮಿತಿಯಿಂದ ಉಸಿರು ತಕ್ಕೊಂ ೇರಾಟಕ್ಕೆ ಇಳಿದಿದ್ದಾರೆ.

ಮಹಾದೇವಪ್ಪನ ಆಲೆ ಮನೆ ಎದುರು ದು ಚೂರು ಕಬ್ಬು ತೆಗೆದುಕೊಂಡಿ ಹುಡುಗನೊಬ್ಬ ಪ್ರಾಣ ಹೋಗು ತಿನ್ನುತ್ತಿದ್ದ. ದಾರಿಯಲ್ಲಿ ಹೋಗು ಡು, ಮಹಾದೇವ ಎನ್ನುವ ದಲಿತ ಾಕೆ ಹೀಗೆ ಹೊಡಿತೀರಿ" ಎಂದು ೆ ಅವರಿಗೂ ಮೈ ಕೈ ಗಾಯವಾಗು ಬಿತ್ತು. ಅಷ್ಟೇ ಅಲ್ಲ ಕಳ್ಳತನದ ತ್ತಿಕೊಂಡು ಪೋಲೀಸು ಠಾಣೆ ಸೇರ ಉಳ್ಳವರ ಕಾಲು ನೆಕ್ಕುಲು ಇರುವ ಬನ್ನೂರು ಪೋಲೀಸ್ ಹನುಮಂತರಾವ್ ಎಂಬಾತ ಏಟು ಕಳಕೊಂಡಿದ್ದವರನ್ನೇ ಎಳೆದು ು ಠಾಣೆಯಲ್ಲಿ ಹಿಂಸಿಸಿದ. ಆತಂಕ ಿಯೂರಿನ ಹತ್ತು ಜನ ಠಾಣೆಗೆ "ಮಾದಿಗ ನನಮಕ್ಕಳ್ಗೆ ಇಷ್ಟು ಾ?" ಎನ್ನುತ್ತಾ ಅಂಗಡಿ ಮಹಾ ಅಷ್ಟೂ ಜನರ ಮೇಲೆ ಹೊಸ ಿಸಿಕೊಂಡು ಮಸೆತಿರುವಿದ.

ದೌರ್ಜನ್ಯಕ್ಕೆ ಹೆದರಿ ಊರೂರು ಮಲಿಯೂರು ದಲಿತರ ಬೆನ್ನಿಗೆ ಘರ್ಷ ಸಮಿತಿ ನಿಂತಿದೆ. ಅಂಗಡಿ ಮಹಾದೇವಪ್ಪನಿಂದ ಇಂಥ ಅನೇಕ ದಬ್ಬಾಳಿಕೆಗಳನ್ನು ಮೂಖರಂಥೆ ಸಹಿಸಿಕೊಂಡಿದ್ದ ದಲಿತರು ಈಗ ಬನ್ನೂರು ಪೋಲೀಸ್ ಠಾಣೆಯ ಎದುರು ಒಟ್ಟಾಗಿ ಪ್ರತಿಭಟಿಸಿ, ಮಹಾದೇವಪ್ಪನ ಪ್ರತಿಕೃತಿ ಸುಟ್ಟು ನ್ಯಾಯ ಕೇಳಿದ್ದಾರೆ. ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ನ. 28ರಂದು ಜಿಲ್ಲಾ ಪೋಲೀಸ್ ಅಧಿಕಾರಿಗಳೆದುರು ಧರಣಿ ಸತ್ಯಾಗ್ರಹ ನಡೆಸಿ ದಫೇದಾರ್ ಹನುಮಂತ ರಾವ್‌ನನ್ನು ಕೆಲಸದಿಂದ ಕಿತ್ತುಹಾಕುವಂತೆ, ಮಹಾದೇವಪ್ಪ ಮತ್ತು ಆತನ ತಮ್ಮ ಪೋಲೀಸ್ ದಳಪತಿ ಸ್ವಾಮಿ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ನೊಂದ ಮಲಿಯೂರು ದಲಿತರನ್ನು ಬೆಂಬಲಿಸಿದೆ.

ಕಾಮಿ ಶಿಕ್ಷಕನಿಗೆ ಶಿಕ್ಷೆ ಇಲ್ಲವೆ?

ಪಿರಿಯಾ ಪಟ್ಟಣ : ಈ ತಾಲೋಕಿನ ಕಣಗಾಲು ಗ್ರಾಮದ ಪ್ರಾಥಮಿಕ ಶಾಲೆಯ ಉಪಾಧ್ಯಾಯ ಶಿವಪ್ಪ ಎನ್ನುವ ಲಿಂಗಾಯಿತ ಕಾಮಿಯು, ನಾಲ್ಕನೇ ತರಗತಿ ಓದುತ್ತಿದ್ದ ಓಬಳಮ್ಮ ಎಂಬ ಅಸ್ಪೃಶ್ಯ ವಿದ್ಯಾರ್ಥಿನಿ ಮೇಲೆ ಸೆಪ್ಟಂಬರ್9ರಂದು ಬಲವಂತವಾಗಿ ಅತ್ಯಾಚಾರ ಮಾಡಲು ಯತ್ನಿಸಿದ. ಈ ವಿಚಾರವನ್ನು ಮನೆಯವರೊಟ್ಟಿಗೆ ಬಾಯಿ ಬಿಟ್ಟರೆ ನಾಳೆ ಕ್ಲಾಸಿನಲ್ಲಿ ಬಲಿ ಹಾಕುವುದಾಗಿ ಆಕೆಯನ್ನು ಹೆದರಿಸಿ ಮನೆಗೆ ಕಳುಹಿಸಿದ ಮೇಲೆ ವಿಷಯ ಹುಡುಗಿ ತಂದೆಗೆ ಗೊತ್ತಾಗಿ ಪೋಲೀಸರಿಗೆ ದೂರು ಕೊಡುವುದನ್ನು ಈ ಗ್ರಾಮದ ಬ್ರಾಹ್ಮಣ ಛೇರ್ಮನ್ ಚಂದ್ರಶೇಖರನು ತಡೆದು ಈ ಕೃತ್ಯವನ್ನು ಮುಚ್ಚಿಹಾಕಿದ್ದಾನೆ. ಉಪಾಧ್ಯಾಯನಾಗಿ ಆಸುಳೆಗಳ ಬಾಳು ಕೆಡಿಸುವ ಶಿವಪ್ಪನ ಹೀನ ಕೃತ್ಯಕ್ಕೆ ಶಿಕ್ಷೆ ಇಲ್ಲವೆ?

ಕೈಲಾಸಪುರವೋ ನರಕಪುರವೋ !

ಟ ಮೈಸೂರಿನ ಹೊಟ್ಟೆಯೊಳಗೆ ಕೈ ಭೀಕರ ಕೊಳಚೆ ಪ್ರದೇಶವೊಂದಿದೆ. ಲಿತರು ಮತ್ತು ಮುಸ್ಲೀಮರು ನರಕ ದುಕುವ ಈ ಕೈಲಾಸಪುರದಲ್ಲಿ ದೇವೇಂ ತಿರುಕ ಕಾಂಗ್ರೈ ರಾಜಕಾರಣಿ ಹರಿಜನರ ಗಳನ್ನೆಲ್ಲ ನುಂಗುತ್ತಾ ಸಹಕಾರಿ ಸಂಘ ೇಬಂಗಳನ್ನಾಗಿ ಮಾಡಿಕೊಳ್ಳುತ್ತಾ, ಿದ ಕೊಳಚೆಯಲ್ಲಿ ಈಜಾಡುತ್ತಿದ್ದಾನೆ. ಕಪುರವಾಗಿದೆ. ಇಂಥ ತಲೆ ಹಿಡುಕ ಜೀಳಿದಿರುವ ದೇವೇಂದ್ರನ. 29ರಂದು ಕೆಲ ಯುವಕರು ದಲಿತ ಸಂಘರ್ಷ ಸಮಿತಿಯ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಇಲ್ಲಿ ಏರ್ಪಡಿಸಿದ್ದಾಗ ತನ್ನ ಗೂಂಡಾಗಳನ್ನ ಬಿಟ್ಟು ಕಾರ್ಯಕರ್ತರನ್ನು ಬೆದರಿಸಿ ಕಾರ್ಯಕ್ರಮ ರದ್ದು ಮಾಡಲು ಮಾಡಿದ ಎಲ್ಲಾ ದಬ್ಬಾಳಿಕೆಗಳನ್ನೂ ಮೀರಿ ದ.ಸಂ.ಸ. ಕಾರ್ಯ ಕ್ರಮನಡೆದಿದೆ. ದಲಿತ ಸಂಘರ್ಷ ಸಮಿತಿಯ ಹೆಸರು ಕೇಳಿಯೇ ನಡುಗ ತೊಡಗಿರುವ ಈತ ಕೈಲಾಸಪುರದ ಕೃಷ್ಣಾ ಎಂಬ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿ ದಲಿತ ಸಂಘರ್ಷ ಸಮಿತಿ ಕೈಲಾಸಪುರದಲ್ಲಿ ಬೆಳೆಯುವುದನ್ನು ತಪ್ಪಿಸಲು ನೋಡುತ್ತಿದ್ದಾನೆ. ಮೂರ್ಖ ಎನ್ನಬೇಕು ಅಷ್ಟೆ !



ಬ್ರಾಹ್ಮಣನ ಒಂದು ಹಲ್ಲಿಗೆ ಗೌಡನ ಎರಡು ಹಲ್ಲು

ಹೀಗೆ ಒಂದೂರಿನ ಒಂದು ಆಫೀಸಿನಲ್ಲಿ ಗೌಡ ಅಧಿಕಾರಿಯೂ ಬ್ರಾಹ್ಮಣ ಗುಮಾಸ್ತನೂ ಇದ್ದರು. ಗೌಡ ಅಧಿಕಾರಿಯು ಆಗತಾನೆ ಕೆಲಸಕ್ಕೆ ಬಂದಂಥವನಾದರೆ ಬ್ರಾಹ್ಮಣ ಗುಮಾಸ್ತೆಯು ಆ ಆಫೀಸು ಹುಟ್ಟಿದ ಪುರಾತನದಿಂದಲೂ ಅಲ್ಲೆ ಇದ್ದಂತವನು. ಹಾಗಾಗಿ ಬಂದು ಹೋದ ಅಧಿಕಾರಿಗಳೆಲ್ಲರೂ ಗುಮಾಸ್ತೆಗೆ ಅನುಸರಿಸಿ ಕೊಂಡು ಹೋಗುವುದಾಗುತ್ತಿತ್ತು. ಆದರೆ ಹೊಸತಾಗಿ ಬಂದ ಗೌಡ ಅಧಿಕಾರಿಯು ಹಳಬ ಬ್ರಾಹ್ಮಣ ಗುಮಾಸ್ತೆಗೆ ಕೇರುಮಾಡದೆ ನಡೆದನು. ಇದರಿಂದಾಗಿ ಗೌಡ ಅಧಿಕಾರಿಯು ಹೇಳಿದ್ದಕ್ಕೆಲ್ಲ ಬ್ರಾಹ್ಮಣ ಗುಮಾಸ್ತೆಯು ಕ್ಯಾರಿ ಆಕುತ್ತ ಎಲ್ಲ ಕೆಲಸವೂ ಅಲ್ಲಲ್ಲಿಗೆ ನಿಂತು ಬಿಡುತ್ತಿತ್ತು.

ಈ ಗೌಡ ಅಧಿಕಾರಿಯು ಆ ಬ್ರಾಹ್ಮಣ ಗುಮಾಸ್ತೆಗೆ ಒಂದು ಸಲ ಹೇಳಿ ನೋಡಿದನು. ಕ್ಯಾರಿ ನಿಲ್ಲಲಿಲ್ಲ. ಎರಡನೆ ಸಲವೂ ಹೇಳಿ ನೋಡಿದನು. ಹಾಗೂ ಕ್ಯಾರಿ ನಿಲ್ಲಲಿಲ್ಲ. ಕೊನೆಗೆ ತಾಳಲಾರದೆ ಒಂದು ದಿನ ಗೌಡ ಅಧಿಕಾರಿಯು ಬ್ರಾಹ್ಮಣ ಗುಮಾಸ್ತೆಯ ಕಪಾಳಕ್ಕೆ ಹೊಡೆದುಬಿಟ್ಟ ಪರಿಣಾಮವಾಗಿ ಬ್ರಾಹ್ಮಣ ಗುಮಾಸ್ತೆಯ ಬಾಯಿಂದ ರಕ್ತವೂ ಮತ್ತು ಒಂದು ಹಲ್ಲೂ ಉದುರಿತು. ಬ್ರಾಹ್ಮಣ ಗುಮಾಸ್ತೆಯು ನೋವನ್ನೂ ರಕ್ತವನ್ನೂ ನುಂಗಿಕೊಂಡನು. ತನ್ನ ಉದುರಿದ ಒಂದು ಹಲ್ಲಿಗೆ ಮತ್ತು ಹೋದ ಮಾನಕ್ಕೆ ಬದಲಾಗಿ ಗೌಡ ಅಧಿಕಾರಿಯ ಎರಡು ಹಲ್ಲನ್ನು ತೆಗೆಯುವುದಾಗಿ ಆಗ ಮನದಲ್ಲೆ ಪ್ರತಿಜ್ಞೆ ಮಾಡಿದನು.

ಮನದಲ್ಲೆ ಮಾಡಿದ ಪ್ರತಿಜ್ಞೆಯು ಗುಮಾಸ್ತೆಯ ಮನದಲ್ಲೆ ಉಳಿಯಲಿಲ್ಲ. ಆತ ಒಬ್ಬನಿಗೆ ಹೇಳಿದ್ದು ಇನ್ನೊಬ್ಬನಿಗೆ ತಲುಪಿ ಹೀಗೆ ಸುತ್ತಾಡಿ ಅಧಿಕಾರಿಯ ಕಿವಿಗೂ ಮತ್ತು ಹಲ್ಲಿಗೂ ಸುದ್ಧಿ ತಾಕಿತು. ಇದರಿಂದ ಮತ್ರ ಕುಪಿತನಾದ ಆ ಗೌಡ ಅಧಿಕಾರಿಯು ಈ ಬ್ರಾಹ್ಮಣ ಗುಮಾಸ್ತೆಯನ್ನು ನೀರು ನೆರಳಿಲ್ಲದೆಡೆಗೆ ವರ್ಗ ಮಾಡಿ ಆ ಗುಮಾಸ್ತೆಯನ್ನೂ, ಪ್ರಕರಣವನ್ನೂ ಮರೆತುಬಿಟ್ಟನು.

ವರುಷಗಳು ಉರುಳಿದವು. ಅಧಿಕಾರಿಗೂ ನಿವೃತ್ತಿ ಆಯ್ತು. ಇನ್ನು ಫೆನ್ಷನ್ನು ಮತ್ತೊಂದು ಪಡೆದು ಇಳಿಜೀವನ ಸಾಗಿಸಲು ರಡಿಯಾದನು. ನಿವೃತ್ತ ಅಧಿಕಾರಿಯ ಪೆನ್ಷನ್ನು ಗ್ರಾಜುಯಿಟಗೆ ರಿಕಾರ್ಡುಗಳೆಲ್ಲ ಓಡಾಡಿ ಇನ್ನೇನು ಹಣ ಕೈಗೆ ಸಿಕ್ಕಿತು ಎಂಬ ಮಟ್ಟಕ್ಕೆ ಬಂತು. ಇನ್ನೇನು ಹಣ ಚೆಕ್ಕು ಪಡೆಯಲು ಬಂದಾಗ ಈ ನಿವೃತ್ತ ಅಧಿಕಾರಿಗೆ ಒಂದು ಸಮಸ್ಯೆ ಕಾದಿತ್ತು. ಏನೆಂದರೆ ನಿವೃತ್ತ ಅಧಿಕಾರಿಯ ಚಹರೆಯಲ್ಲಿ ಅಧಿಕಾರಿಗೆ ಮುಂದಿನ ಎರಡು ಹಲ್ಲು ಇಲ್ಲ ಎಂದಿರುವ ಪ್ರಯುಕ್ತ ಈಗ ಅಧಿಕಾರಿಗೆ ಹಾಲಿ ಹಲ್ಲಿರುವ ಪ್ರಯುಕ್ತ ಅನುಮಾನಾಸ್ಪದವಾಗಿ ಫೆನ್ಷನ್ನು ಗ್ರಾಚುಯಿಟಿ ತಡೆಹಿಡಿಯಲಾಗಿತ್ತು. ಬ್ರಾಹ್ಮಣ ಗುಮಾಸ್ತೆಯು ಕಳೆದುಕೊಂಡ ಒಂದುಹಲ್ಲು ನೆಗಾಡುತಿತ್ತು.

ಅಸಹಾಯಕನಾದ ಅಧಿಕಾರಿಯು ಬಾಯಿಮುಚ್ಚಿಕೊಂಡು ಹೊರಬಂದು ದಂತ ವೈದ್ಯರಿಂದ ತನ್ನ ಮುಂದಿನ ಎರಡು ಹಲ್ಲನ್ನು ತೆಗೆಸಿ ಒಂದು ಪೆನ್ಷನ್ನು ಮತ್ತೊಂದು ಪಡೆದನು ಎಂಬಲ್ಲಿಗೆ, ಬ್ರಾಹ್ಮಣ ಗುಮಾಸ್ತೆಯು ಲೆಕ್ಕಣಿಕೆಯಾಡಿಸಿ ತನ್ನ ಪ್ರತಿಜ್ಞೆ ಈಡೇರಿಸಿಕೊಂಡ ಎಂಬಲ್ಲಿಗೆ ಕಥೆ ಸಮಾಪ್ತಿಯಾಯ್ತು.

ಸ್ನೇಹಿತರೇ, ಇದು ಕಥೆಯೂ ಅಲ್ಲ, ಗೌಡ ಬ್ರಾಹ್ಮಣರದ್ದೂ ಅಲ್ಲ, ಇದೇ ಇದುವರೆಗೂ ನಡೆದುಕೊಂಡು ಬರುತ್ತಿರುವ ಬ್ರಾಹ್ಮಣ್ಯ ಮತ್ತು ಪಾಳೆಗಾರಿ ಸ್ವಭಾವದ ನಡಿಗೆ. ●

ನೆರಮನೆಯ ದೇವರ ಬಲ್ಲೆವು

ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು
ತೆತ್ತೀಸ ಕೋಟಿ ದೇವತೆಗಳ ನಾವು ಬಲ್ಲೆವು
ಅದೇನು ಕಾರಣವೆಂದಡೆ
ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದವರಾಗಿ
ಇವರು ದೇವರೆಂಬುದ ನಾ ಬಲ್ಲೆವಾಗಿ
ಬಲ್ಲೆ ವೇಂದಾತ ನಂಬಿಗ ಚೌಡಯ್ಯ

—ಅಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯನ ಈ ವ್ಯಂಗ್ಯ, ಕಟಕಿಯೂ ಸಹ ಅಂದಿನ ಬ್ರಾಹ್ಮಣ ಸಮಾಜಕ್ಕೆ ತಾಗಿರಲಿಲ್ಲವೆ? ಅ ಬ್ರಾಹ್ಮಣನೊಬ್ಬನಿಗೆ ಬ್ರಾಹ್ಮಣ ಪರಂಪರೆ ಸೃಷ್ಟಿಸಿದ ಕರ್ಮಾಚರಣೆಗಳು ತರ್ಕಶೂನ್ಯ ಕಗ್ಗಗಳಾಗಿ ಕಾಣುತ್ತದೆ. ಆ ಪರಂಪರೆ ಸೃಷ್ಟಿಸಿದ ದೇವರುಗಳೂ ಸಹ. ಬ್ರಹ್ಮ, ವಿಷ್ಣು, ತೆತ್ತೀಸ ಕೋಟಿ ದೇವತೆಗಳೆಲ್ಲ ನನ್ನ ನೆರೆಮನೆಯವರಾಗಿದ್ದರಿಂದ ಅವರ ಟೊಳ್ಳುತನಗೊತ್ತಾಯಿತೆನ್ನುವ ಚೌಡಯ್ಯನ ಮಾತಿನ ಹಿಂದೆ ವೈದಿಕ ಪರಂಪರೆ ಸೃಷ್ಟಿಸಿದ ವ್ಯವಸ್ಥೆಯ ಬಗ್ಗೆ ಲೇವಡಿ ಇದೆ. ವಾಸ್ತವಿಕತೆ ವ್ಯಂಗ್ಯ, ವಿಷಾದಗಳ ಮಧ್ಯೆ ಶಕ್ತಿ ಶಾಲಿಯಾಗಿ ವ್ಯಂಜಿಸಿದೆ.

—ಲಿಂಗದೇವರು ಹಳೆಮನೆ

ಫೋ : 21777
ರತ್ನ ಟ್ರಾವಲ್ಸ್ ಮತ್ತು
ಮೊಡ್ರನ್ ಟ್ರಾವಲ್ಸ್
ಮೈಸೂರಿನಿಂದ ಬೆಂಗಳೂರಿ
ತಡೆರಹಿತ ಲಗ್ಜುರಿ ಬಸ್‌ಕೋ
ಬೆಳಗ್ಗೆ 7ಗಂಟೆಗೆ, ಮಧ್ಯಾಹ್ನ 2ಗ
,, 8.15 ,, ,, 3
,, 11 ,, ,, 4
ಸಾಯಂಕಾಲ7
ವಿವರಗಳಿಗೆ: ರತ್ನಟ್ರಾವೆಲ್ಸ್, ಟೂ
ಕಾರ್ಪೊರೇಷನ್ ಆಫ್ ಇಂಡಿಯಾ
ಗಾಂಧಿಚೌಕ ಮೈಸೂರು.

ಮೈಸೂರು, ಮಂಡ್ಯ ಜಿಲ್ಲೆಗ
ಮನೆ ಮನೆ ಮಾತಾದ

ಓದಿರಿ ಓದಿರಿ ಓದಿ
ಆಂದೋಲನ
ಇಂದೇ ನಿಮ್ಮ ಮನೆಗೆ ಬರಲಿ
ಏಜೆಂಟರಿಲ್ಲದ ಕಡೆ ಏಜೆಂಟರು ಬೆ
ವ್ಯವಸ್ಥಾಪಕ ಸಂಪಾದಕ
6 ನೇ ಮೇನ್, ವಿ ವಿ ಮೋಹಲ್ಲಾ
ಮೈಸೂರು - 2

ಇದೀಗ ಹೊರ ಬಂದಿ
ಒಡಲಾಳ 4-
—ದೇವನೂರ ಮಹಾದೇವ
ಸ್ವರೂಪ 3-
ನಿಗೂಢ ಮನುಷ್ಯರು 3-
—ಪೂರ್ಣಚಂದ್ರ ತೇಜಸ್ವಿ
ಬಾಲಂಗೋಚಿ 3-
—ಕಿಕ್ಕೇರಿ ನಾರಾಯಣ
ಪ್ರೇಮಕೋಟೆಯಲ್ಲಿ ಪ್ರಣಯಿಗಳು 6-
ಪ್ರತಿಗಳಿಗೆ : ನೆಲಮನೆ ಪ್ರಕಾಶ
ಕೆ. ಜಿ. ಕೊಪ್ಪಲು ಮೈಸೂರು

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್, ಗೋವಿಂದಯ್ಯ ಅ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-570008.